ಮಹಾಕೂಟದ ಶಾಸನಗಳು ಮತ್ತು ದೇವಾಲಯಗಳು

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು

ಆಸಂಗೆಪ್ಪ ಭೀ. ಕೂಚಲ

ಮಾರ್ಗದರ್ಶಕರು

ಡಾ. ಎಂ. ಕೊಟ್ರೇಶ್

ಅಧ್ಯಾಪಕರು ಮತ್ತು ಮುಖ್ಯಸ್ಥರು

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೮-೦೯

722

722

[illegible]

ಮಹಾಕೂಟದ ಶಾಸನಗಳು ಮತ್ತು ದೇವಾಲಯಗಳು

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು

ಆಸಂಗೆಪ್ಪ ಭೀ. ಕೂಚಲ

ಮಾರ್ಗದರ್ಶಕರು

ಡಾ. ಎಂ. ಕೊಟ್ರೇಶ್

ಅಧ್ಯಾಪಕರು ಮತ್ತು ಮುಖ್ಯಸ್ಥರು

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೮-೦೯

ಮಾರ್ಗದರ್ಶಕರ ದೃಢೀಕರಣ ಪತ್ರ

ಮಹಾಕೂಟದ ಶಾಸನಗಳು ಮತ್ತು ದೇವಾಲಯಗಳು ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಆಸಂಗೆಪ್ಪ ಭೀ. ಕೂಚಲ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 08-10-2009

ಸ್ಥಳ : ವಿದ್ಯಾರಣ್ಯ

(ಡಾ. ಎಂ.ಕೊಟ್ರೇಶ್)
ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕರ ಪ್ರಮಾಣಪತ್ರ

ಮಹಾಕೂಟದ ಶಾಸನಗಳು ಮತ್ತು ದೇವಾಲಯಗಳು ಎಂಬ ಸಂಪ್ರಬಂಧವನ್ನು **ಡಾ. ಎಂ. ಕೊಟ್ರೇಶ್** ಅಧ್ಯಾಪಕರು ಶಾಸನಶಾಸ್ತ್ರ ವಿಭಾಗ, ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂಫಿಲ್, ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲ -ವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 08-10-09

ಸ್ಥಳ : ವಿದ್ಯಾರಣ್ಯ

(ಆಸಂಗೆಪ್ಪ ಭೀ. ಕೂಚಲ)

ಸಂಶೋಧಕರು

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಒಂದು ನಾಡಿನ ಚರಿತ್ರೆ ಎಂದರೆ, ಜನ ಸಮಷ್ಠಿಯ ಚರಿತ್ರೆ.[೧] ಅಂದರೆ ಜನರ ಜೀವನ ಸಿದ್ಧಾಂತಗಳನ್ನು ಬದುಕಿನ ಮೌಲ್ಯಗಳನ್ನು ಪರಿಚಯಿಸುತ್ತದೆ. ಒಂದು ಐತಿಹಾಸಿಕ ಪ್ರದೇಶದ ಅಧ್ಯಯನ ಆ ನಾಡಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮೌಲ್ಯಗಳನ್ನು ತಿಳಿದುಕೊಳ್ಳಲು, ಜನಜೀವನವನ್ನು ವಿಕಸನಗೊಳಿಸಲು ಹೆಚ್ಚು ಸಹಾಯಕಾರಿ. ಭಾರತದ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನಾರಚಿಸುವ ನಿಟ್ಟಿನಲ್ಲಿ ಕನ್ನಡ ನಾಡಿನ ಕೊಡುಗೆ ಅಪಾರವಾಗಿದೆ. ಈ ನಾಡು ಒಂದು ಕಾಲದಲ್ಲಿ ಪೂರ್ವ–ಪಶ್ಚಿಮವಾಗಿ ಬಂಗಾಳ ಕೊಲ್ಲಿಯಿಂದ ಅರಬ್ಬಿ ಸಮುದ್ರದವರೆಗೂ, ದಕ್ಷಿಣ–ಉತ್ತರವಾಗಿ ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೂ ವಿಶಾಲವಾಗಿತ್ತು. ಈ ನಾಡಿನ ಇತಿಹಾಸ ಪೂರ್ವ ಮತ್ತು ಇತಿಹಾಸ ಪುರಾತತ್ವ ಅವಶೇಷಗಳು ಪ್ರದೇಶದಾದ್ಯಂತ ಹರಡಿವೆ. ಇವು ಹಲವು ಶತಮಾನಗಳಲ್ಲಿ ಮಾನವನು ನಡೆದು ಬಂದ ದಾರಿಯ ಕಿರುನೋಟವನ್ನು ಸ್ಪಷ್ಟಪಡಿಸುತ್ತವೆ. ಹೀಗಾಗಿ ಈ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಪುನಾರಚಿಸುವ ನಿಟ್ಟಿನಲ್ಲಿ ಈ ಪುರಾತತ್ವ ಅವಶೇಷಗಳ ಪಾತ್ರ ಬಹು ಮುಖ್ಯವೆನಿಸುತ್ತದೆ. ಅಂತಹ ಪುರಾತತ್ವ ಅವಶೇಷಗಳ ಅನ್ವೇಷಣೆ, ಶೋಧನೆ, ಸಂಗ್ರಹಣೆ, ವಿಶ್ಲೇಷಣೆ ಮತ್ತು ಪ್ರಕಟಣೆ ಒಂದು ನಾಡಿನ ನರನಾಡಿಗಳೆನಿಸಿದ ಗ್ರಾಮಗಳಿಂದ ಪ್ರಾರಂಭವಾದಾಗ ಮಾತ್ರ ಆ ನಾಡಿನ ಸಾಂಸ್ಕೃತಿಕ ಇತಿಹಾಸದ ಬಹುಮುಖ ಚಿತ್ರವನ್ನು ವಸ್ತುನಿಷ್ಠವಾಗಿ ಪುನಾರಚಿಸಬಹುದು. ಈ ವರೆಗೂ ತಿಳಿದು ಬಂದಿರುವ ಇತಿಹಾಸದಲ್ಲಿ ಕಳೆದುಹೋದ ಕೊಂಡಿಗಳನ್ನು ಕಂಡುಕೊಳ್ಳಬಹುದು. ಆ ನಿಟ್ಟಿನಲ್ಲಿ ಕರ್ನಾಟಕದ ಸಂಸ್ಕೃತಿಯ ಹಿರಿಮೆಯನ್ನು ತೋರಿಸಿದ ಹಲವಾರು ಪ್ರಾಚೀನ ಸ್ಥಳಗಳಲ್ಲಿ 'ದಕ್ಷಿಣಕಾಶಿ' ಎಂದು ಪ್ರಸಿದ್ಧವಾಗಿರುವ ಮಹಾಕೂಟವು ಒಂದು. ಪ್ರಸ್ತುತ ಮಹಾಕೂಟವು ಬಾದಾಮಿ ಕ್ಷೇತ್ರಕ್ಕೆ ಒಳಪಡುವುದರಿಂದ ಮಹಾಕೂಟದ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಒಂದಾದ ಶಾಸನ ಮತ್ತು ದೇವಾಲಯಗಳ ಅಧ್ಯಯನ ಮಾಡುವುದು ಅರ್ಥಪೂರ್ಣ. ಮಹಾಕೂಟವು ಬಾದಾಮಿ ಕ್ಷೇತ್ರಕ್ಕೆ ಒಳಪಟ್ಟರೂ ಪ್ರತ್ಯೇಕವಾಗಿ ಮಹಾಕೂಟದ ಶಾಸನ ಮತ್ತು ದೇವಾಲಯಗಳ ಕುರಿತು ಅಧ್ಯಯನವಾಗದೇ ಇರುವುದು ಪ್ರಸ್ತುತ ಈ ಅಧ್ಯಯನಕ್ಕೆ ಮೂಲ ಕಾರಣವಾಗಿದೆ.

ಕನ್ನಡ ನಾಡಿನಲ್ಲಿ ಕಳೆದ ಶತಮಾನದ ಉತ್ತರಾರ್ಧದಿಂದೀಚೆಗೆ ದೇವಾಲಯಗಳನ್ನು ಮತ್ತು ಶಾಸನಗಳನ್ನು ಗಮನಿಸುವ ದೃಷ್ಟಿಕೋನ ಗಮನಾರ್ಹವಾದ ರೀತಿಯಲ್ಲಿ ಬದಲಾಗುತ್ತಿದೆ. ಹೀಗಾಗಿ ಈ ನಾಡಿನ ದೇವಾಲಯಗಳ ಮತ್ತು ಶಾಸನಗಳ ಕುರಿತು ಹೊಸ ಹೊಸ ವಿಚಾರಗಳು ಬೆಳಕು ಕಾಣುತ್ತಿವೆ. ಈ ನಿಟ್ಟಿನಲ್ಲಿ ಒಂದು ಶೈಲಿಯ ದೇವಾಲಯಗಳನ್ನು ಕೇಂದ್ರವಾಗಿಟ್ಟುಕೊಂಡು ಅವುಗಳ ನಿರ್ಮಾಣದ ಪ್ರಾರಂಭ ಮತ್ತು ಬೆಳವಣಿಗೆಯನ್ನು ಅಧ್ಯಯನ ಮಾಡುವುದು, ಒಂದು ಜಿಲ್ಲೆ, ತಾಲೂಕು, ಹೋಬಳಿ, ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಅಲ್ಲಿ ಕಾಲಾಂತರದಲ್ಲಿ ನಿರ್ಮಾಣವಾಗುತ್ತ ಬಂದ ದೇವಾಲಯಗಳ

ವಾಸ್ತು ಲಕ್ಷಣಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡುವುದು ಒಂದು ಅರಸು, ಮಹಾಮಂಡಳೇಶ್ವರ ಮಹಾಸಾಮಂತ ಮನೆತನದ ದೇವಾಲಯಗಳನ್ನು ಅಥವಾ ಶಾಸನಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡುವುದು, ಒಂದು : ಅರಸು ಮನೆತನದ ಶಾಸನಗಳನ್ನು ಕೇಂದ್ರವಾಗಿಟ್ಟುಕೊಂಡು ಅವುಗಳಲ್ಲಿ ಉಲ್ಲೇಖಿತ ದೇವಾಲಯಗಳನ್ನು, ವಿವಿಧ ಮಗ್ಗಲುಗಳಿಂದ ಅಧ್ಯಯನ ಮಾಡುವುದು, ಎರಡು : ಪ್ರಾಚೀನ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿರುವ ದೇವಾಲಯಗಳನ್ನು ಅಥವಾ ಶಾಸನಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದು, ಒಂದು ಧರ್ಮದ ದೇವಾಲಯಗಳನ್ನು ಅಥವಾ ಶಾಸನಗಳನ್ನು ಕೇಂದ್ರವಾಗಿಟ್ಟುಕೊಂಡು ಅವುಗಳನ್ನು ಆ ಧರ್ಮದ ಧಾರ್ಮಿಕ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು. ಹೀಗೆ ದೇವಾಲಯಗಳು ಮತ್ತು ಶಾಸನಗಳಿಗೆ ಸಂಬಂಧಿಸಿದಂತೆ ವಿವಿಧ ಅಧ್ಯಯನಗಳು ನಡೆದಿವೆ. ಮತ್ತು ನಡೆಯುತ್ತಿವೆ. ಈ ಬಗೆಯಲ್ಲಿ ಸೀಮಿತ ಪ್ರದೇಶ ಅಥವಾ ವಿಷಯವನ್ನು ಆಯ್ದುಕೊಂಡು ಅಧ್ಯಯನ ಕೈಗೊಂಡರೆ ಆ ಪ್ರದೇಶದ ಅಥವಾ ವಿಷಯಕ್ಕೆ ಸಂಬಂದಿಸಿದಂತೆ ದೊರೆಯುವ ಕುರುಹುಗಳನ್ನೆಲ್ಲ ಒಂದೆಡೆಗೆ ಕಲೆಹಾಕಿ ಅವುಗಳನ್ನು ಕೂಲಂಕುಷವಾಗಿ ಮತ್ತು ವಸ್ತುನಿಷ್ಠವಾಗಿ ವಿಶ್ಲೇಷಣೆ ಮಾಡಲು ಹೆಚ್ಚು ಅವಕಾಶ ದೊರೆಯುತ್ತದೆ. ಆ ಹಿನ್ನೆಲೆಯಲ್ಲಿ ಪ್ರಸ್ತುತ ಮಹಾಕೂಟವನ್ನು ಕೇಂದ್ರವಾಗಿಟ್ಟುಕೊಂಡು "ಮಹಾಕೂಟದ ಶಾಸನಗಳು ಮತ್ತು ದೇವಾಲಯಗಳು" ಎಂಬ ಶೀರ್ಷಿಕೆಯಡಿಯಲ್ಲಿ ಈ ಪ್ರದೇಶದ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ :

ಈ ವರೆಗೆ ಮಹಾಕೂಟ ಕ್ಷೇತ್ರಕ್ಕೆ ಸಂಬಂದಿಸಿದಂತೆ ಪ್ರಕಟವಾಗಿರುವ ಕೃತಿಗಳು ಮತ್ತು ಲೇಖನಾದಿಗಳಲ್ಲಿ ಮಹಾಕೂಟ ಕ್ಷೇತ್ರವು ಒಂದು ಭಾಗವಾಗಿ ಸಾಂದರ್ಭಿಕ ಉಲ್ಲೇಖಗಳಿಗೆ ಮಾತ್ರ ಸೀಮಿತವಾಗಿ ಕಾಣುತ್ತದೆ. ಆದುದರಿಂದ ಮಹಾಕೂಟ ಪ್ರದೇಶವನ್ನು ಕ್ಷೇತ್ರಕಾರ್ಯ-ಮೂಲಕ ಅಧ್ಯಯನಕ್ಕೆ ಒಳಪಡಿಸುವುದು ಸಾಧ್ಯವಿದೆ ಎನಿಸಿತು. ಆ ಮೂಲಕ ಸೀಮಿತ ಪ್ರದೇಶದ ಪುರಾತತ್ವೀಯ ಒಳಹೊರಗುಗಳ ವಿಸ್ತೃತ ಅಧ್ಯಯನಕ್ಕೆ ಅವಕಾಶವಾಗುವುದೆಂದು ಸ್ಪಷ್ಟವಾಯಿತು. ಆ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧದ ಮುಖ್ಯ ಉದ್ದೇಶ ಮಹಾಕೂಟದ ಶಾಸನಗಳು ಮತ್ತು ದೇವಾಲಯಗಳನ್ನು ಹಾಗೂ ಶಿಲ್ಪಗಳನ್ನು ಕ್ಷೇತ್ರಕಾರ್ಯ ಆಧಾರದ ಮೇಲೆ ಅಧ್ಯಯನ ಮಾಡಿ ಆ ಪ್ರದೇಶದ ಸಾಂಸ್ಕೃತಿಕ ಅಧ್ಯಯನವನ್ನು ಮುಂದಿಡುವುದಾಗಿದೆ. ಈ ಪ್ರದೇಶದ ಶಾಸನಗಳು ಮತ್ತು ದೇವಾಲಯಕ್ಕೆ ಸಂಬಂಧಿಸಿದ ಈ ವರೆಗಿನ ಅಧ್ಯಯನಗಳು ಕೆಲವು ಅಂಶಗಳಿಗೆ ಮಾತ್ರ ಮಹತ್ವ ಕೊಟ್ಟಿವೆ. ಅಲ್ಲದೆ ಶಾಸನ ಅಧ್ಯಯನ ಮತ್ತು ದೇವಾಲಯ ವಾಸ್ತು ಸ್ವರೂಪದ ಅಧ್ಯಯನದ ಮೂಲಕ ದೇವಾಲಯಗಳ ಪ್ರದೇಶಗಳನ್ನು ಸ್ಪಷ್ಟವಾಗಿ ಗುರುತಿಸುವ ಪ್ರಯತ್ನ ಅಷ್ಟಾಗಿ ಆಗಿಲ್ಲ. ಈ ಕೊರತೆಗಳನ್ನು ನೀಗಿಸುವ ಪ್ರಯತ್ನವನ್ನು

ಇಲ್ಲಿ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ :

ಕರ್ನಾಟಕದ ಸಂಸ್ಕೃತಿಯು ಚಾಲುಕ್ಯರ ಕಾಲದಲ್ಲಿ ಪೆರ್ದ್ದೊರೆಯಾಗಿ ಪ್ರವಹಿಸಿತು. ಆ ತೊರೆಯ ಮೂಲವನ್ನು ಹುಡುಕುತ್ತ ನಾವು ಹಳೆಯ ಶಿಲಾಯುಗದವರೆಗೂ ಹಿಂದಕ್ಕೆ ಹೋಗಬೇಕಾಗುತ್ತದೆ.[೨] ಒಂದು ಗುಡ್ಡದ ಕಾರಣದಿಂದಾಗಿ ಬೇರ್ಪಟ್ಟಿರುವ ಮಹಾಕೂಟವು ರಾಜಧಾನಿ ಸ್ಥಳವೆಂದು ಕಂಡುಬರುತ್ತಿದೆ.[೩] ಚಾಲುಕ್ಯರ ರಾಜಕೀಯ ಪತನದಿಂದಾಗಿ ಬಾದಾಮಿ ರಾಜಧಾನಿ ಪಟ್ಟವನ್ನು ಕಳೆದುಕೊಂಡರೂ ನಾಡಿನ ಪ್ರಧಾನ ಸಾಂಸ್ಕೃತಿಕ ಸ್ಥಳವೆಂಬ ಮನ್ನಣೆಗೆ ಇಂದಿಗೂ ಪಾತ್ರವಾಗಿದೆ. ಬಾದಾಮಿ ಕ್ಷೇತ್ರವನ್ನು ಒಳಗೊಂಡ ಮಹಾಕೂಟವು ಪಸರಿಸಿದ ಶಾಸನಗಳ ಮತ್ತು ದೇವಾಲಯಗಳ ಕುರುಹುಗಳು ನಾಡಿನ ಅಮೂಲ್ಯ ಸಂಪತ್ತುಗಳಾಗಿವೆ. ಇಂತಹ ಅಧ್ಯಯನವನ್ನು ಪ್ರತ್ಯೇಕವಾಗಿ ಸೀಮಿತವಾಗಿಸಿಕೊಂಡು ಅಧ್ಯಯನದ ವ್ಯಾಪ್ತಿಯನ್ನು ಮಾಡಲಾಗಿದೆ. ಮಹಾಕೂಟದ ಐತಿಹಾಸಿಕ ಅಧ್ಯಯನವನ್ನು ಪೂರ್ವಾಭಿಮುಖವಾಗಿ ನಂದಿಕೇಶ್ವರದವರೆಗೆ ಪಶ್ಚಿಮಾಭಿಮುಖವಾಗಿ ಬಾದಾಮಿಯವರೆಗೆ ಉತ್ತರಾಭಿಮುಖವಾಗಿ ಕುಟಕನಕೇರಿಯವರೆಗೆ ದಕ್ಷಿಣಾಭಿಮುಖವಾಗಿ ಶಿವಯೋಗ ಮಂದಿರದವರೆಗೆ ಈ ಅಧ್ಯಯನದ ವ್ಯಾಪ್ತಿ ಮಾಡಿಕೊಳ್ಳಲಾಗಿದೆ.

ಅಧ್ಯಯನದ ವಿಧಾನ :

ಈ ವರೆಗಿನ ಅಧ್ಯಯನ ಪ್ರಮುಖ ರಾಜ ಮನೆತನಗಳ ಬಗ್ಗೆ ನಾಡು-ನುಡಿ ಸಂಸ್ಕೃತಿಯ ಬಗ್ಗೆ ಹಲವಾರು ಪ್ರಕಟಣೆಗಳು ಹೊರಬಂದಿವೆ. ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಅದರಲ್ಲೂ ಹೆಚ್ಚಾಗಿ ಬಾದಾಮಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಆಕರಗಳಲ್ಲಿ ಹಾಗೂ ಅನುಷಂಗಿಕ ಆಕರಗಳಲ್ಲಿ ಸಾಕಷ್ಟು ಮಾಹಿತಿಗಳು ದೊರಕುತ್ತವೆ. ಪ್ರಾಥಮಿಕ ಆಕರಗಳಲ್ಲಿ ಮುಖ್ಯವಾಗಿ ಭಾರತೀಯ ಪುರಾತತ್ವ ಶಾಸನಶಾಸ್ತ್ರದ ವಾರ್ಷಿಕ ವರದಿಗಳಲ್ಲಿ, ದಕ್ಷಿಣ ಭಾರತೀಯ ಶಾಸನಶಾಸ್ತ್ರದ ವರದಿಗಳಲ್ಲಿ, ಚಾಲುಕ್ಯರ ಸಂಶೋಧನಾ ಸಂಪುಟಗಳಲ್ಲಿ ಶಾಸನಗಳ, ಉತ್ಖನನಗಳ ಹಾಗೂ ಸ್ಮಾರಕಗಳ ಕುರಿತು ಮಾಹಿತಿಗಳು ದೊರಕುತ್ತವೆ. ಬಾದಾಮಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವಾರು ವಿದ್ವಾಂಸರುಗಳ ಗ್ರಂಥಗಳು, ಲೇಖನಗಳು ಈಗಾಗಲೇ ಪ್ರಕಟವಾಗಿವೆ. ಎಸ್. ರಾಜಶೇಖರ ಅವರು "ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ" ಕೃತಿಯಲ್ಲಿ ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪದ ಬಗ್ಗೆ ಪರಿಚಯಿಸಿದ್ದಾರೆ.[೪] ಕೆ.ಬಿ.ಶಿವತಾರಕ್ ಅವರು ತಮ್ಮ "ಕರ್ನಾಟಕದ ಪುರಾತತ್ವ ನೆಲೆಗಳು" ಕೃತಿಯಲ್ಲಿ ಕಳೆದ ಶತಮಾನದ ಪೂರ್ವಾರ್ಧದಿಂದೀಚೆಗೆ ಕರ್ನಾಟಕದಲ್ಲಿ ಶೋಧಿತವಾಗಿ ವರದಿಯಾಗಿರುವ ವಿವಿಧ ಶಿಲಾಯುಗ ಸಂಸ್ಕೃತಿಗಳಿಗೆ ಸಂಬಂದಿಸಿದ ವಸತಿ ನೆಲೆಗಳನ್ನು ಒಂದೆಡೆಗೆ ಕಲೆ ಹಾಕಿದ್ದಾರೆ. ಅದರಲ್ಲಿ ಮಹಾಕೂಟದ ಪರಿಸರದಲ್ಲಿ ಬೆಳಕಿಗೆ ಬಂದಿರುವ

ಇತಿಹಾಸ ಆರಂಭ ಯುಗದ ನೆಲೆಗಳನ್ನು ಸಂಗ್ರಹಿಸಿದ್ದಾರೆ.[೫] ಎ.ಎಂ. ಅಣ್ಣಿಗೇರಿ ಅವರು ತಮ್ಮ "ಬಾದಾಮಿಯ ಶಿಲ್ಪಕಲೆ" ಎಂಬ ಕೃತಿಯಲ್ಲಿ ದೇವಾಲಯಗಳು ಮತ್ತು ಶಿಲ್ಪಗಳನ್ನು ಪರಿಚಯಿಸಿದ್ದಾರೆ.[೬] ಕರವೀರಪ್ರಭು ಕ್ಯಾಲಕೊಂಡ ಅವರು ತಮ್ಮ "ಚಾಲುಕ್ಯ ವಾಸ್ತುಶಿಲ್ಪ ವೈಭವ" ಕೃತಿಯಲ್ಲಿ ಚಾಲುಕ್ಯರ ದೇವಾಲಯಗಳ ಶೈಲಿ ಮತ್ತು ಶಿಲ್ಪಗಳನ್ನು ಪರಿಚಯಿಸಿದ್ದಾರೆ.[೭] ಶೀಲಾಕಾಂತ ಪತ್ತಾರ ಅವರು ತಮ್ಮ "ಬಾದಾಮಿ ಸಾಂಸ್ಕೃತಿಕ ಅಧ್ಯಯನ" ಕೃತಿಯಲ್ಲಿ ದೇವಾಲಯಗಳು ಮತ್ತು ಶಿಲ್ಪಗಳ ಬಗ್ಗೆ ಪರಿಚಯಿಸಿದ್ದಾರೆ.[೮] ಎಂ. ಚಿದಾನಂದಮೂರ್ತಿ ಅವರು ತಮ್ಮ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಕೃತಿಯಲ್ಲಿ ಮಹಾಕೂಟದ ಶಾಸನಗಳ ಬಗ್ಗೆ ಅವರು ಪರಿಚಯಿಸಿದ್ದಾರೆ.[೯] ಇನ್ನೂ ಮುಂತಾದ ವಿದ್ವಾಂಸರುಗಳು ಬಾದಾಮಿ ಕ್ಷೇತ್ರಕ್ಕೆ ಸಂಬಂಧಿಸಿದಂತ ಪ್ರಕಟಣೆಗಳನ್ನು ಹೊರ ತಂದಿದ್ದಾರೆ. ಬಾದಾಮಿ ಕ್ಷೇತ್ರಕ್ಕೆ ಸಂಬಂಧಿಸಿದ ದೇವಾಲಯಗಳು, ಶಾಸನಗಳು, ನಾಣ್ಯಗಳು ಕುರಿತು ಹಲವಾರು ಸಂಶೋಧನಾ ಲೇಖನಗಳು, ಸಂಶೋಧನಾ ಗ್ರಂಥಗಳು ಪ್ರಕಟವಾದಾಗ್ಯೂ ಮಹಾಕೂಟದ ಬಗ್ಗೆ ಇನ್ನೂ ಪ್ರಕಟವಾಗದ ಶಾಸನ ಮತ್ತು ದೇವಾಲಯಗಳು ಸಾಕಷ್ಟು ಇವೆ. ಈ ಒಂದು ಹಿನ್ನೆಲೆಯನ್ನು ಆಧರಿಸಿ ಮಹಾಕೂಟದ ಶಾಸನ ಮತ್ತು ದೇವಾಲಯಗಳ ಕುರಿತಾದ ವಿಚಾರಗಳನ್ನು ಮರು ಪರಿಶೀಲಿಸಿ ಸಮಗ್ರವಾಗಿ ವಿವೇಚನೆ ಮಾಡುವುದಾಗಿದೆ.

ಅಧ್ಯಯನದ ಸ್ವರೂಪ :

ಈ ಮೇಲೆ ಅಧ್ಯಯನ ವಿಧಾನದಲ್ಲಿ ಗಮನಿಸಿದಂತೆ ಹಲವು ವಿಧಾನಗಳನ್ನು ಅನುಸರಿಸಿ ಪ್ರತ್ಯೇಕಿಸಲಾದ ವಸ್ತು–ವಿಷಯಗಳನ್ನು ವ್ಯವಸ್ಥಿತವಾದ ವಿಶ್ಲೇಷಣೆ ಮತ್ತು ನಿರೂಪಣೆಯ ದೃಷ್ಟಿಯಿಂದ ಪ್ರಸ್ತುತ ಸಂಶೋಧನ ಪ್ರಬಂಧವನ್ನು ಒಟ್ಟು ಆರು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ.

"ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ" ಎಂಬ ಒಂದನೆಯ ಅಧ್ಯಾಯದಲ್ಲಿ ಪ್ರಾಸ್ತವಿಕ ವಿಚಾರಗಳೊಂದಿಗೆ ಶಾಸನಗಳು ಮತ್ತು ದೇವಾಲಯಗಳ ಮಹತ್ವ ಉದ್ದೇಶ ಅಧ್ಯಯನದ ವ್ಯಾಪ್ತಿ ಮತ್ತು ಪ್ರಬಂಧದ ಸ್ವರೂಪವನ್ನು ವಿಶದಪಡಿಸಲಾಗಿದೆ.

"ಮಹಾಕೂಟದ ಇತಿಹಾಸ" ಎಂಬ ಎರಡನೆಯ ಅಧ್ಯಾಯದಲ್ಲಿ ಭೌಗೋಳಿಕ ಪರಿಸರ ಮತ್ತು ಪದನಿಷ್ಪತ್ತಿ, ಪೌರಾಣಿಕ ಹಿನ್ನೆಲೆ ಹಾಗೂ ಐತಿಹಾಸಿಕ ಹಿನ್ನೆಲೆಯನ್ನು ಚರ್ಚಿಸಲಾಗಿದೆ.

"ಶಾಸನ ವೈವಿಧ್ಯತೆ" ಎಂಬ ಮೂರನೆಯ ಅಧ್ಯಾಯದಲ್ಲಿ ದಾನಶಾಸನಗಳು, ವೀರಶಾಸನಗಳು ಮತ್ತು ಇತರೆ ಶಾಸನಗಳನ್ನು ಚರ್ಚಿಸಲಾಗಿದೆ.

"ವಾಸ್ತುಶಿಲ್ಪ" ಎಂಬ ನಾಲ್ಕನೆಯ ಅಧ್ಯಾಯದಲ್ಲಿ ದೇವಾಲಯಗಳು ಅಂದರೆ ಕನ್ನಡನಾಡಿನ ಸಂದರ್ಭದಲ್ಲಿನ ಶೈವ ಮತ್ತು ವೈಷ್ಣವ ದೇವಾಲಯಗಳ ಕಾಲಮಾನ,

ನಿರ್ಮಾತೃ ಮತ್ತು ಅವುಗಳ ವಾಸ್ತು ಲಕ್ಷಣಗಳನ್ನು ಪರಿಗಣಿಸಲಾಗಿದೆ. ಅದೇ ರೀತಿ ಶಿಲ್ಪಗಳು ವಿವಿಧ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳ ನಿರ್ಮಾಣದ ಪ್ರಾರಂಭ ಮತ್ತು ಬೆಳವಣಿಗೆಯ ಪರಿಚಯದೊಂದಿಗೆ ಮಹಾಕೂಟ ಪರಿಸರದಲ್ಲಿನ ದೇವಾಲಯಗಳಲ್ಲಿ ಮತ್ತು ಅವುಗಳ ಪರಿಸರದಲ್ಲಿರುವ ಶಿಲ್ಪಗಳ ಕಾಲಮಾನ ಪ್ರತಿಮಾ ಲಕ್ಷಣಗಳನ್ನು ಚರ್ಚಿಸಲಾಗಿದೆ.

"ವಾಸ್ತು ವೈಶಿಷ್ಟ್ಯ" ಎಂಬ ಐದನೆಯ ಅಧ್ಯಾಯದಲ್ಲಿ ವಾಸ್ತುಶೈಲಿಯ ದೇವಾಲಯಗಳ ಪರಿಚಯವನ್ನು ಇಲ್ಲಿ ಮಾಡಲಾಗಿದೆ. ಅಂದರೆ ದ್ರಾವಿಡಶೈಲಿಯ ದೇವಾಲಯಗಳು ಮತ್ತು ನಾಗರಶೈಲಿಯ ದೇವಾಲಯಗಳನ್ನು ಪರಿಚಯಿಸುವುದಾಗಿದೆ.

'ಸಮಾರೋಪ' ಎಂಬ ಆರನೆಯ ಅಧ್ಯಾಯದಲ್ಲಿ ಈ ಮೇಲಿನ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾದ ಮಾಹಿತಿಗಳಿಂದ ರೂಪಗೊಂಡ ನಿರ್ಣಯಗಳಿಗೆ ಮಹತ್ವ ನೀಡಲಾಗಿದೆ.

ಈ ಪ್ರಬಂಧದ ಕೊನೆಯಲ್ಲಿ ಪ್ರಸ್ತುತ ಸಂಶೋಧನ ಅಧ್ಯಯನದಲ್ಲಿ ನೆರವಾದ ಕೃತಿಗಳು, ಲೇಖನಗಳ ಪಟ್ಟಿಯನ್ನು ನೀಡಲಾಗಿದೆ. ಕೊನೆಯಲ್ಲಿ ಶಾಸನಪಾಠ, ದೇವಾಲಯಗಳ ತಳವಿನ್ಯಾಸ ನಕ್ಷೆ, ಛಾಯಾಚಿತ್ರಗಳನ್ನು ಕೊಡಲಾಗಿದೆ.

ಅಡಿಟಿಪ್ಪಣಿ

೧. ಶೀಲಾಕಾಂತ ಪತ್ತಾರ, ೨೦೦೦, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ ಕ.ವಿ.ವಿ ಹಂಪಿ, ಪು-೧

೨. ಅದೇ, ಪು-೨

೩. ಕರ್ನಾಟಕ ಸರ್ಕಾರ, ೧೯೯೨, ಕರ್ನಾಟಕ ಪರಂಪರೆ ಭಾಗ-೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಪು-೨೬೪

೪. ರಾಜಶೇಖರ ಎಸ್. ೧೯೮೮, ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಶನ್ಸ್ ಧಾರವಾಡ

೫. ಶಿವತಾರಕ್ ಕೆ.ಬಿ. ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ ಕ.ವಿ.ವಿ. ಹಂಪಿ

೬. ಅಣ್ಣಿಗೇರಿ ಎ.ಎಂ. ೧೯೭೭, ಬಾದಾಮಿಯ ಶಿಲ್ಪಕಲೆ, ಭವಾನೀ ಪ್ರಕಾಶನ, ಧಾರವಾಡ

೭. ಕರವೀರಪ್ರಭು ಕ್ಯಾಲಕೊಂಡ, ೧೯೯೭, ಚಾಲುಕ್ಯ ವಾಸ್ತುಶಿಲ್ಪ ವೈಭವ, ಪ್ರಸಾರಾಂಗ ಕ.ವಿ.ವಿ ಹಂಪಿ

೮. ಶೀಲಾಕಾಂತ ಪತ್ತಾರ, ೨೦೦೦, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ ಕ.ವಿ.ವಿ.ಹಂಪಿ

೯. ಚಿದಾನಂದಮೂರ್ತಿ ಎಂ, ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್‌ಹೌಸ್, ಬೆಂಗಳೂರು

ಅಧ್ಯಾಯ : ಎರಡು


ಮಹಾಕೂಟದ ಇತಿಹಾಸ

೨.೧. ಭೌಗೋಳಿಕ ಪರಿಸರ ಮತ್ತು ಪದನಿಷ್ಪತ್ತಿ


೨.೨. ಪೌರಾಣಿಕ ಹಿನ್ನೆಲೆ

೨.೩. ಐತಿಹಾಸಿಕ ಹಿನ್ನೆಲೆ


ಬಾಗಲಕೋಟೆ ಜಿಲ್ಲೆಯ ನಕ್ಷೆ



ಬಾದಾಮಿ ತಾಲೂಕಿನ ನಕ್ಷೆ



ಮಹಾಕೂಟದ ನಕ್ಷೆ



೨.೧. ಭೌಗೋಳಿಕ ಪರಿಸರ ಮತ್ತು ಪದನಿಷ್ಪತ್ತಿ :

ಒಂದು ಜನಾಂಗದ ಸಂಸ್ಕೃತಿಯು ಅದು ನೆಲೆವೂರಿದ ಭೌಗೋಳಿಕ ಪರಿಸರವನ್ನು ಅವಲಂಬಿಸಿರುತ್ತದೆ. ಇತಿಹಾಸಕ್ಕೆ ಭೂಗೋಳವೇ ನೆಲೆ[೧]. ಆದ್ದರಿಂದ ಮಹಾಕೂಟದ ಪರಿಸರವನ್ನು ಭೌಗೋಳಿಕವಾಗಿ ಗಮನಿಸೋಣ. ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪತ್ತಿನ ಹಿನ್ನೆಲೆಯಿಂದ ಪ್ರಭಾವಿತವಾಗಿರುತ್ತವೆ. ಮಾನವನು ಸ್ವಾಭಾವಿಕವಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಅವಲಂಭಿಸಿರುತ್ತಿದ್ದನು. ನೆಲದ ಗುಣ, ಖನಿಜಸಂಪತ್ತು, ನದಿಗಳು, ಪರ್ವತಗಳು, ಮರಳುಗಾಡು, ತೀರಪ್ರದೇಶ ಮೊದಲಾದ ಸಂಪನ್ಮೂಲಗಳು ಅಲ್ಲಿನ ನಿವಾಸಿಗಳ ಕಸುಬು, ಉಡುಗೆ, ತೊಡುಗೆ, ಧಾರ್ಮಿಕ ಸ್ವಭಾವ, ಆಚಾರ-ವಿಚಾರಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ಹೀಗಾಗಿ ಭೌಗೋಳಿಕ ಸನ್ನಿವೇಶಗಳು ಇತಿಹಾಸದೊಂದಿಗೆ ಬಹು ನಿಕಟವಾದ ಸಂಬಂಧ ಹೊಂದಿರುವುದು ಸ್ಪಷ್ಟವಾಗುತ್ತದೆ.

ಮಹಾಕೂಟವು ೧೫°-೫೫' ಉತ್ತರ ಅಕ್ಷಾಂಶ ಹಾಗೂ ೭೫°-೪೧' ಪೂರ್ವರೇಖಾಂಶಕ್ಕೆ ಹೊಂದಿಕೊಂಡಿದೆ. ಕರ್ನಾಟಕ ರಾಜ್ಯದ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿದೆ. ಭೌಗೋಳಿಕವಾಗಿ ಮಹಾಕೂಟವು ಕಲಾದಗಿ ವರ್ಗದ ಬಂಡೆಗಲ್ಲುಗಳಿಂದ ಆವೃತ್ತವಾಗಿದೆ. ಇವು ಕ್ವಾರ್ಟ್‌ಜೈಟ್, ಉಸುಕುಕಲ್ಲು, ಕಾಂಗ್ಲೋಮರೇಟ್, ಸುಣ್ಣದಕಲ್ಲು, ಜೇಡಿಯ ಚಿಪ್ಪುಕಲ್ಲುಗಳನ್ನು ಒಳಗೊಂಡಿದೆ. ಅವುಗಳಲ್ಲಿ ಮಹಾಕೂಟವು ವಿಶೇಷವಾಗಿ ಕಂಡು ಬರುವ ಶಿಲಾಪ್ರಕಾರಗಳೆಂದರೆ ಕ್ವಾರ್ಟಜೈಟ್ ಹಾಗೂ ಉಸುಕು ಕಲ್ಲುಗಳು.[೨] ಮಹಾಕೂಟದ ಶಿಲಾವರ್ಗವು ಕಲಾದಗಿ ಶಿಲಾವರ್ಗದ ಮೇಲೆ ಹೊಂದಿಕೊಳ್ಳದೆ ಒರಗಿದೆ. ಬೆಣಚುಕಲ್ಲು, ಕೆಂಪುಬಣ್ಣದ್ದಾಗಿದ್ದು ಇದು ಈ ವರ್ಗದ ಒಂದು ಮುಖ್ಯ ಅಂಶವಾಗಿದೆ. ಬಾದಾಮಿ ವರ್ಗದ ಶಿಲೆಗಳು ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಪೂರ್ವದಲ್ಲಿ ಹನುಮಸಾಗರದ ಬಳಿಯ ಗಜೇಂದ್ರಗಡ ಮತ್ತು ಐಹೊಳೆಯಿಂದ ಹಿಡಿದು ಪಶ್ಚಿಮದಲ್ಲಿ ರಾಮದುರ್ಗ, ಗೋಕಾಕ್‌ವರೆಗೆ ಚಾಚಿಕೊಂಡಿವೆ. ಕಲಾದಗಿ ವರ್ಗದ ಶಿಲೆಗಳಿಗಿಂತ ಕಿರಿಯ ವಯಸ್ಸಿನ ಬಾದಾಮಿ ವರ್ಗದ ಶಿಲೆಗಳು ಸಮಾಂತರ ಹಾಸುಗಳುಳ್ಳ ಉಸುಕು ಕಲ್ಲುಗಳು.[೩]

ಮಹಾಕೂಟದ ಸುತ್ತ ಕೆಂಪು ಮಣ್ಣು ಪಸರಿಸಿದೆ. ಇಲ್ಲಿ ಜೋಳ, ಗೋದಿ, ಶೇಂಗಾ, ಸೂರ್ಯಕಾಂತಿ ಇನ್ನು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲಿ ತೆಂಗಿನ ಮರಗಳು ಕಂಡು ಬರುತ್ತವೆ.

ಮಹಾಕೂಟ ಪ್ರದೇಶವು ಮಾನ್ಸೂನ್ ಹವಾಮಾನ ಕ್ಷೇತ್ರದಲ್ಲಿ ಬರುತ್ತಿದ್ದರೂ ಮಳೆಯ ಪ್ರಮಾಣ ಕಡಿಮೆ. ವಾರ್ಷಿಕ ಮಳೆಯ ಸರಾಸರಿ ೫೦ ಸೆಂ.ಮೀ.ದಿಂದ ೭೦ ಸೆಂ.ಮೀ. ಆದ್ದರಿಂದ ಅರೆ ಒಣ ಹವೆಯ ಪ್ರದೇಶವೆಂದು ಕರೆಯಬಹುದು.

ಕುಡಿಯಲು ನದಿಯ ನೀರು, ತಿನ್ನಲು ಗಡ್ಡೆ ಗೆಣಸು ಪ್ರಾಣಿಗಳಿಗೆ ಆಸರೆಯಾಗಿ

ನೈಸರ್ಗಿಕ ಗುಹೆಗಳು ಬಯಲು ಜೀವನಕ್ಕೆ ಅನುಕೂಲಕರ ಹವಾಮಾನ. ಇವುಗಳು ಶಿಲಾಯುಗದ ಮಾನವನಿಗೆ ನೆಲಸಲು ತಕ್ಕ ವಾತಾವರಣವನ್ನು ನೀಡಿದವು. ಮಲಪ್ರಭೆಯ ಬಯಲು ಸಂಸ್ಕೃತಿಯ ತೊಟ್ಟಿಲಾಯಿತು.[೪]

ಮಹಾಕೂಟ ಪ್ರದೇಶದಲ್ಲಿ ನರಿ ನವಿಲು, ತೋಳ, ಮೊಲ, ಕಾಡುಬೆಕ್ಕುಗಳು ಮತ್ತು ಮಂಗಗಳು ಇಲ್ಲಿ ಗೋಚರಿಸುತ್ತವೆ. ಎತ್ತು, ಎಮ್ಮೆ, ಆಕಳು, ಕುರಿ, ಆಡು ಮುಂತಾದ ಸಾಕು ಪ್ರಾಣಿಗಳಿವೆ. ಅನೇಕ ಬಗೆಯ ಕಾಡು ಹಕ್ಕಿಗಳು, ಪಾರಿವಾಳ, ಗಿಳಿ, ಗೂಬೆ, ಕಾಗಿ, ಬೆಳ್ಳಕ್ಕಿ ಇನ್ನು ಮುಂತಾದ ಪಕ್ಷಿಗಳು ಕಂಡು ಬರುತ್ತವೆ.

ಮಹಾಕೂಟದ ಪದನಿಷ್ಪತ್ತಿ :

ಮಹಾಕೂಟವು ಬಾದಾಮಿಯ ಪೂರ್ವಕ್ಕೆ ೧೪ ಕಿ.ಮೀ. ದೂರದಲ್ಲಿದೆ. ಬಾದಾಮಿ ಚಾಲುಕ್ಯರ ಪ್ರಾಚೀನ ಕ್ಷೇತ್ರ, ಇದರ ಶಾಸನೋಕ್ತ ಮೂಲ ಹೆಸರು "ಮಾಗುಂಡ." ಇದೇ "ಮಹಾಗುಂಡ" ಅಥವಾ "ಮಹಾಕುಂಡ" ಮುಂದೆ ಇದು ಮಹಾಕೂಟವಾಗಿರಬೇಕು. ನೀರಿನ ಸೆಲೆ (ಬುಗ್ಗೆ) ಇದ್ದು ಹಿಂದೆಂರೋ ಇದನ್ನು ಕುಂಡವಾಗಿ ಮಾರ್ಪಡಿಸಿದ್ದಿರಬಹುದಾದರೂ ಇದು ಬಾದಾಮಿ ಶಾಸನದಲ್ಲಿ ಉಲ್ಲೇಖವಾಗಿರುವ ಲಂಜಿಗೇಶ್ವರದ ಒಂದು ಭಾಗವಾಗಿತ್ತು. ಮಹಾಕುಂಡೇಶ್ವರ, ಮಹಾಕೂಟೇಶ್ವರ ಅಥವಾ ಶಾಸನೋಕ್ತ ಮಹಾಕೂಟೇಶ್ವರನಿಗಿಂತ ಹಿಂದೆ ಇಲ್ಲಿ ಲಜ್ಜಾಗೌರಿ ಪ್ರಧಾನ ದೈವವಾಗಿದ್ದಿರಬೇಕು.[೫] ಮಹಾಕೂಟೇಶ್ವರದ ನಿಜವಾದ ಹೆಸರು ಮಕುಟೇಶ್ವರ, ಮಕುಟ, ಮಗುಡ, ಎಂಬ ಉಚ್ಚಾರ ಹಳ್ಳಿಗರ ಬಾಯಲ್ಲಿ ಇನ್ನೂ ಉಳಿದಿದೆ.[೬]

ಮಹಾಕೂಟೇಶ್ವರ ದೇವರ ಪೂಜೆಗೋಸ್ಕರ ಮಹಾಸಾಮಂತ ಬಪ್ಪುವರಸನು ಮಹಾಕೂಟಕ್ಕೆ ಬಂದು (ಮಾಗುಡಕವೆಂದು) ಹೋದನೆಂದು ಒಂದು ಶಾಸನದ ಉಲ್ಲೇಖವಿದೆ[೭] ಮಹಾಕೂಟವು ಅದೊಂದು ಮಹತ್ವದ ಕೇಂದ್ರಸ್ಥಾನವೆನಿಸಿರಬೇಕು. ರಾಜಮನೆತನದವರು ಮತ್ತು ಉನ್ನತ ಅಧಿಕಾರಿಗಳು ಆಗಾಗ ಸಂದರ್ಶವಿಯುತ್ತಿದ್ದ ಸ್ಥಳವಿದಾಗಿತ್ತು. ಎಂದು ಸ್ಪಷ್ಟವಾಗುತ್ತದೆ.

೨.೩. ಪೌರಾಣಿಕ ಹಿನ್ನೆಲೆ :

ಮಹಾಕೂಟ ಎಂಬ ಹೆಸರೇ ವಿಶಿಷ್ಟವಾಗಿದ್ದು ಇದು ಶಿವ –ಶಕ್ತಿಯರ ಸಂಗಮವನ್ನು ಸೂಚಿಸುವ ಅನ್ವರ್ಥನಾಮವಾಗಿದೆ.[೮] ಕೈಲಾಸ ಪತಿಯಾದ ಪರಶಿವನ ಒಡ್ಡೋಲಗ ನಡೆದಿದೆ. ಶಿವೆಯು ಓಲಗಕ್ಕೆ ಬಂದು ಶಿವನಿಗೆ ಪ್ರದಕ್ಷಿಣೆಗೈದು ನಮಿಸಿ; ವಾಮಾಂಗವನ್ನು ಅಲಂಕರಿಸಿ ಜಗದ ಜೀವಿಗಳ ಇನ್ನಾವುದೋ ವಿಷಯಗಳನ್ನು ಶಿವಮಹಾಗಣಗಳೊಂದಿಗೆ ಚರ್ಚಿಸುತ್ತಿರುವಾಗ ಮಾನವನು ಸ್ವಧರ್ಮವನ್ನು ಬಿಟ್ಟು ಧರ್ಮಭ್ರಷ್ಟನಾಗಿ ಅಪೇಯ, ಪೇಯ, ಅಭಕ್ಷ, ಭಕ್ಷಣೆ, ಕಾಮ, ಕ್ರೋಧಾದಿಗಳಿಗೆ ವಶನಾಗಿ ಒಬ್ಬನನ್ನು ಇನ್ನೊಬ್ಬನು ಹಿಂಸಿಸುತ್ತಾ ಇನ್ನೂ ಅನೇಕ

ಘೋರ ಪಾಪಗಳಿಂದ ಜಗತ್ತು ವ್ಯಾಪಿಸಿ ಬಿಟ್ಟಿದೆ ಎಂದು ನಾರದ ಮುನಿಗಳಿಂದ ವಿಷಯ ಪ್ರಸ್ತಾಪವಾಯಿತು.

ಯಾವಾಗ ಧರ್ಮ ವಿರುದ್ಧ ಕಾರ್ಯಗಳು ಉಲ್ಬಣಗೊಂಡು ಅಸೂರಿಶಕ್ತಿಯ ಬಲ ವೃದ್ಧಿಸಿದಾಗ ಭಗವಾನ್ ಬೋಲೇನಾಥನು ಭೂಚಕ್ರದಲ್ಲಿ ಲೀಲೆಗೈಯುವ ಪ್ರಸಂಗ ಯುಗ ಯುಗಗಳಲ್ಲಿ ಸಂಭವಿಸಿ ನಡೆದ ಲೀಲೆಗಳ ವಿಷಯವಾಗಿ ಲೋಕ ಕಲ್ಯಾಣದ ಸುದೀರ್ಘ ಚರ್ಚೆ ನಡೆದು ಆ ಸಭೆ ಸಂತೋಷ ಕೂಟವಾಗಿ ಪರಿಣಮಿಸಿತ್ತು. ದುಷ್ಟರ ಶಿಕ್ಷೆ, ಶಿಷ್ಟರ ರಕ್ಷೆಯ ಕುರುಹು ಆಗಿತ್ತು.

ಹಲವು ವಿಷಯಗಳ ಚರ್ಚೆಗೆ ಆವರಣ ನೀಡಿದ ಆ ಸಭೆಯಲ್ಲಿ ಶಿವೆಯು ತನ್ನ ಮನದಾಶೆಯನ್ನು ವ್ಯಕ್ತಪಡಿಸಿದಳು. ಪ್ರಭು! ಧರ್ಮ ರಕ್ಷಣೆಯ ನೆಪ ಮಾಡಿ ಭೂಲೋಕದ ಯಾವ ಯಾವ ಸ್ಥಳದಲ್ಲಿ ಲೀಲೆ ಗೈದಿರುವೆ? ತಮ್ಮ ಪಾದ ಸ್ಪರ್ಶದಿಂದ ಯಾವ ತೀರ್ಥಕ್ಷೇತ್ರಗಳು ಪಾವನವಾಗಿರುವವು? ಆಯಾ ತೀರ್ಥ ಕ್ಷೇತ್ರಗಳ ದರ್ಶನ ಪಡೆಯಬೇಕೆಂಬ ಆಶೆ ನನ್ನದಾಗಿದೆ. ಕೃಪೆ ಮಾಡಿ ನನ್ನ ಬಯಕೆಯನ್ನು ಈಡೇರಿಸುವಿರೆಂದು ನಂಬಿರುವೆ.

ಶಿವನು ಸತಿಯ ಮಾತಿಗೆ ಸಮ್ಮತಿಸಿ ಓಲಗವನ್ನು ವಿಸರ್ಜಿಸಿ, ಸತಿ ಸಮೇತ ನಂದಿ ವಾಹನಾರೂಢನಾಗಿ ಭೂಲೋಕ ಸಂಚಾರ ಗೈದನು. ತಾನು ಪೂರ್ವದಲ್ಲಿ ಲೀಲೆಗೈದ ಸಕಲ ತೀರ್ಥಕ್ಷೇತ್ರಗಳಿಗೆ ಪಾದಾರ್ಪಣೆ ಮಾಡುತ್ತ ಅವುಗಳ ಮಹಿಮೆಯನ್ನು ವಿವರಿಸಿ ಹೇಳುತ್ತಾ ಅಂದಿನ ವಾತಾಪಿಪುರ(ಸದ್ಯದ ಬಾದಾಮಿ) ಪೂರ್ವ ಪ್ರದೇಶದಲ್ಲಿ ದಂಡಕಾರಣ್ಯವೆಂಬ ಪುಣ್ಯಾರಣ್ಯ ಇರುವುದು. ಆ ಅರಣ್ಯದ ದಡದಲ್ಲಿ ಮಹಾಡಂಬರ ನಗರ ನಿಸರ್ಗದತ್ತ ವನ ಸೃಷ್ಟಿಯಿಂದಲೂ ಸಾಲು ಗುಡಿಗೋಪುರಗಳಿಂದಲೂ ಅಮೃತಮಯ ಝುರಿ ತೀರ್ಥಗಳಿಂದಲೂ ಭೂಷಿಸಲ್ಪಟ್ಟ ಮಹಾಡಂಬರ ನಗರಾಧಿಪತಿಯೇ ಶ್ರೀ ಮಹಾಕೂಟೇಶ್ವರ ಸ್ವಾಮಿ ಅವನಿರುವುದೇ ಅವಿಮುಕ್ತ ಕ್ಷೇತ್ರ.

ಗಗನ ಮಾರ್ಗದಲ್ಲಿ ನಂದಿ ವಾಹನಾರೂಢನಾಗಿ ಮಹಾಕೂಟಕ್ಕೆ ಬರುವ ಮಾರ್ಗದಲ್ಲಿ ಕೊಲ್ಲಲ್ಪಟ್ಟ ಸ್ತ್ರೀ–ಪುರುಷರ ದೇಹಗಳನ್ನು ನೋಡಿ ದೇವಿಯು ಚಕಿತಳಾಗಿ ಶಿವನಿಗೆ ಪ್ರಶ್ನೆ ಮಾಡಿದಳು. ಸ್ವಾಮಿ ಇವರೇಕೆ ಹೀಗೆ ಕೊಲ್ಲಲ್ಪಟ್ಟಿದ್ದಾರೆ? ಎಂದಳು. ಈ ಪ್ರಶ್ನೆಗೆ ಶಿವನು ದೇವಿ ವ್ಯಭಿಚಾರದಿಂದ ಸತ್ತವರ ವಿಚಾರ ಮಾಡದಿರು. ಇವರ ವಿಷಯವಾಗಿ, ಮಾತನಾಡುವುದಂತೂ ಮಹಾಪಾಪವೆಂದನು. ಈ ಮಾತಿಗೆ ಶಿವೆಯು "ವ್ಯಭಿಚಾರವೆಂದರೇನು?!" ಜನ್ಮ ಜನ್ಮಾಂತರದ ಪಾಪಗಳು ಕೇವಲ ನಿನ್ನ ನಾಮಸ್ಮರಣೆಯಿಂದ ನಾಶವಾಗುತ್ತಿರಲು ನಿನ್ನ ಸನ್ನಿದಿಯಲ್ಲಿರುವ ನನಗೇಕೆ? ಪಾಪದ ಭೀತಿ?! ಹೇಳುವ ಕೃಪೆಯಾಗಬೇಕೆಂದು ಹಟ ಹಿಡಿದಳು. ಶಿವನು: ಆಗಲಿ ದೇವಿ! ಮುಂದೆ ಪ್ರಸಂಗ ಬಂದಾಗ ಹೇಳುವೆ ಎಂದು ಹೇಳಿ ಶ್ರೀ ಮಹಾಕೂಟ ಕ್ಷೇತ್ರಕ್ಕೆ ಸತಿ ಸಮೇತ ಬಂದನು.

ಶಿವನು ಸತಿ ಸಮೇತ ವಾಸಿಸಲು ಸುಂದರವಾದ ಮಾಯಾ ಮಂದಿರವನ್ನು ಸೃಷ್ಟಿಸಿ, ಮಹಾಕೂಟಕ್ಷೇತ್ರದಲ್ಲಿ ಕೆಲಕಾಲ ವಾಸಿಸುತ್ತಿರಲು, ಶಿಂಪಿಗನ ಲೀಲೆಯಿಂದಲೇ! ವ್ಯಭಿಚಾರದ ವಿಷಯವನ್ನು ಅರ್ಥೈಸಿ ಕೊಡಬೇಕೆಂಬುದೇ ಶಿವನ ಉದ್ದೇಶವಾಗಿತ್ತು. ಶಿವನು: ದೇವಿ! ನಾನು ಧರ್ಮರಕ್ಷಣೆಯ ಉದ್ದೇಶದಿಂದ ಭಕ್ತಾಧಿಗಳ ಮನೋಬಯಕೆಯನ್ನು ಈಡೇರಿಸಿಕೊಡಲು ಹೋಗಿ ಬರಬೇಕಾಗಿದೆ. ನಾನು ಬರುವವರೆಗೆ ಸಖಿಯರೊಂದಿಗೆ ಇಲ್ಲಿಯೇ ವಾಸಿಸುವಳಾಗಬೇಕೆಂದು ಧರ್ಮರಕ್ಷಣೆಯ ನೆಪ ಹೇಳಿ ಗೌರಿಯಿಂದ ಬೀಳ್ಕೊಂಡನು.

ಕೆಲವು ದಿನಗಳು ಕಳೆದ ನಂತರ ಗೌರಿಯು ಉಡುತ್ತಿದ್ದ ಬಟ್ಟೆಗಳನ್ನು ತುಂಬಿದ ಪೆಟ್ಟಿಗೆಯೊಳಗೆ ಶಿವನು ಮಾಯೆಯಿಂದ ಇಲಿಗಳನ್ನು ಸೃಷ್ಟಿಸಿದನು. ಇಲಿಗಳು ಬಟ್ಟೆ ತುಂಬ ರಂದ್ರಗಳನ್ನು ಮಾಡಿದವು. ನಿತ್ಯದಂತೆ ದೇವಿಯು ಸ್ನಾನಗೈದು ಬಟ್ಟೆಗಳನ್ನು ತರಲು ಸಖಿಯರಿಗೆ ಹೇಳಿದಳು. ಪೆಟ್ಟಿಗೆಯನ್ನು ತೆರೆದರು. ಬಟ್ಟೆಗಳೆಲ್ಲ ಹರಿದು ಹಾಳಾದ ವಿಷಯವನ್ನು ಸಖಿಯರು ಗಾಬರಿಗೊಂಡು ತಿಳಿಸುತ್ತಾ ಬಟ್ಟೆಗಳನ್ನೆಲ್ಲ ತೋರಿಸಿದರು. ಹರಿದು ಹಾಳಾದ ಬಟ್ಟೆಗಳನ್ನು ನೋಡಿ ದೇವಿ ಚಕಿತಳಾದಳು. ಇಲಿಯ ಚಮತ್ಕಾರದ ಕ್ರೀಯೆಗೆ ಬೆರಗಾದಳು! ಇದ್ದ ಬಟ್ಟೆಗಳಲ್ಲಿ ಸ್ವಲ್ಪ ಮಟ್ಟಿಗೆ ಉತ್ತಮವಾಗಿರುವುದನ್ನು ಸುತ್ತಿಕೊಂಡು ಶಿವೆಯು ಸ್ನಾನ ಗೃಹದಿಂದ ಪೂಜಾ ಗೃಹಕ್ಕೆ ಬಂದಳು.

ಸಮಯ ಸಾದಿಸಿ ಶಿವನು ಶಿಂಪಿಗನ ವೇಷ ಧರಿಸಿದನು. ಬೊಚ್ಚು ಬಾಯಿ, ನೆರೆಕೂದಲು, ಬಾಗಿದನಡು, ನಡುಗುವತಲೆ, ಬೇರುದೆರೆದ ಹಲ್ಲುಗಳು ಕೃಶವಾದ ದೇಹ ಈ ಆವಸ್ಥೆಯಲ್ಲಿಯೇ ಹರಿದ ಬಟ್ಟೆಗಳನ್ನು ಹೊಲಿದು ಕೊಡುವೆನೆಂದು ಕೂಗುತ್ತಾ ಶಿವೆಯಿದ್ದ ಮಂದಿರದ ಸಮೀಪ ಬಂದನು.

ಶಿವೆಯು ಸಖಿಯರಿಂದ ಅವನನ್ನು ಕರೆಯಿಸಿಕೊಂಡು ಹರಿದ ಬಟ್ಟೆಗಳನ್ನು ಹೊಲಿದುಕೊಡಲು ತಿಳಿಸಿದಳು. ಆಗ ಶಿಂಪಿಗನು ತನ್ನ ತೀಕ್ಷ್ಣ ದೃಷ್ಟಿಯನ್ನು ಮರೆಯಾಚಿಸುತ್ತಾ ಮಂದ ದೃಷ್ಟಿಯಿಂದ ನೋಡುವವನಂತೆ ನಟಿಸುತ್ತ ! "ದೇವಿಯವರೇ ನನಗೆ ಬೇಕಾದುದನ್ನು ಕೊಡುವುದಾದರೆ ಈ ಬಟ್ಟೆಗಳನ್ನು ಹೊಲಿದು ಕೊಡುವೆ" ಎಂದನು. ಗೌರಿಯು ಹಿಂದು ಮುಂದಿನಾಲೋಚನೆ ಇಲ್ಲದೆ ಹಾಗೇ ಆಗಲಿ ಎಂದಳು.

ಶಿಂಪಿಗನ ವೇಷದಲ್ಲಿರುವ ಶಿವನು ಸ್ವಲ್ಪ ಸಮಯದಲ್ಲಿಯೇ ಬಟ್ಟೆಗಳನ್ನು ಹೊಲಿದು ಕೊಟ್ಟನು. ಚಮತ್ಕಾರ ಪೂರ್ಣ ಹೊಲಿಗೆ ಕಲೆಯನ್ನು ನೋಡಿ ಶಿವೆಯು; ನಿನಗೇನು ಬೇಕು? ಬೇಡು ಕೊಡುವೆನೆಂದಳು. ಸಂತಸಗೊಂಡವನಂತೆ ನಟಿಸುತ್ತಾ ಶಿವನು "ದೇವಿ! ನಿನ್ನ ಚಲುವಿಕೆಗೆ ಮೋಹಿತನಾಗಿದ್ದೇನೆ. ನನ್ನನ್ನು ಕೂಡಿ ಆನಂದಗೊಳಿಸು" ಎಂದನು. ಗೌರಿಗೆ ಸಿಡಿಲು ಬಡಿದಂತಾಯಿತು. ಧೂರ್ತನಿವನೆಂದು ತಿಳಿಯದೇ ವಚನವಿತ್ತು ಕೆಟ್ಟೆನೆಂದೆಳು ಮತ್ತು ಶಿವನಿಗೆ ದೇವಿ ಹೇಳಿದಳು. ಕಾಮುಕ್ಕೊಳಗಾಗಿ ಕೆಟ್ಟು ಹೋದವರುಂಟು, ನಾನು

ಕೊಟ್ಟ ವಚನವನ್ನು ತೂಗಿ ನೋಡು, ನಾನಾಭಾವದಿಂದ ವಚನವಿತ್ತೇನೆಂಬುದನ್ನು ನನ್ನನ್ನು ಅವಮಾನಗೊಳಿಸುವುದೊಳಿತೇ? ನಿನಗೆ ದೇವೇಂದ್ರ ಪಟ್ಟಗಟ್ಟಿಸುವೆ; ಅಮರತ್ವ ಕೊಡುವೆ; ಸುಖವಾಗಿ ಬಾಳು ಎಂದಳು. ಆಗ ಶಿಂಪಿಗನು "ದೇವಿ ಇತರ ಸಂದರ್ಭಾವಕಾಶಗಳು ಕೂಡಿ ಬರದೇ ದೇವೇಂದ್ರಪಟ್ಟ ಧೀರ್ಘಾಯುಷ್ಯ ಅಮರತ್ವ ಇವುಗಳಿಂದ ನನಗೆ ಯಾವ ಉಪಯೋಗವೂ ಇಲ್ಲ. ಕೊಟ್ಟ ವಚನಕ್ಕೆ ತಪ್ಪಿ ನಡೆಯುವಿರೆಂದು ನಾನು ನಂಬಿರಲಿಲ್ಲ. ನನಗೆ ಭಾಷೆ ಕೊಟ್ಟದ್ದು ಸುಳ್ಳೆಂದರೆ ಹೊರಟು ಹೋಗುತ್ತೇನೆ. ಈ ವೃದ್ಧಾಪ್ಯದಲ್ಲಿ ಈ ತೆರನಾಗಿ ಹಟ ಹಿಡಿದ ಶಿಂಪಿಗನನ್ನು ಜ್ಞಾನ ದೃಷ್ಟಿಯಿಂದ ನೋಡಿದ ಶಿವೆಯು ಶಿಂಪಿಗನ ವೇಷ ತೆಳೆದು ಬಂದ ಶಿವನೆಂಬುದನ್ನು ದಿವ್ಯಜ್ಞಾನ ದೃಷ್ಟಿಯಿಂದ ತಿಳಿದವಳಾದಳು ಮತ್ತು ಶಿವನಿಗೆ ಹೀಗೆಂದಳು. "ಪ್ರಭು? ಈ ವೇಷದಲ್ಲಿ ಬಂದುದು ಏಕೆ? ತನ್ನನ್ನು ಗುರುತು ಹಿಡಿದಳೆಂದು ಶಿವನು ಮುಗುಳು ನಗೆ ಬೀರಿ ನಿಜರೂಪ ತೆಳೆದನು. ವ್ಯಭಿಚಾರವೆಂದರೇನೆಂದು ಅಂದು ಕೇಳಿದೆಯಲ್ಲಾ? ಅದಕ್ಕಾಗಿಯೇ ಈ ವೇಷ ತಳೆದು ಬರಬೇಕಾಯಿತು.

ಅಪೂರ್ಣ ಜ್ಞಾನದಿಂದ ಅವಿವೇಕಕ್ಕೆ ವಶರಾದ ಚಂಚಲಸ್ವಭಾವದ ಸ್ತ್ರೀಪುರುಷರ ವಿಷಯವಾಗಿ ವಿವರಿಸುವುದಾದರೆ ತನ್ನ ಪತಿ ಅನುರೂಪ ಗುಣಸಂಪನ್ನನಾಗಿದ್ದರೂ ಪರಪುರುಷರಲ್ಲಿ ಮೋಹವಶಳಾಗುವುದೂ ! ತನ್ನ ಸತಿ ಗುಣರೂಪ ಸಂಪನ್ನಳಾಗಿದ್ದರೂ ಪರಸ್ತ್ರೀಯರಲ್ಲಿ ಮದನಾತುರವಾಗುವುದು ವ್ಯಭಿಚಾರವೆಂದೆನಿಸುವುದನ್ನು ಹೇಳಿದರೇ ನಿನಗೆ ಅರ್ಥವಾಗದೆಂದು ಗ್ರಹಿಸಿ ನಾನೀ ಶಿಂಪಿಗನ ಲೀಲೆ ಮುಖಾಂತರ ತಿಳಿಸುವ ಪ್ರಸಂಗ ಅನಿವಾರ್ಯವಾಯಿತೆಂದನು. ಶಿವನ ಈ ಮಾತನ್ನು ಕೇಳಿ ಗೌರಿಯು ಲಜ್ಜಿತಳಾದಳು. ಆದುದರಿಂದ "ಲಜ್ಜಾಗೌರಿ" ಯೆಂದು ಹೆಸರಾದಳು. ಶ್ರೀ ಮಹಾಕೂಟ ಕ್ಷೇತ್ರದಲ್ಲಿ ಈ ಮೂರ್ತಿ ಬಹಳ ಸುಂದರವಾಗಿತ್ತು. ಆದರೆ ಆ ಭಿನ್ನ (ಭಗ್ನ) ಮೂರ್ತಿಯನ್ನು ಈಗಲೂ ನೋಡಬಹುದು. ಅರಳಿದ ಮುಖ ಕಮಲವೇ ಈ ಮೂರ್ತಿಗೆ ಮುಖವಾಗಿದೆ. ಕಮಲ ಮುಖಿಯೇ ಈ ಲಜ್ಜಾಗೌರಿ.[೧೦]

ಶಿವನು ಶಿಂಪಿಗನ ಲೀಲೆಗೈದ ಕೆಲವು ದಿನಗಳ ನಂತರ ವ್ಯಾಘಪಾದನೆಂಬ ಮುನಿವರನು ಮಹಾಕೂಟ ಕ್ಷೇತ್ರದ ಅನತಿ ದೂರದಲ್ಲಿ ಶಿವನನ್ನು ಕುರಿತು ತಪಗೈಯುತ್ತಿದ್ದನು. ಅವನ ಘೋರ ತಪಸ್ಸಿಗೆ ಮೆಚ್ಚಿ ಶಿವನು ಪ್ರಸನ್ನಿಕರಿಸಿಕೊಂಡೆ? ನಿನಗಾವ ವರಬೇಕು? ಬೇಡು ಎಂದನು. ಅದಕ್ಕೆ ಮುನಿವರನು ಶಿವನನ್ನು ಆಪಾದ ಮಸ್ತಕದವರೆವಿಗೂ ಆನಂದ ಪೂರ್ಣನಾಗಿ ನೋಡಿ ಗದ್ಗದಿತ ಕಂಠದಿಂದ ನತ ಮಸ್ತಕನಾಗಿ ಭಿನ್ನೈಸಿಕೊಳ್ಳುತ್ತಾನೆ. ಸ್ವಾಮಿ? ಮಹಾಕೂಟೇಶಾ! ನಿನ್ನ ಪಾದದರ್ಶನಕ್ಕಿಂತಲೂ ಇನ್ನಾವುದೂ ನನಗೆ ಹೆಚ್ಚಿನ ವರ ಬೇಕಾಗಿಲ್ಲ, ಯಾವ ವರವೂ ಹಿರಿಯದಲ್ಲ ನಿನ್ನ ದರ್ಶನ ಪಡೆಯದ ಬಾಳು ಸಾರ್ಥಕವಲ್ಲ, ಆದರೂ ನಾನೊಂದು ವರ ಬೇಡಲೇ? ಅಂದನು. ಶಿವನು: ನಿನ್ನ

ಮನೋಬಯಕೆಯನ್ನೀಡೇರಿಸುವುದಕ್ಕಾಗಿಯಲ್ಲವೇ ? ನಾನೀಗ ನಿನ್ನೆದುರು ನಿಂತಿರುವುದು ಎಂದನು. ಆಗ ಮುನಿಯು; ನಾನು ತಪಗೈದ ಕುರುಹಿಗಾಗಿ ಈ ಕ್ಷೇತ್ರದಲ್ಲಿ ನೀನು ನನ್ನ ಹೆಸರಿನಲ್ಲಿ ವ್ಯಾಘ್ರಪಾದೇಶ ನಾಮದಿಂದ ನೆಲೆಸಿಕೊಂಡಿರಬೇಕು.ಎಂದು ಬೇಡಿಕೊಂಡನು. ತಥಾಸ್ತುಯೆಂದು ಅವನ ಇಚ್ಚೆಯಂತೆ ಶಂಕರನು ಅಲ್ಲಿ ವ್ಯಾಘ್ರಪಾದೇಶನಾಗಿನೆಲೆಸಿದನು. ಈ ಕ್ಷೇತ್ರದಲ್ಲಿ ತೀರ್ಥಸ್ನಾನ ಮಾಡಿ ಪೂಜಾದಿಗಳನ್ನು ತೀರಿಸಿಕೊಂಡವರಿಗೆ ಅವರ ಜನ್ಮ ಜನ್ಮಾಂತರದ ಪಾಪಗಳು ತೊಳೆದು ಹೋಗುವಂತೆ ಮುನಿಯು ಬೇಡಿಕೊಂಡನು. ವ್ಯಾಘ್ರಪಾದೇಶನ ಬಯಕೆ ಈಡೇರಿಸಿದ ಶಿವನು ಇಂದಿಗೂ ವ್ಯಾಘ್ರಪಾದೇಶ್ವರ ಮಹಾಕೂಟೇಶ್ವರನೆಂಬ ಹೆಸರಿನಿಂದ ನೆಲೆಸಿರುವನು. ಈ ಸ್ಥಳಕ್ಕೆ ಹಳೆ ಮಹಾಕೂಟವೆಂದು ಕರೆಯುತ್ತಾರೆ. ಮಹಾಕೂಟದಿಂದ ಶಿವಯೋಗಮಂದಿರಕ್ಕೆ ಹೋಗುವ ಮಾರ್ಗದ ಮಧ್ಯದಲ್ಲಿ ಗುಡ್ಡವಡಿ ಸರೋವರದಡದಲ್ಲಿ ಈ ಕ್ಷೇತ್ರವಿದೆ. ೬ನೇ ಶತಮಾನದಲ್ಲಿ ಗಜಪ್ರಷ್ಠಕೃತಿಯ ದೇವಾಲಯವು ಬಹಳಷ್ಟು ಜೀರ್ಣಾವಸ್ಥೆಯಲ್ಲಿದೆ. ಈ ಮಂದಿರದ ಬಲಭಾಗದಲ್ಲಿ ದ್ರಾವಿಡ ಶೈಲಿಯ ಇನ್ನೆರಡು ಶಿವ ದೇವಾಲಯಗಳಿವೆ. ಮತ್ತು ಮಹಾಕೂಟೇಶ್ವರ ಮುಂಭಾಗದಲ್ಲಿ ಒಂದು ಕಲ್ಯಾಣಿ (ತೀರ್ಥ) ಇದೆ. ವರುಷವಿಡಿ ಹರಿಯುವ ನೀರು ರೈತರಿಗೆ ಉಪಯುಕ್ತವಾಗಿದೆ.

ವ್ಯಾಘ್ರಪಾದ ಮುನಿವರನಿಗೆ ವರವಿತ್ತು ಶಿವನು ಸತಿಸಮೇತವಾಗಿ ತಾನು ಈ ಮೊದಲು ಲೀಲೆಗೈದ ಮಹಾಕೂಟ ಕ್ಷೇತ್ರಕ್ಕೆ ಬಂದನು. ಕೊಳದಿಂದ ಪುಟಿದೆದ್ದು ಹರಿಯುವ ನಿರೂಟೆಗಳು, ಹಂಸ ತೂಲಿಕಾ ತಲ್ಪವನ್ನು ನಾಚಿಸುವ ಮೃದುವಾಗಿ ಹಾಸಿದಂತೆಸೆಯುವ ಹಸಿರು ತೃಣಾಸನ ಮನಕ್ಕೆ ಮುದನೀಡಿ ಶೋಭಾಯಮಾನವಾಗಿದೆ. ಬಗೆ ಬಗೆಯ ಗಿಡಮರಗಳು ಫಲಭರಿತವುಗಳಾಗಿ ಪಕ್ಷಿ ಸಂಕುಲಕ್ಕೆ ಆಶ್ರಯವಾಗಿವೆ ಒಟ್ಟಾರೆ ಸೃಷ್ಟಿ ಸೌಂದರ್ಯದ ಸೊಬಗನ್ನು ಸವಿಯುತ ಸಂಚರಿಸುತ್ತಿದ್ದರು.

ಇದೇ ಕ್ಷೇತದ್ರ ಒಂದಡೆಯಲ್ಲಿ ಶ್ರೀ ರಾಮಲಕ್ಷ್ಮಣರು ಮಾರ್ಗಾಯಾಸ ನಿವಾರಿಸಿಕೊಳ್ಳಲು ಒಟವೃಕ್ಷವನ್ನಾಶ್ರಯಿಸಿ ಪವಡಿಸಿದ್ದರು. ರಾವಣನಿಂದ ಅಪಹರಿಸಲ್ಪಟ್ಟ ಸೀತಾದೇವಿಯನ್ನು ಹುಡುಕುತ್ತಾ ದಂಡಕಾರಣ್ಯದಲ್ಲಿರುವ ಶ್ರೀ ಮಹಾಕೂಟ ಕ್ಷೇತ್ರಕ್ಕೆ ಬಂದವರಾಗಿದ್ದರು.

ಶಿವ ಸತಿಯರು ಸಂಚರಿಸುತ್ತ ರಾಮ ಲಕ್ಷ್ಮಣರು ಪವಡಿಸಿದ್ದ ಸ್ಥಳಕ್ಕೆ ಬಂದರು. ರಾಮ ಲಕ್ಷ್ಮಣರಿಗೆ ಬಂದ ವಿಪತ್ತನ್ನು ದಿವ್ಯಜ್ಞಾನದಿಂದ ತಿಳಿದ ಶಿವನ ಚೇತಸ್ಸಿನಲ್ಲಿ ವಿಚಾರ ತರಂಗಗಳೆದ್ದವು. ಪೃಥ್ವಿಯ ಒಂದು ಗೋಲಾರ್ಧದ ಮೇಲೆ ಪ್ರಕಾಶವಿದ್ದರೆ ಗೋಲಾರ್ಧದ ಇನ್ನೊಂದೆಡೆ ನಿಬಿಡವಾದ ಅಂಧಕಾರ ತುಂಬಿರುತ್ತದೆ. ಈ ಕ್ರಿಯೆ ಪ್ರತಿಕ್ರಿಯೆಗಳು ಸೃಷ್ಟಿಗೂ ಗ್ರಹಣವಾಗಿರುವಾಗ! ಮಾನವನಿಗೆ, ನೋವು-ನಲಿವು, ಸುಖ-ದುಃಖ, ಆಶೆ-ನಿರಾಶೆ, ವೃದ್ಧಿ ಕ್ಷಯ ಈ ದ್ವಂದ್ವಗಳು ಅನಿವಾರ್ಯ ರಾಜನಾಗಿರಲಿ, ಶ್ರೀಮಂತನಾಗಿರಲಿ, ಬಡವನಾಗಿರಲಿ,

ಯೋಗಿಯಾಗಿರಲಿ, ದೇವಾಂಶ ಸಂಭೂತನೇ ಆಗಿರಲಿ ಅನುಭವಿಸಿದ್ದ ಹಕ್ಕನ್ನು ವಿಧಿ ನಿಯಮವೆಂದೂ ಗ್ರಹಿಸಬೇಕು. ವಿಧಿಯ ವಿರಾಟ ಸ್ವರೂಪಕ್ಕೆ ಎದೆಗೊಡಲು ಒಲವು ಯಾರಿಗೆ ಯದೆ?! ಭಲಾ ವಿಧಿಯೇ!! ಎಂದು ಹೃದಯಕ್ಕೆ ಕೈಗಳನಿಟ್ಟನು. ಇದನ್ನು ನೋಡಿದ ಶಿವೆಯು ವಿಪರಿತಾರ್ಥಮಾಡಿಕೊಂಡಳು ಮತ್ತು ಹೀಗೆಂದಳು ಸ್ವಾಮಿ! ರಾಮ ನಿನ್ನಭಕ್ತ ನೀನು ಸ್ವಾಮಿ. ಅವನು ದರ್ಶನಾರ್ಥಿ ನೀನು ದರ್ಶನೀಯ ಅವನು ಮುಕ್ತಾರ್ಥಿ, ನೀನು ಮುಕ್ತಿದಾತ ಹೀಗಿದ್ದು ಅವನಿಗೆ ಪ್ರಣಾಮಗೈಯ್ಯುವುದೇ? ಅಂದಳು. ಅದಕ್ಕೆ ಶಿವನು: ದೇವಿ!. ನಾನಾರು? ಅವರಾರು? ನನ್ನ ಸಾತ್ವಿಕಕಳೆ ಯುಗ ಯುಗಗಳಲ್ಲಿ ಅವತರಿಸಿ ದುಷ್ಟರನ್ನು ಮರ್ಧಿಸಿ ಶಿಷ್ಟರಿಗೆ ನ್ಯಾಯ ದೊರಕಿಸಿ ಕೊಡಲು ಇಂಥಹ ಸತ್ಪುರುಷರ ದೇಹ ಧರಿಸಿ ಬರುತ್ತದೆ. ಅಲ್ಲವೇ? ಹೀಗಿದ್ದು ಸಂಕೋಚ ಭಾವನೆಗೆ ಅವಕಾಶವೇಕೇ? ಅಂದನು.

ಥಟ್ಟನೇ ಶಿವೆಯು ಮಾತಿನ ಮಧ್ಯ ಪ್ರವೇಶಿಸಿ "ರಾಮ ನಿನ್ನ ಸಾತ್ವಿಕ ಕಳೆಯಿಂದ ಜನಿಸಿದವನೆಂಬುದು ಸತ್ಯವಾಗಿಯೇ ಇರಬಹುದು" ಆದರೆ ನನಗೆ ಮನವರಿಕೆ ಆಗಬೇಕಲ್ಲವೇ? ಆದುದರಿಂದ ನಾನು ಅವನನ್ನು ಪರೀಕ್ಷಿಸುವೆ ಅಪ್ಪಣೆ ಕೊಡಬೇಕೆಂದಳು. ಜನಸಾಮಾನ್ಯರಿಗೆ ಶ್ರೀರಾಮಚಂದ್ರನ ವ್ಯಕ್ತಿತ್ವವನ್ನು ಎತ್ತಿ ತೋರಿಸುವುದೇ ಗೌರಿಯ ಉದ್ದೇಶವಿರಬೇಕು.

ಶಿವನು; ದೇವಿ! ಶುದ್ಧ ಸುವರ್ಣದ ಬೆಲೆಯು ಗೊತ್ತಾಗಬೇಕಾದರೆ ಕಠಿಣಮಯವಾದ ವರೆಗಲ್ಲು ಬೇಕಲ್ಲವೇ? ಹೇಮದಂತಿರುವ ಶ್ರೀರಾಮನಿಗೆ ವರೆಗಲ್ಲಿನಂತೆ ನೀನಾಗಲು ಬಯಸುತ್ತಿರುವೆಯಾ? ಆಗಲಿ ಸತ್ಪುರುಷರನ್ನು ಸಮ್ಯಕ್ ಜ್ಞಾನಿಗಳನ್ನು ಸತ್ಯವ್ರತರನ್ನು ಒಟ್ಟಾರೆ ನನ್ನತ್ತ ಲಕ್ಷವಿರಿಸಿದವರನ್ನ ಪರೀಕ್ಷಿಸುವುದೆಂದರೆ ವಜ್ರವನ್ನು ಸಾಣೆಗಿಕ್ಕಿದಂತೆ ಈ ಪರೀಕ್ಷೆ ಜ್ಞಾನಾ ಜ್ಞಾನದ ಪರೀಕ್ಷೆಯಲ್ಲ: ಪರಿಪೂರ್ಣದಿಂದ ಪೂರ್ಣತ್ವದ ಪರೀಕ್ಷೆ. ನಿನ್ನಿಚ್ಚೆಯಂತೆ ಆಗಲಿ ಶ್ರೀರಾಮನಿಗೆ ಒಳ್ಳೆಯದಾಗಲೀ; ಬೆಳಕಾಗಲೀ; ನಿನ್ನಿಂದ ದೊರಕಲಿ ಪರೀಕ್ಷಿಸಬಹುದೆಂದು ಅಪ್ಪಣೆಯನ್ನಿತ್ತನು.

ಶಿವ ಸತಿಯುರ ವಾಗ್ವಾದ ಮುಗಿಯುವಷ್ಟರಲ್ಲಿ ಶ್ರೀರಾಮ ಲಕ್ಷ್ಮಣರು ದಕ್ಷಿಣಭಿಮುಖವಾಗಿ ಮಾರ್ಗ ಕ್ರಮಿಸಿದ್ದರು.

ಶಿವನಿಂದ ರಾಮ ಪರೀಕ್ಷೆಗೆ ಅಪ್ಪಣೆ ಪಡೆದಾಯಿತು. ಇನ್ನು ಯಾವ ತಂತ್ರ ಹೂಡಿ ರಾಮನನ್ನು ಪರೀಕ್ಷಿಸಬೇಕು? ಎಂದು ವಿಚಾರ ಮಂಥನಕ್ಕಿಳಿದಾಗ ಥಟ್ಟನೇ ಒಂದು ವಿಚಾರ ಹೊಳೆಯಿತು. ರಾಮನು ಸೀತಾ ವಿಯೋಗದಿಂದ ಪ್ರಲಾಪಿಸುತ್ತಿರುವನು. ಕಂಡ ಕಂಡ ಗಿಡಮರಗಳಲ್ಲಿ ಯಾವುದೇ ವಸ್ತುವಿನಲ್ಲಿಯೂ ಸಹ ಸೀತೆಯನ್ನು ಕಾಣುತ್ತಿರುವನು. ಈ ಸ್ಥಿತಿಯಲ್ಲಿರುವ ರಾಮನ ಪರೀಕ್ಷೆಯನ್ನು ಸೀತಾ ರೂಪದಿಂದಲೇ ತೆಗೆದುಕೊಳ್ಳುವುದು ಸರಿಯಾದ ಉಪಾಯವೆಂದು ನಿಶ್ಚಯಿಸಿ ಸೀತಾರೂಪದಿಂದ ದೇವಿಯು ಸ್ವಾಮಿ!! ಎಂದು ಅವನಿದ್ದೆಡೆಗೆ ಹೋಗಲನುವಾದಳು.

ಇತ್ತ ದೇವಿಯ ಪರೀಕ್ಷೆಯಿಂದ ಶ್ರೀರಾಮನು ಪಾರಾಗಲೆಂಬ ಉದ್ದೇಶದಿಮದ ಶಿವನು ಈ ಮೊದಲು ತಪಸ್ಸು ಮಾಡಿದ ಮಹಾಕೂಟದಲ್ಲಿಯೇ ತಪಸ್ಸಿಗೆ ಕುಳಿತನು. ಈ ತಪಸ್ಸಿನ ಏಕಾಗ್ರತೆಯಿಂದ ರಾಮನಲ್ಲಿ ನಿಜತ್ವ ಮೂಡಿಸಿದನು.

ಶ್ರೀರಾಮನು ಸೀತಾರೂಪದಲ್ಲಿ ಬಂದ ಶಿವನ ಸತಿಯನ್ನು ಜ್ಞಾನದೃಷ್ಟಿಯಿಂದ ನೋಡಿದನು. ಜಗಜ್ಜನನಿಯಾದ ಶಿವೆಯನ್ನು ಕಣ್ತುಂಬ ನೋಡಿದವನಾಗಿ ಸಂತೋಷಾತಿಶಯದಿಂದ ದೀರ್ಘದಂಡ ಪ್ರಣಾಮಗೈದನು. ಶ್ರೀರಾಮನ ವಿಷಯವಾಗಿ ಈ ಮೊದಲು ಶಿವನು ಆಡಿದ ಮಾತುಗಳನ್ನು ಸ್ಮೃತಿಪಟಲದಲ್ಲಿ ಮೇಲುತ್ತ ನಿರುತ್ತರಳಾದಳು. ಪುನಃ ರಾಮನೇ ಮಾತನ್ನು ಮುಂದುವರೆಸಿದನು. ತಾಯಿ?! ಯಾವ ಜನ್ಮದ ಕರ್ಮದಿಂದಲೋ! ಈ ದುಃಖವನ್ನು ಅನುಭವಿಸುತ್ತಿರುವೆನು.! ಅದು ನಿನಗೆ ತಿಳಿಯದ ವಿಷಯವೆನಲ್ಲ. ಯಾವ ರೂಪದಿಂದಲಾದರೂ ನನಗೆ ದರ್ಶನ ಲಾಭ ಕರುಣಿಸಿರುವೆ, ನಿನ್ನ ದರ್ಶನ ಮಾತ್ರದಿಂದ ನಾನು ಶುಭದಿನಗಳೊಂದಿಗೆ ದುಃಖದಿಂದ ಮುಕ್ತನಾಗುವೆನೆಂಬ ವಿಶ್ವಾಸ ನನಗಿದೆ. ಈ ವನದಲ್ಲಿ ನಿನ್ನ ಪಾದಗಳನ್ನು ಪೂಜಿಸಬೇಕೆಂದಿರುವೆ. ಅನುಗ್ರಹಿಸಬೇಕೆಂದು ವಿನಯದಿಂದ ಬೇಡಿಕೊಂಡನು. ಶ್ರೀರಾಮನ ಆಶೆಯನ್ನು ಈಡೇರಿಸಿ "ಶಂ ಕರೋತಿ ಇತಿ ಶಂಕರಿ" ಎನ್ನುವಂತೆ ರಾಮನಿಗೆ ವರ ಕರುಣಿಸಿದ ಬನದಲ್ಲಿ ವನದೇವಿಯಾಗಿ ಬನಶಂಕರಿಯಾಗಿ ನೆಲೆಸಿದಳು. ಅದೇ ಕುರುಹು ಮಹಾನ್ ಶಕ್ತಿಪೀಠಗಳಲ್ಲೊಂದಾಗಿದೆ. ಸುಪ್ರಸಿದ್ದ ಬನಶಂಕರಿ ಕ್ಷೇತ್ರವಾಗಿದೆ. ಕ್ಷೇತ್ರಾಧಿದೇವತೆ ಬನಶಂಕರಿದೇವಿಯ ಅವತಾರವಾಗಿದೆ

ಪುನಃ ಶಂಕರಿಯು ಶ್ರೀ ಕ್ಷೇತ್ರ ಮಹಾಕೂಟಕ್ಕೆ ಬಂದಳು. ಶಿವನು ಇನ್ನೂ ತಪಸ್ಸಿಗೆ ಕುಳಿತೇ ಇದ್ದನು. ಗೌರಿಯು ಶಿವನನ್ನು ಎಚ್ಚರಿಸುವ ಧೈರ್ಯ ಕಳೆದುಕೊಂಡವಳಾಗಿ ಯೋಗ ಸಮಾದಿಯಲ್ಲಿರುವ ಶಿವನ ಸನ್ನಿದಿಯಲ್ಲಿ ಖಿನ್ನವದನೆಯಾಗಿ ಕುಳಿತಳು. ದಿನಚರಿಯಂತೆ ಸಮಸ್ತದೇವತೆಗಳು ಶಿವನ ದರುಶನಕ್ಕೆ ಬರುವವರಾದರು. ಕಳೆಗುಂದಿದ ಜಗನ್ಮಾತೆಯ ಮುಖವನ್ನು ನೋಡಿದವರಾಗಿ ನಡೆದ ಸಂಗತಿಯನ್ನು ಜಗನ್ಮಾತೆಯ ಮುಖೇನ ಸಾಧ್ಯಾಂತ ತಿಳಿದುಕೊಂಡವರಾದರು ಮತ್ತು ದೇವತೆಗಳೆಲ್ಲರೂ ಸಮಾದಿಸ್ಥ ಶಿವನನ್ನು ಎಚ್ಚರಿಸಲು ಅನನ್ಯ ಭಕ್ತಿಯಿಂದ ಭಜಿಸತೊಡಗಿದರು. ಶಿವನು ಎಚ್ಚೆತ್ತು ದೇವತೆಗಳನ್ನು ಉದ್ದೇಶಿಸಿ; ದೇವತೆಗಳೇ! ಅವಾವ ವಾಂಚ್ಚಿತವು ಪೂರ್ಣವಾಗಬೇಕೆಂದು ನೀವು ನನ್ನನ್ನು ಭಜಿಸಿದಿರೀ? ಅದಕ್ಕೆ ದೇವತೆಗಳು ಸ್ವಾಮಿ?! ಸದಾ ನಿನ್ನ ಕೃಪಾಛತ್ರ ನಮ್ಮ ಮೇಲಿರುವಾಗ ನಮಗಾವ ಕೊರತೆ? ಆದರೆ ಜಗನ್ಮಾತೆ ನಿನ್ನ ಮಾತನ್ನು ಮೀರಿದಂತೆ ಜಗತ್ತಿಗೆ ಕಂಡರೂ ಈ ತಾಯಿಯ ಉದ್ದೇಶವಾದರೂ ಶ್ರೀರಾಮನಿಂದ ಸೇವೆ ಸ್ವೀಕರಿಸಿ; ಅವನಿಗೆ ಭವಿಷ್ಯದಲ್ಲಿ "ಇಷ್ಟಸಿದ್ದಿ ಪ್ರಾಪ್ತಿರಸ್ತು" ಎಂದು ಹರಸುವುದೇ ಆಗಿದ್ದಿತು. ನಿಮ್ಮೀರ್ವರ ಲೀಲಾಮಯ ವ್ಯಾಜ್ಯ ಶ್ರೀರಾಮಚಂದ್ರನಿಗೆ ಮುಂದೆ ಪಡೆಯಲೇಬೇಕಾದ ಧರ್ಮ ಸಾಮ್ರಾಜ್ಯ ಪಟ್ಟಾರೋಹಣದ

ಸೂಚಕವಾಗಿದೆ. ವ್ಯಾಜ್ಯ ನಿಮಿತ್ತ ಈ ಸ್ಥಳದಲ್ಲಿ ನಿಮ್ಮಿರ್ವರ ದರ್ಶನ ಪಡೆಯುವ ಭಾಗ್ಯ ನಮ್ಮದಾಗಿದೆ.

ಹರಿ ವಿರಂಚಿ ಮೊದಲಾಗಿ ದೇವಾನುದೇವತೆಗಳು, ದೇವಾಧಿ ದೇವತೆಗಳು, ಸಿದ್ಧ, ವಿದ್ಯಾಧರ, ಗಣಪ, ಷಣ್ಮುಖ, ನಂದಿಕೇಶ್ವರ, ಗರುಡ, ನಾರದ, ಗಂಧರ್ವರು, ಮಣಿಭದ್ರ ಮೊದಲಾದ ವನ ದೇವತೆಗಳು ಈ ಪ್ರಸಂಗದಲ್ಲಿ ಸೇರಿರುವುದನ್ನು ನೋಡಿದರೆ ಇವು "ಮಹಾಕೂಟ"ವೇ ನಿಜವಾಗಿದೆ.

ಈ ಪ್ರಸಂಗದಲ್ಲಿ ಜಗನ್ಮಾತೆಗೆ ಮೊದಲಿನಂತೆ ವಾಮ ಭಾಗವನ್ನಲಂಕರಿಸಲು ಪುನಹ ಸ್ಥಳ ಕೊಡಬೇಕು. ಆ "ಮಹಾಕೂಟ" ಲೀಲೆಯನ್ನು ನಾವು ಕಣ್ಣಾರೆ ಕಾಣಬೇಕೆಂದು ಬೇಡಿಕೊಳ್ಳುತ್ತೇವೆ. ಎಲ್ಲ ದೇವತೆಗಳ ಬೇಡಿಕೆಯನ್ನು ಈಡೇರಿಸಲು ಶಂಕರನು ಸತಿಗೆ ತನ್ನ ವಾಮಭಾಗದಲ್ಲಿ ಸ್ಥಳ ಕೊಟ್ಟನು. ಎಲ್ಲ ದೇವತೆಗಳನ್ನು "ಮಹಾಕೂಟೇಶ್ವರ" ಯುಘೇ ಯುಘೇಯೆಂದು ಗಗನ ಮಾರ್ದ್ವನಿಗೊಳ್ಳುವಂತೆ ಜಯ ಘೋಷಣೆ ಮಾಡಿದರು. ಮತ್ತು ನಾರದ ಮುನಿವರನು ಈ ಕ್ಷೇತ್ರದಲ್ಲಿ ಸಿಂಹಾಸುರ ರಾಕ್ಷಸನು ದೇವತೆಗಳಿಗೆ ಉಪದ್ರವ ಕೊಡುತ್ತ ಮದಾಂಧನಾಗಿ ಮೆರೆಯುತ್ತಲಿದ್ದಾನೆ ಅವನನ್ನು ಮರ್ದಿಸಿ ನಮ್ಮನ್ನು ಅವನ ಹಾವಳಿಯಿಂದ ರಕ್ಷಿಸಬೇಕೆಂದು ದೇವತೆಗಳೆಲ್ಲರ ಪರವಾಗಿ ಬೇಡಿಕೊಂಡನು. ಶಂಕರನು "ತಥಾಸ್ತು" ಎಂದು ಅಭಯವನಿತ್ತನು.

ಶಿವ ಶಕ್ತಿಯ ಭಿನ್ನೌಚ ।
ವಿಶ್ವಂಭರಾದಿ ರೂಪಕ : ।
ಮಹಾಕೂಟೇಶ್ವರ ಸ್ವಾಮಿನ್ ।
ವಂದೇ ಹಂ ಪಾಹಿಮಾಂಸದಾ ॥

ಎಂದು ದೇವತೆಗಳು ಕೊಂಡಾಡಿ ಪಾಡಿದರು. ಶಿವ-ಶಕ್ತಿಯರು ಅಭಿನ್ನವೆಂಬ ಅರ್ಥದಲ್ಲಿ ಅರ್ಧನಾರೀಶ್ವರನಾಗಿ ದೇವತೆಗಳಿಗೆ ದರ್ಶನ ಕೊಟ್ಟು ಶಿವ-ಶಕ್ತಿಯರ ಮಹಾ ಸಂಗಮವೇ "ಮಹಾಕೂಟ" ಎಂದು ಅನ್ವರ್ಥಕನಾಮ ಉಂಟಾಯಿತು. ನಿಷ್ಕಲ "ಮಹಾಕೂಟೇಶ್ವರ"ನ ಸಕಲರೂಪನಾದ ಅರ್ಧನಾರೀಶ್ವರ ಸುಂದರ ಮೂರ್ತಿಯನ್ನು ಸಂಗಮೇಶ್ವರ ದೇವಾಲಯದ ಪಶ್ಚಿಮ ಭಾಗದ (ಬೆನ್ನುಗೋಡೆ) ಬಿತ್ತಿಯಲ್ಲಿ ನೋಡಬಹುದು. ಮತ್ತು ಶಿವ-ಸತಿಯರನ್ನು ಎಲ್ಲಿ ದೇವತೆಗಳು ದರ್ಶನ ಪಡೆದ ಈ ಸ್ಥಳವು "ಮಹಾಕೂಟ"ವೆಂದು ಪ್ರಸಿದ್ದವಾಯಿತೆಂದು ಹೇಳಬಹುದು.[೧೨]

ಸಿಂಹಾಸುರನೆಂಬುವವನು ಶ್ರೀ ಮಹಾಕೂಟ ಕ್ಷೇತ್ರದಲ್ಲಿ ತಪಗೈಯುತ್ತಿರುವ ದೇವತೆಗಳಿಗೆ ಮತ್ತು ತಪಸ್ವಿಗಳಿಗೆ ಬಹಳ ತೊಂದರೆ ಕೊಡುತ್ತಿದ್ದನು. ಅವನ ಉಪದ್ರವವನ್ನು

ಈ ಮೊದಲು ದೇವತೆಗಳು ಶಿವನಿಗೆ ಅರಿಕೆ ಮಾಡಿಕೊಂಡಿರುವುದೂ ಆಗಿತ್ತು. ಇವನು ಶಿವನಿಂದ ವರ ಪಡೆದನು. ಹೀಗೆ; ಒಮ್ಮೆ ಶಿವನ ಒಲುಮೆಗೆಂದು ಉಗ್ರ ತಪಗೈದನು. ಶಿವನು ಅವನ ತಪಸ್ಸಿಗೆ ಪ್ರಸನ್ನನಾಗಿ ದೈತೇಂದ್ರಾ? ನಿನ್ನ ತಪಸ್ಸಿಗೆ ಮೆಚ್ಚಿರುವೆ ನಿನಗೆ ಯಾವ ವರಬೇಕು?! ಎಂದನು. ಅಜ್ಞಾನದಿಂದ ಅಂಧರಾಗಿ ಅಸೂರಿ ಗುಣ ಪ್ರಧಾನರಾದ ಅಸುರರು ಬೇಡುವವರ ದೇವತೆಗಳ ಮೇಲೆ ಸೇಡು ತೀರಿಸಿಕೊಳ್ಳುವುದು ಆಗಿರುತ್ತದೆ. ಇದು ದಾಯಾದಿ ಮಾತ್ಸರ್ಯದ ಸಹಜ ಗುಣವೂ ಹೌದು. ಆಗ ಸಿಂಹಾಸುರನು ದೇವಾ!! ಮಹಾದೇವಾ "ಮಹಾಕೂಟೇಶ್ವರ" ನಾನು ನಿನ್ನ ಹೊರತಾಗಿ ಇನ್ನಾರಿಂದಲೂ ಸಾಯಲಾರದ "ವರಕರುಣಿಸು" ಎಂದು ತನ್ನ ಮಸ್ತಕವನ್ನು ಶಿವನಪಾದಗಳಲ್ಲಿಟ್ಟುಸ್ತುತಿಸಿದನು.

ನಿಜದಿ ವರವನು ಕೊಡುವೆಯಾದರೆ /
ಭೂಜಗಭೂಷಣ ಬೇಡಿ ಕೊಂಬವೆ /
ಅಜ, ಹರೀ ಸುರರೆನ್ನ ಆಜ್ಞೆಯಲಿರಲಿ ಅನವರತ//
ಗಜವದನಪಿತ ನಿನ್ನ ಹೊರ ತೊಂ/
ದಜಗರಾದಿ ಪಶುಕ್ರಿಯಿಗಳುಬು/

ಈ ತೆರನಾಗಿ ಸ್ತುತಿಸಿದ ಅಸುರನಿಗೆ ಒಳಿತು ಕೆಡುಕೆಂಬುದನ್ನು ವಿಚಾರಿಸದೇ ಶಿವನು "ತಥಾಸ್ತು" ಎಂದನು. ಅಂದಿನಿಂದ ಸಿಂಹಾಸುರನು ಎಲ್ಲ ದೇವತೆಗಳಿಗೆ ಹಾಗೂ ತಪಸ್ವಿಗಳಿಗೆ ಕಂಟಕನಾಗಿ ಮರೆಯಹತ್ತಿದನು. ದೇವತೆಗಳೆಲ್ಲರೂ ದಿಕ್ಕು ಕಾಣದವರಾಗಿ ಅಲ್ಲಿಗಲ್ಲಿಗೆ ತಲೆ ಮರೆಸಿಕೊಂಡಿದ್ದರು. ದೇವತೆಗಳೆಲ್ಲರೂ ಈ ಓಂದೆ ಮೊರೆಯಿಟ್ಟು ಕೇಳಿದಂತೆ ದೇವತೆಗಳಿಗೆ ಅಭಯವನ್ನಿಟ್ಟು ಕಳುಹಿಸಿದ್ದನು. ಶಂಕರನು ಅಸುರಾಧಿಪತಿಗೆ ತಾನು ಕೊಟ್ಟ ವರವನ್ನು ಕಾರ್ಯಗತಗೊಳಿಸಲು ಇದೇ ಸರಿಯಾದ ಸಮಯವೆಂದು ಶಿವನು ವಿಷ್ಣುರೂಪ ಧರಿಸಿದವನಾಗಿ ತಾನೂ ಶ್ರೀಕ್ಷೇತ್ರ ಮಹಾಕೂಟದಲ್ಲಿ ತಪಸ್ಸುಗೈಯ್ಯುವ ನೆಪ ಮುಂದೆ ಮಾಡಿ ಬೇಕಾದ ಸಾಮಗ್ರಿಗಳನ್ನು ದೇವಗಣಗಳಿಂದ ಪೂರ್ವಸಿದ್ಧತೆಯಾಗಿ ಅಣಿಗೊಳಿಸ ಹತ್ತಿದನು. ಅರಣ್ಯದಲ್ಲಿ ತಿರುಗಾಡುತ್ತ ಬಂದ ಸಿಂಹಾಸುರನ ಅನುಚರರು ವಿಷ್ಣು ರೂಪದಲ್ಲಿದ್ದ ಶಿವನೆಂಬುದನ್ನು ಅರಿಯದೇ ಹರಿಯೇ ಹೋಮ ದ್ರವ್ಯಗಳನ್ನು ಸಂಗ್ರಹಿಸುತ್ತಿರುವನೆಂದು ಸಿಂಹಾಸುರನಿಗೆ ಹೇಳಿದರು. ಅಸುರವೈರಿ ಅಸುರಾಂಕಿತ ಭೂಮಿಯಲ್ಲಿ ಯಜ್ಞವನ್ನಾರಂಭಿಸುವನೇ? ಅದು ದೇವತೆಗಳ ಮೇಲಿರುವ ನನ್ನ ಹಗೆತನವನ್ನು ಹುಸಿಗೊಳಿಸಲೆಂದು ಈ ಹೋಮ ಅಲ್ಲವೇ? ಶಿವನಿಂದ ವರ ಪಡೆದ ಈ ಸಿಂಹನ ಭುಜಬಲ ಪರಾಕ್ರಮವನ್ನು ಪರೀಕ್ಷಿಸಲೆಂದೇ ಈ ಹೋಮ; ಅಲ್ಲವೇ?!! ಎಂದು ಗಹಗಹಿಸಿ ನಗುತ್ತ ತನ್ನ ಅಗಣಿತ ಸೈನ್ಯ ಬಂದೊಡನೆ ಸಮರ ಶಾರ್ದೂಲನಂತೆ ಹರಿರೂಪದಲ್ಲಿರುವ ಶಿವನೆದುರು ಬಂದಿಳಿದನು. ಬಿಲ್ಲು, ಭಲ್ಲೆ, ಖಡ್ಗ ಕಠಾರಿಯಿಂದೊಡಗೂಡಿ ಭೀಮಪಾದವನಿಡುತ್ತ

ಎಲೋ ಹರಿಯೇ! ನಮ್ಮ ಅಂಕಿತದಲ್ಲಿರುವ ಈ ಭೂಮಿಯಲ್ಲಿ ಯಾವ ದೇವತೆಯನ್ನು ತಪಸ್ಸು ಯಜ್ಞ ಯಾಗಾದಿಗಳನ್ನು ಮಾಡಗೊಡಲಾರೆವು. ವೈಕುಂಠಕ್ಕೆ ಲಗ್ಗೆ ಹಾಕಬೇಕು. ವೈಕುಂಠಾಧಿಪತಿಯಾಗಬೇಕೆಂಬ ಬಹುದಿನಗಳ ನನ್ನಾಸೆ ಇಂದು ಪೂರೈಸಿದಂತಾಯಿತು. ಎಂದು ಅರ್ಭಟಿಸುತ್ತ ಹರಿರೂಪದಲ್ಲಿರುವ ಶಿವನೊಡನೆ ಘನ ಘೋರ ಯುದ್ಧ ಮಾಡಿದನು. ಅವನ ಶಕ್ತಿ ಪರಾಕ್ರಮವನ್ನು ನೋಡಿ ಶಿವನು ಮೆಚ್ಚಿದನು. ಕುತೂಹಲದಿಂದ ಕಾದಾಡಿದ ಶಿವನು ಅವನಿಗೆ ಪುಣ್ಯ ಕ್ಷೇತ್ರದಲ್ಲಿ ಅನ್ಯಾಯವನ್ನೆಸಗಬಾರದೆಂದು ಉಪದೇಶಿಸಿದ ಮಾತು ಹೀಗಿದೆ.

ಅನ್ಯಸ್ಥಾನೇ ಕೃತಂ ಪಾಪಂ ।
ಪುಣ್ಯಸ್ಥಾನೇ ವಿನಸ್ಯತಿ ।
ಪುಣ್ಯಸ್ಥಾನೇ ಕೃತಂ ಪಾಪಂ ।
ವಜ್ರಲೇಪೇನ ತಿಷ್ಠತಿ ।।

ಕ್ಷೇತ್ರ ನಿವಾಸಿಗಳಿಗೆ, ದರ್ಶನಾರ್ಥಿಗಳಿಗೆ ಭಕ್ತಿಭಾವ ತುಂಬುವ ಈ ಶ್ಲೋಕವನ್ನು ಸಿಂಹಾಸುರನಿಗೆ ಚರಮೋಪದೇಶವಾಗಿದೆ ಎನ್ನುವಂತಿರುವ ಈ ಪವಿತ್ರ ಶ್ಲೋಕದ ಅರ್ಥ ಹೀಗಿದೆ. ಅನ್ಯ ಸ್ಥಾನದಲ್ಲಿ ಮಾಡಿದ ಪಾಪವು ಪುಣ್ಯ ಸ್ಥಾನದಲ್ಲಿ ವಿನಾಶ ಹೊಂದುತ್ತದೆ. ಪುಣ್ಯ ಸ್ಥಾನದಲ್ಲಿ ಮಾಡಿದ ಪಾಪವು ವಜ್ರ ಲೇಪದಂತೆ ಕಠಿಣವಾಗುತ್ತದೆ" (ಈ ಪವಿತ್ರ ಶ್ಲೋಕವು ಮಹಾಕೂಟೇಶ್ವರ ಮಂದಿರವ ರಂಗಮಂಟಪವ ಬಲಕಂಭದ ಮೇಲೆ ಉಲ್ಲೇಖಿಸಿರುವುದನ್ನು ನೋಡಬಹುದು) ಈ ತೆರನಾಗಿ ಹೇಳಿದ ಶಿವನ ಮಾತಿನಲ್ಲಿ ವಿಶ್ವಾಸವಿರಿಸದೇ ಸಿಂಹಾಸುರನು ನಿನ್ನಿಂದ ದೀಕ್ಷೆ ಪಡೆಯಲು ಬಂದಾಗ ಈ ಉಪದೇಶ ಮಾಡುವಿಯಂತೆ ಇದು ಬಲಾಬಲ ಪ್ರದರ್ಶಿಸುವ ಯುದ್ಧಭೂಮಿ ಯುದ್ಧ ಮಾಡೆಂದು ವಿಷ್ಣುರೂಪಿ ಶಿವನೊಂದಿಗೆ ವಾಗ್ಯುದ್ಧ ಬಾಹುಯುದ್ಧ, ಮುಷ್ಟಿಯುದ್ಧ, ಮಲ್ಲಯುದ್ಧ ಇನ್ನು ಬೇರೆ ಬೇರೆ ಯುದ್ಧಗಳಿಂದ ಬಹು ಕಾಲಗಳವರೆಗೆ ಕಾದಾಡಿದನು. ರಾಕ್ಷಸರಾಜನ ಶೌರ್ಯ–ಸಾಹಸಗಳಿಗೆ ಮೆಚ್ಚಿ ಕುತೂಹಲದಿಂದ ಕಾದಾಡಿ ಕೊನೆಗೆ ಶಿವನು ಸುದರ್ಶನ ಚಕ್ರವನ್ನು ಪ್ರಯೋಗಿಸಿದನು.ಚಕ್ರವು ತಗಲಿದೊಡನೆ ಸಿಂಹಾಸುರನು ಮೂರ್ಛಿತನಾಗಿ ಭೂಮಿಗುರುಳಿದನು. ಪುನಹ ಎಚ್ಚೆತ್ತು ಆಲೋಚಿಸಿದನು. ಹರಿಬ್ರಹ್ಮಾದಿಸುರನರ ಆರಿಂದಲೂ ಸೋಲು ನನಗಿಲ್ಲ! ಆದರೇ! ವಿಷ್ಣುವಿನ ಸುದರ್ಶನದಿಂದ ಮೂರ್ಛಿತನಾಗಬೇಕಾದರೇ ನನಗೆ ಶಿವನಿತ್ತ ವರವು ಸುಳ್ಳೇ? ಛೇ! ಛೇ! ಹಾಗೆಂದಿಗೂ ಆಗಲಾರದು "ವಿನಾಶ ಕಾಲೇ ವಿಪರೀತ ಬುದ್ದಿ" ಅಲ್ಲವೇ? ನನ್ನ ಬುದ್ದಿ ಕೆಟ್ಟಿರುವುದರಿಂದ ನನ್ನ ಸಂಹಾರಕ್ಕೆ ಶಿವನೇ ವಿಷ್ಣುವಿನ ರೂಪದಲ್ಲಿ ಬಂದಿರುವುದು ಸತ್ಯ ಎಂದು ವಿಚಾರಿಸಿ ಎದುರಿಗೆ ಬೃಹದಾಕಾರದಲ್ಲಿ ನಿಂತಿರುವ ವಿಷ್ಣುವಿನ ರೂಪದಲ್ಲಿರುವ ಶಿವನನ್ನು ಆಪಾದ ಮಸ್ತಕದವರೆಗೆ ನೋಡಿ ರುದ್ರಪಾದಗಳನ್ನು ಕಂಡು

ಗಾಬರಿಗೊಂಡು ಶಿವನೇ? ನನ್ನ ಮಹಾಪರಾಧವನ್ನು ಕ್ಷಮಿಸಿ ಕಾಪಾಡಬೇಕು ಎಂದನು. ರೌದ್ರಮಯ ಪಾದಗಳಲ್ಲಿ ಸಾಷ್ಟಾಂಗ ಪ್ರಣಾಮಗೈದನು.

ಆಗ ಶಿವನು ನಾನು ಕೊಟ್ಟಿರುವ ವರದ ದುರುಪಯೋಗ ಮಾಡಿಕೊಂಡ ನಿನ್ನನ್ನು ಸಂಹರಿಸುವುದಾಗಿ ದೇವತೆಗಳಿಗೆ ವಚನವಿತ್ತಿರುವೆ. ಎಂದಾದರೂ ನನ್ನಿಂದಲೇ ನಿನಗೆ ಮರಣ ಬರಬೇಕು ಇದು ನನ್ನಿಂದ ನೀನು ಪಡೆದವರ ನಿನ್ನನ್ನು ಸಂಹರಿಸುವ ಮುನ್ನ ನನ್ನ ಪಾದಗಳ ಸ್ಪರ್ಶ ನಿನಗಾಗಿರುವುದರಿಂದ ನಿನಗೊಂದು ವರ ಕೊಡುವೆ ಕೇಳು ಎಂದನು. ಆಗ ಸಿಂಹಾಸುರನು ಜಗತ್ತಿನಲ್ಲಿ ಮರಣದೊಂದಿಗೆ ಕೀರ್ತಿಅಪಕೀರ್ತಿಗಳು ಸತ್ಯವಾದವುಗಳೆಂದು ನಂಬಿದವನಾಗಿ ಪರಿತಪಿಸಹತ್ತಿದನು. ಆಗ ಶಿವನು ದಯಾಪೂರ್ಣನಾಗಿ ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯ ಪದವಿಗಳಲ್ಲಿ ಯಾವುದಾದರೊಂದನ್ನು ಬೇಡು ಎಂದನು.

ಸತ್ಯದಲ್ಲಿ ಅಸತ್ಯ ಅಡಗುವಂತೆ! ಜ್ಞಾನದಲ್ಲಿ ಅಜ್ಞಾನ ಅಡಗುವಂತೇ! ಪ್ರಕಾಶದಲ್ಲಿ ಕತ್ತಲೆ ಅಡಗುವಂತೇ! ಅಜ್ಞಾನವೆಂಬ ಕತ್ತಲೆಯಿಂದ ಬಿಡುಗಡೆ ಹೊಂದಿ ಸಿಂಹಾಸುರನು ವಿವೇಕಕ್ಕೆ ಅವಕಾಶವಿತ್ತು ವಿಚಾರಿಸಿ ಇಂತೆಂದನು. "ಸ್ವಾಮಿ"!! ನನಗಾವ ಪದವಿಯೂ ಬೇಡಾ ಹರಿ ಹರರ ಅಬೇದ ಸೂಚಕವಾಗಿ ವಿಷ್ಣುರೂಪದಿಂದ ನನ್ನನ್ನು ಸಂಹಾರ ಗೈಯುವ ಉದ್ದೇಶದಿಂದ ದರುಶನವಿತ್ತಿರುವೆ. ಈ ಪ್ರಸಂಗದ ಕುರುಹಿಗಾಗಿ ಈ ತೀರ್ಥಕ್ಕೆ ವಿಷ್ಣು ಪುಷ್ಕರಣಿ ಅಥವಾ ಶಿವಪುಷ್ಕರಣಿ ಎಂಬ ಪವಿತ್ರನಾಮ ಧರಿಸಿ ಅಕ್ಷಯವಾಗಿರುವಂತೆ ಆಶೀರ್ವದಿಸು ಈ "ತೀರ್ಥದಲ್ಲಿ ಯಾರು ಪವಿತ್ರಭಾವನೆಯಿಂದ ಸ್ನಾನ ಮಾಡುವರೋ ಅವರ ಜನ್ಮ-ಜನ್ಮಾಂತರ ಪಾಪಗಳಿದ್ದರೂ ನಾಶವಾಗಬೇಕು. ಮತ್ತು ನಾನು ನಿನ್ನನ್ನು ಪ್ರಸನ್ನಿಕರಿಸಿಕೊಂಡ ಈ ಬೆಟ್ಟಕ್ಕೆ ಸಿಂಹಾಚಲವೆಂದು ಹೆಸರು ಬರಬೇಕು ಎಂದು ಬೇಡಿಕೊಂಡನು. ಶಿವನು ತಥಾಸ್ತು ಎಂದನು.

ಹಾಗೆಯೇ ಅವನಲ್ಲಿದ್ದ ರಾಕ್ಷಸ ಗುಣಪ್ರಧಾನ ತಾಮಸಿಗುಣ ದೇಹವನ್ನು ಸಂಹರಿಸಿದನು. ಈ ಕುರುಹು ವೀರಭದ್ರ ದೇವಾಲಯದ ಹಿಂಬಾಗದ ಶಿಲಾಮಂಟಪದಲ್ಲಿ ಅಖಂಡ ಶಿಲೆಯಲ್ಲಿ ರುದ್ರಪಾದಗಳೆರಡು ಮೂಡಿರುವುದನ್ನು ಈಗಲೂ ನೋಡಬಹುದು.

ಶಿವನು ಈ ಪುಣ್ಯ ಭೂಮಿಯಲ್ಲಿ ತನ್ನ ಭಕ್ತನನ್ನು ತಾನೇ ಕೊಂದನೆಂದು ಮನದಲ್ಲಿ ನೆಮ್ಮದಿ ಕಳೆದುಕೊಂಡವನಾಗಿ ಅನ್ಯ ಕ್ಷೇತ್ರದಲ್ಲಿ ಮಾಡಿದ ಪಾಪ ಪುಣ್ಯ ಕ್ಷೇತ್ರದಲ್ಲಿ ನಾಶವಾಗುತ್ತದೆ. ಪುಣ್ಯ ಕ್ಷೇತ್ರದಲ್ಲಿ ಮಾಡಿದ ಪಾಪ ವಜ್ರಲೇಪದಂತೆ ಕಠಣವಾಗುತ್ತದೆ ಎಂದು ನನ್ನ ಭಕ್ತನಿಗೆ ನಾನೇ ಹೇಳಿ ಈ ಪುಣ್ಯಕ್ಷೇತ್ರದಲ್ಲಿ; ನನ್ನ ಭಕ್ತನನ್ನು ನಾನೇ ಸಂಹಾರ ಮಾಡಿರುವುದರಿಂದ ನನಗೂ ಕೂಡಾ ಪಾಪ ಬರುವುದೆಂದು ನಿಶ್ಚಯಿಸಿದನು.

ಈ ಪಾಪ ವಿಮೋಚನೆಗೆ ಸಿಂಹಾಸುರನು ಬೇಡಿದ ಕೊನೆಯ ವರವನ್ನು ನಾನೇ ಮೊದಲಿಗೆ ಉಪಯೋಗಿಸಿಕೊಳ್ಳಬೇಕೆಂದು ಈ ತೀರ್ಥದಲ್ಲಿ ಸ್ನಾನಗೈದನು. ಹರಿಯಾಗಿ ಬಂದು ಹರನಾಗಿ ಸಂಹರಿಸಿ ಮನಸ್ಸಿನ ನೆಮ್ಮದಿಗೆ ಸಂಕೋಚ ಭಾವನೆಯ ವಿಮೋಚನೆಗೆ ಸ್ನಾನಗೈದ ಈ ತೀರ್ಥವು "ಶಿವ (ವಿಷ್ಣು) ಪುಷ್ಕರಣಿ" ಎಂದು ಪವಿತ್ರ ತೀರ್ಥವಾಗಿ ಕಲ್ಯಾಣಿರೂಪದಲ್ಲಿ "ಶ್ರೀಮಹಾಕೂಟೇಶ್ವರ" ಸ್ವಾಮಿಯ ಕ್ಷೇತ್ರದ ಪ್ರಕಾರದ ಒಳಭಾಗದ ಮಧ್ಯದಲ್ಲಿದೆ[೧೩]

ಮಹಾಕೂಟವು ಇಂತಹ ದಟ್ಟವಾದ ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವುದನ್ನು ನೋಡಿದರೆ ಅದು ನಿಜವಾಗಿಯೂ ಇದು ಶೈವಕ್ಷೇತ್ರವಾಗಿ ಬೆಳೆದಿದೆ. ಎಂದು ತಿಳಿದು ಬರುತ್ತದೆ. ಈ ಕ್ಷೇತ್ರವು ದಕ್ಷಿಣಕಾಶಿ ಎಂದು ಪ್ರತೀತಿಯನ್ನು ಪಡೆದಿರುವುದು ನಮ್ಮ ಕನ್ನಡ ನಾಡಿಗೆ ಒಂದು ಹಿರಿಮೆಯನ್ನು ತಂದು ಕೊಟ್ಟಿದೆ.

೨.೩. ಐತಿಹಾಸಿಕ ಹಿನ್ನೆಲೆ :

ಪ್ರಾಗಿತಿಹಾಸ ಕಾಲವು ಶಿಲಾಯುಗದ ಕಾಲ. ಅದನ್ನು ೧. ಹಳೆ ಶಿಲಾಯುಗ ೨. ಸೂಕ್ಷ್ಮಶಿಲಾಯುಗ ೩. ನವಶಿಲಾಯುಗ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಮಹಾಕೂಟ ಪ್ರದೇಶದಲ್ಲಿ ಈ ಮೂರು ಬಗೆಯ ಸಂಸ್ಕೃತಿಗಳು ನೆಲೆಗೂಡಿದ್ದು ತಿಳಿದು ಬರುತ್ತದೆ.

ಆದಿ ಹಳೆಯ ಶಿಲಾಯುಗ : ಈ ಸಂಸ್ಕೃತಿಯ ನೆಲವಿದು ಅಶ್ಯೂಲಿಯನ್ ಮಾದರಿ ಉಪಕರಣಗಳು ದೊರೆತಿವೆ. ಇದು ಹಳೆ ಮಹಾಕೂಟದಲ್ಲಿ ದೊರೆತಿವೆ.

ಅಂತ್ಯ ಹಳೆಯ ಶಿಲಾಯುಗ : ಈ ಕಾಲ ಮಾನದ ವರ್ಣಚಿತ್ರಗಳು ಗವಿಯಲ್ಲಿ ದೊರೆತಿವೆ. ಇದು ಹೊಸ ಮಹಾಕೂಟದಲ್ಲಿ ಕಂಡು ಬರುತ್ತವೆ.[೧೪]

ಸೂಕ್ಷ್ಮ ಶಿಲಾಯುಗ : ಈ ಹಂತದ ವರ್ಣಚಿತ್ರಗಳು ಕಂಡು ಬಂದಿವೆ. ಇದು ಹೊಸಮಹಾಕೂಟದಲ್ಲಿ ಕಂಡು ಬರುತ್ತವೆ.

ಶಿಲಾ-ತಾಮ್ರಯುಗ : ಈ ಕಾಲಮಾನದ ವರ್ಣಚಿತ್ರಗಳು ಗವಿಯಲ್ಲಿ ದೊರೆತಿವೆ. ಕೆ.ಬಿ.ಶಿವತಾರಕ[೧೫] ಅವರು ಮಹಾಕೂಟ ಪ್ರದೇಶದಲ್ಲಿ ಆದಿ ಹಳೆಯ ಶಿಲಾಯುಗದ ಉಪಕರಣಗಳು ಮತ್ತು ಅಂತ್ಯ ಹಳೆಯ ಶಿಲಾಯುಗದ ಉಪಕರಣಗಳು ಮತ್ತು ಅಂತ್ಯ ಹಳೆಯ ಶಿಲಾಯುಗದ ವರ್ಣಚಿತ್ರಗಳನ್ನು ಮತ್ತು ಸೂಕ್ಷ್ಮ ಶಿಲಾಯುಗದ ವರ್ಣಚಿತ್ರಗಳನ್ನು ಮತ್ತು ಶಿಲಾತಾಮ್ರಯುಗದ ವರ್ಣಚಿತ್ರಗಳನ್ನು ಶೋಧಿಸಿದರು.

ಮಹಾಕೂಟ, ಪಟ್ಟದಕಲ್ಲು, ಐಹೊಳೆಗಳು ಇನ್ನಿತರ ಮಹತ್ವದ ರಾಜಧಾನಿಗಳು ಒಂದು ಗುಡ್ಡದ ಕಾರಣದಿಂದಾಗಿ ಬೇರ್ಪಟ್ಟಿರುವ ಮಹಾಕೂಟವು ಪ್ರಾಚೀನ ರಾಜಧಾನಿಸ್ಥಳವೆಂದು ಕಂಡುಬರುತ್ತದೆ. ಮಂಗಳೇಶನು (ಕ್ರಿ.ಶ.೫೯೭-೬೧೦) ತನ್ನ ತಾಯಿಯ ಅಪೇಕ್ಷೆಗನುಸಾರವಾಗಿ ಮಹಾಕೂಟೇಶ್ವರನಾಥನಿಗೆ ಅನೇಕ ದತ್ತಿಗಳನ್ನು ಬಿಟ್ಟನೆಂದು ತಿಳಿದು

ಬರುತ್ತದೆ. "ಮಹಾಕೂಟ" ಎಂಬುದು ಈ ರಾಜಧಾನಿಯ ಪ್ರಾಚೀನ ಹೆಸರು. ಆ ತರುವಾಯದಲ್ಲಿ ಅಲ್ಲಿ ನಿರ್ಮಾಣಗೊಂಡ ಹಲವಾರು ದೇವಾಲಯ ದತ್ತಿ ಶಾಸನಗಳಿಂದಾಗಿ ಅದೊಂದು ಮಹತ್ವದ ಕೇಂದ್ರಸ್ಥಾನವೆನಿಸಿರಬೇಕು. ರಾಜಮನೆತನದವರು ಮತ್ತು ಉನ್ನತ ಅಧಿಕಾರಿವರ್ಗದವರು ಆಗಾಗ ಸಂದರ್ಶವಿಯುತ್ತಿದ್ದ ಸ್ಥಳವಿದಾಗಿತ್ತು. ಮಹಾಕೂಟೇಶ್ವರ ದೇವರ ಪೂಜೆಗೋಸ್ಕರ ಮಹಾಸಾಮಂತ ಬಪ್ಪುವರಸನು ಮಹಾಕೂಟಕ್ಕೆ ಬಂದು (ಮಾಗುಡಕವೆಂದು) ಹೋದನೆಂದು ಒಂದು ಶಾಸನವ ಉಲ್ಲೇಖವಿದೆ.[೧೬]

ಮಹಾಕೂಟೇಶ್ವರ ದೇವಾಲಯಗಳ ಸಂಕೀರ್ಣದ ನಿರ್ಮಾಣವನ್ನು ಚಾಲುಕ್ಯ ಜಯಸಿಂಹನ ಮಗ ರಣರಂಗ ಕ್ರಿ.ಶ. ೫೫೦ರಲ್ಲಿ ಮಾಡಿದನು. ಬಾದಾಮಿಚಾಲುಕ್ಯರು ಶೈವ ಮತಕ್ಕೆ ಆಶ್ರಯದಾತರಾಗಿದ್ದರೆಂಬುದಕ್ಕೆ ಬಾದಾಮಿ, ಮಹಾಕೂಟ, ಪಟ್ಟದಕಲ್ಲು, ಐಹೊಳೆಗಳಲ್ಲಿ ನಿರ್ಮಿಸಿದ ಶಿವಾಲಯಗಳು ಸಾಕ್ಷಿಯಾಗಿವೆ. ನಂತರ ಮಂಗಳೇಶನು ಕಾಚುರಿ (ಕಲಚುರಿ) ವಂಶದ ಬುದ್ದವರ್ಮವನ್ನು ಯುದ್ದದಲ್ಲಿ ಸೋಲಿಸಿ ವಶಪಡಿಸಿಕೊಂಡ ಸಮಸ್ತ ಸಂಪತ್ತನ್ನು ಆರಾಧ್ಯದೇವತೆ ಪೂಜೆ ವೈಭವ ಪೂರ್ಣವಾಗಿ ನಿರಂತವಾಗಿ ನಡೆಯುವದಕ್ಕೆ ವಿನಿಯೋಗಿಸಿದನು. ಅಲ್ಲದೇ ಈ ವಿಜಯದ ಗುರುತಿಗಾಗಿ ಮಹಾಕೂಟ ದೇವಾಲಯದ ಎದುರಿಗೆ ಕ್ರಿ.ಶ. ೬೦೨ ಎಪ್ರಿಲ್ ೧೨ರಂದು ಧರ್ಮಸ್ತಂಭ ನಿಲ್ಲಿಸಿದನೆಂದು ಶಾಸನದಿಂದ ಸ್ಪಷ್ಟವಾಗುವುದು. ಸಿದ್ದಾರ್ಥ ಸಂವತ್ಸರ ವೈಶಾಖ ಪೂರ್ಣಿಮಯಂದು ಧರ್ಮಸ್ಥಂಭ ನಿಲ್ಲಿಸಿದ್ದರಿಂದ ಇಂದಿಗೂ ವೈಶಾಖ ಪುರ್ಣಿಮ (ಆಗಿಹುಣ್ಣಿಮೆ)ಯ ದಿನ ಪ್ರತಿ ವರ್ಷ ರಥೋತ್ಸವ ಜರುಗುವುದು ಸದ್ಯ ಮಂಗಳೇಶನ ಈ ಧರ್ಮಸ್ತಂಭವು ವಿಜಾಪುರದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ. ಈ ದೇವಾಲಯಕ್ಕೆ ರಾಣಿ ದುರ್ಲಭದೇವಿ ಹತ್ತು ಗ್ರಾಮಗಳನ್ನು ದತ್ತಿ ಬಿಟ್ಟಳೆಂದು ಶಾಸನದಿಂದ ತಿಳಿಯುತ್ತದೆ. ವಿಜಯಾದಿತ್ಯನ ಆಸ್ಥಾನದಲ್ಲಿಯ ರಾಜನರ್ತಕಿ ವಿನಾಪೋಟಿ ಮಹಾಕೂಟೇಶ್ವರನಿಗೆ ಬಂಗಾರದ ಪೀಠವನ್ನು ಬೆಳ್ಳಿಯ ಛತ್ರಿಯನ್ನು ಅಷ್ಟಶತಕ್ಷೇತ್ರ ದಾನವನ್ನು ಸಮರ್ಪಿಸಿದ ಉಲ್ಲೇಖ ಮಹಾಕೂಟೇಶ್ವರ ಮಂದಿರದ ಮುಖಮಂಟಪದಲ್ಲಿಯ ಬಲಕಂಬದಲ್ಲಿಯ ಶಾಸನವೊಂದರಲ್ಲಿದೆ. ಈ ಶಾಸನವು ಅಂದಿನ ವೇಶ್ಯಯರ ಧರ್ಮಬುದ್ದಿ ಮತ್ತು ದಾನಗುಣವನ್ನು ಎತ್ತಿ ತೋರಿಸುತ್ತದೆ.[೧೭]

ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ಮಹಾಕೂಟದಲ್ಲಿ ದೇವಾಲಯಗಳ ರಚನಾಕಾರ್ಯವು ತೀವ್ರಗೊಂಡಿತು. ಅಲ್ಲಿಯ ಪ್ರಾಕಾರದಲ್ಲಿಯ ರೇಖಾನಾಗರ ಶಿಖರ ವಿನ್ಯಾಸದ ಗುಡಿಗಳು ಈತನ ಕಾಲದಲ್ಲಿಯೇ ನಿರ್ಮಾಣಗೊಂಡವು.[೧೮] ಇಮ್ಮಡಿ ಕೀರ್ತಿವರ್ಮ ಕಾಲದಲ್ಲಿ ಮಹಾಕೂಟದ ಕದಂಬ ನಾಗರಶೈಲಿಯ ಸಣ್ಣ ದೇವಾಲಯಗಳು ನಿರ್ಮಾಣಗೊಂಡವು.[೧೯]

ಮಹಾಕೂಟವು ಒಂದು ಐತಿಹಾಸಿಕ ಹಿನ್ನೆಲೆಯಲ್ಲಿ ಪ್ರಾಚೀನ ಕಾಲದಿಂದ ತನ್ನದೇ

ಆದ ಒಂದು ಇತಿಹಾಸವನ್ನು ಹೊಂದಿದೆ. ಇದು ಬಾದಾಮಿ ಚಾಲುಕ್ಯರ ಕಾಲದಲ್ಲಿ ಹೆಚ್ಚು ಬೆಳಕಿಗೆ ಬಂದಿರುವುದು ಕಂಡು ಬರುತ್ತದೆ. ಇದು ಚಾಲುಕ್ಯರು ಪ್ರಾಚೀನ ರಾಜಧಾನಿಯಾಗಿ ಅದು ಗುಡ್ಡದಿಂದ ಬೇರ್ಪಟ್ಟು ಬಾದಾಮಿ ರಾಜದಾನಿಯಾಯಿತು. ಎಂದು ನಮಗೆ ಇತಿಹಾಸದಿಂದ ತಿಳಿದು ಬರುತ್ತದೆ.

ಅಡಿಟಿಪ್ಪಣಿ

೧. ಶೀಲಾಕಾಂತ ಪತ್ತಾರ. ೨೦೦೦, ಬಾದಾಮಿ ಸಾಂಸ್ಕೃತಿಕ ಅಧ್ಯಯನ. ಪ್ರಸಾರಾಂಗ ಕ.ವಿ.ವಿ. ಹಂಪಿ ಪು-೧೧

೨. ಮುನಿಸ್ವಾಮಿ ಆರ್. ೧೯೯೯, ಬಿಜಾಪುರ ಜಿಲ್ಲೆಯ ಕರ್ನಾಟಕ ಗ್ಯಾಸೆಟಿಯರ್, ಅಭಿಮಾನಿ ಪ್ರಕಾಶನ ರಾಜಾಜಿನಗರ, ಬೆಂಗಳೂರು ಪು-೩

೩. ಶೀಲಾಕಾಂತ ಪತ್ತಾರ, ಪೂರ್ವೋಕ್ತ, ಪು-೧೧

೪. ಅದೇ, ಪು-೧೨

೫. ದೇವರಕೊಂಡಾರೆಡ್ಡಿ(ಸಂ),೨೦೦೦, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೯. ಪ್ರಸಾರಾಂಗ, ಕ.ವಿ.ವಿ.ಹಂಪಿ ಪು-೧i

೬. ಚಿದಾನಂದಮೂರ್ತಿ ಎಂ, ೨೦೦೨, ಭಾಷಾವಿಜ್ಞಾನ ಮತ್ತು ಛಂದಸ್ಸು, ಸಪ್ನ ಬುಕ್‌ಹೌಸ್, ಬೆಂಗಳೂರು ಪು-೧೪

೭. ಕರ್ನಾಟಕ ಸರ್ಕಾರ, ೧೯೯೨, ಕರ್ನಾಟಕದ ಪರಂಪರೆ ಭಾಗ-೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಪು-೨೬೪

೮. ಸೇಸುನಾಥನ್ ಐ. ೨೦೦೬, ಕರ್ನಾಟಕದ ಪ್ರವಾಸಿ ತಾಣಗಳು-೧ ಸಾದನಾ ಪ್ರಕಾಶನ ಬೆಂಗಳೂರು ಪು-೧೯೫

೯. ಶಂಕರಯ್ಯಶಾಸ್ತ್ರಿಗಳು ಬ. ಹೊಸಗೌಡರ. ೧೯೯೮, ಶ್ರೀಕ್ಷೇತ್ರ ಮಹಾಕೂಟ ಶ್ರೀ ಸಂಗಮೇಶ ಆಫ್‌ಸೆಟ್ ಪ್ರಿಂಟರ್ಸ್ ಗುಳೇದಗುಡ್ಡ ಪು-೨

೧೦. ಅದೇ, ಪು-೩

೧೧. ಅದೇ, ಪು-೬

೧೨. ಅದೇ, ಪು-೭

೧೩. ಅದೇ, ಪು-೧೨

೧೪. ಶಿವತಾರಕ್ ಕೆ.ಬಿ, ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ ಕ.ವಿ.ವಿ.ಹಂಪಿ ಪು - ೩೯೬

೧೫. ಅದೇ, ಪು -೩೯೮

೧೬. ಕರ್ನಾಟಕ ಸರಕಾರ, ೧೯೯೨, ಪೂರ್ವೋಕ್ತ. ಪು-೨೬೪

೧೭. ಕರವೀರಪ್ರಭು ಕ್ಯಾಲಕೊಂಡ - ೧೯೯೭, ಚಾಲುಕ್ಯ ವಾಸ್ತುಶಿಲ್ಪ ವೈಭವ. ಪ್ರಸಾರಾಂಗ ಕ.ವಿ.ವಿ. ಹಂಪಿ ಪು-೨೦

೧೮. ಶೀಲಾಕಾಂತ ಪತ್ತಾರ. ಪೂರ್ವೋಕ್ತ ಪು-೧೬

೧೯. ರಾಜೇಂದ್ರಪ್ಪ ಎಸ್, ೧೯೯೯, ಬಿಜಾಪುರ ಜಿಲ್ಲೆ ಭಾರತ ಗ್ಯಾಸಿಟಿಯರ್ ಕರ್ನಾಟಕ ರಾಜ್ಯ, ಕರ್ನಾಟಕ ರಾಜ್ಯ ಸರ್ಕಾರ ಪು-೭೯

ಅಧ್ಯಾಯ : ಮೂರು

ಶಾಸನಗಳ ವೈವಿಧ್ಯತೆ

'ಶಾಸನ' ಎಂಬ ಪದವನ್ನು ವಿದ್ವಾಂಸರು ಆಂಗ್ಲ ಭಾಷೆಯಲ್ಲಿ "Inscription" ಎಂಬ ಪದಕ್ಕೆ ಸಮಾನಾರ್ಥಕ ಪದವಾಗಿ ಬಳಸುತ್ತಾರೆ. ಇನ್‌ಸ್ಕ್ರಿಪ್‌ಷನ್ ಎಂದರೆ ಬಹುಕಾಲ ಉಳಿಯಬಲ್ಲ ಶಾಶ್ವತವಾದ ವಸ್ತುವಿನ ಮೇಲೆ ಕೊರೆಯಲ್ಪಟ್ಟ ಬರಹ ಎಂದು ಅರ್ಥ.[೧] "Inscribe" ಎಂದರೆ ಅಕ್ಷರಗಳನ್ನು ಕೆತ್ತು, ಕಂಡರಿಸು, ಎಂದು ಅರ್ಥ.[೨] ಇದೇ ಅರ್ಥದಲ್ಲಿ 'ಶಾಸನ' ಎಂಬ ಪದವನ್ನು ಇಂದು ನಾವು ಬಳಸುವುದು 'ಕೊರೆಯುವ ಕ್ರಿಯೆ' ಮತ್ತು ಬಹುಕಾಲ ಉಳಿಯುವ ಲೇಖನ ಸಾಮಗ್ರಿ ಈ ಎರಡೂ ಅಂಶಗಳು ಯಾವ ರೀತಿಯ ಬರಹ 'ಶಾಸನ' ಅಥವಾ ಶಾಸನವಲ್ಲ ಎಂಬುದನ್ನು ನಿರ್ಧರಿಸುವಂತಹವುಗಳಾಗಿವೆ. ಶಾಸನವೆಂದರೆ ಪ್ರಾಚೀನ ಬರಹಗಳೇ ಆಗಿರಬೇಕೆಂದು ನಿಯಮವೇನೂ ಇಲ್ಲ. ಇಂದು ಕಲ್ಲು, ತಾಮ್ರ, ಬೆಳ್ಳಿ ಮುಂತಾದ ಲೋಹಗಳ ಮೇಲೆ ಕೊರೆಯಲ್ಪಟ್ಟ ಬರಹಗಳೂ ಸಹ ಶಾಸನಗಳೇ.

ಭೂರ್ಜಪತ್ರ, ತಾಳೇಗರಿ ಮುಂತಾದ ಲೇಖನ ಸಾಮಗ್ರಿಗಳ ಮೇಲೆ ಕಂಠದಿಂದ ಕೊರೆದು ಬರೆದಿರುವ ಬರಹಗಳು ಭಾರತದಲ್ಲಿ ನಮಗೆ ವಿಫುಲವಾಗಿ ದೊರೆಯುತ್ತವೆ. ಇವುಗಳು ಬಹುಕಾಲ ಉಳಿಯುವ ಲೇಖನ ಸಾಮಗ್ರಿಗಳು ಇರುವುದರಿಂದ ಇಂಥ ಬರಹಗಳನ್ನು ಶಾಸನಗಳೆಂದು ಪರಿಗಣಿಸಲಾಗುವುದಿಲ್ಲ. ಹಾಗೆಯೇ ಬಹುಕಾಲ ಉಳಿಯಬಹುದಾದ ಸಾಮಗ್ರಿಗಳ ಮೇಲೆ ಮಸಿಯಿಂದಲೋ, ಬಣ್ಣದಿಂದಲೋ ಬರೆದಿರುವ ಬರಹಗಳು ನಮಗೆ ದೊರೆಯುತ್ತವೆ. ಇವುಗಳನ್ನು ಶಾಸನಗಳೆಂದು ಪರಿಗಣಿಸಲಾಗದು. ಆದ್ದರಿಂದ ಇನ್‌ಸ್ಕ್ರಿಪ್‌ಷನ್ ಎಂಬ ಆಂಗ್ಲ ಪದಕ್ಕೆ ಪರ್ಯಾಯವಾಗಿ ಬಳಸುವ 'ಶಾಸನ' ಎಂಬ ಪದವು ಬರಹದ ಮೇಲ್ಮೈ ಲಕ್ಷಣಗಳನ್ನು ಕುರಿತದ್ದೇ ವಿನಃ ಅದರ ಆಂತರಿಕ ವಿಷಯವನ್ನಲ್ಲ ಎಂಬುದನ್ನು ತಿಳಿಯಲಾಗಿದೆ.

ಪ್ರಾಚೀನ ಭಾರತೀಯ ಬರಹಗಳಲ್ಲಿಯೂ 'ಶಾಸನ' ಎಂಬ ಪದವು ವಿಫುಲವಾಗಿ ಪ್ರಯೋಗವಾಗಿರುವುದನ್ನು ಗಮನಿಸಬಹುದು.[೩] 'ಶಾಸನ' ಶಬ್ಧದ ಮೂಲಾರ್ಥ 'ಆಜ್ಞೆ' ಎಂದು[೪] ಪ್ರಯೋಗವಾಗಿದೆ. 'ಶಾಸನ' ಎಂಬ ಪದದ ಧಾತುವಾದ 'ಶಾಸ್' ಎಂಬುದಕ್ಕೆ ಆಜ್ಞೆಮಾಡು, ಶಿಕ್ಷಿಸು, ನಿಯಂತ್ರಿಸು ಮೊದಲಾದ ಅರ್ಥಗಳಿವೆ. ಪ್ರಾಚೀನ ಭಾರತದ ಆಡಳಿತ ಪದ್ಧತಿಯ ಬಗ್ಗೆ ತಿಳಿಸುವ ಗ್ರಂಥಗಳಾದ ಶುಕ್ರನೀತಿಸಾರ, ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದ ಗ್ರಂಥಗಳು 'ಶಾಸನ' ಎಂಬ ಪದವನ್ನು ರಾಜಾಜ್ಞೆ ಎಂಬ ಅರ್ಥದಲ್ಲಿ ಪ್ರಯೋಗ ಮಾಡಿದೆ.

ರಾಜನ ಆಸ್ಥಾನದಿಂದ ಆಜ್ಞೆಗಳನ್ನು ಜನರಿಗೆ ತಿಳಿಯುವಂತೆ ರಾಜ್ಯದಲ್ಲೆಲ್ಲಾ ಡಂಗೂರ ಹೊಡೆಯಿಸಿ ಸಾರಿಸಲಾಗುತ್ತದೆ. ಈ ರಾಜಾಜ್ಞೆಗಳನ್ನು ಮುಂದಿನ ತಲೆಮಾರುಗಳು ತಿಳಿಯಲು ಅನುಕೂಲವಾಗುವಂತೆ ತಾಮ್ರ ಫಲಕಗಳ ಮೇಲೆ ಕೊರೆದು ಸ್ವತಃ ದಾಖಲೆಯಾಗಿಯೂ,

ಸಾರ್ವಜನಿಕರಿಗೆ ತಿಳಿಯುವಂತೆ, ಕಡಿಮೆ ವೆಚ್ಚದ ಶಾಶ್ವತವಸ್ತುವಾದ ಕಲ್ಲಿನ ಮೇಲೆ ಕೊರೆದು ಸಾರ್ವಜನಿಕ ದಾಖಲೆಯಾಗಿಯೂ ನಿರ್ಮಿಸುತ್ತಿದ್ದರು. ಹೀಗೆ ಕಾಲದಿಂದ ಕಾಲಕ್ಕೆ ನಿರ್ಮಿತವಾದ ಬರಹಗಳೇ ಶಾಸನಗಳು[೫]

ವಿವಿಧೋದ್ದೇಶಗಳನ್ನು ತಿಳಿಸುವುದಕ್ಕಾಗಿ ಶಾಸನಗಳನ್ನು ಬರೆದಿದ್ದಾರೆ ಯಜ್ಞಯಗಾದಿಗಳಿಗೆ ಸಂಬಂಧಿಸಿದ ಶಾಸನಗಳು ಯೂಪ ಶಾಸನಗಳು, ಬಂಡೆಗಳ ಮೇಲೆ ಕೊರೆದ ಶಾಸನಗಳು ಬಂಡೆಗಲ್ಲು ಶಾಸನಗಳು, ಕಂಬಗಳ ಮೇಲಿರುವ ಶಾಸನಗಳು ಸ್ತಂಭಶಾಸನಗಳು, ಮೂರ್ತಿಗಳ ಮೇಲೆ ಇರುವ ಶಾಸನಗಳು ಪ್ರತಿಮಾಶಾಸನಗಳು, ರಾಜರು ಹೊರಡಿಸಿದ ಶಾಸನಗಳು, ರಾಜನಶಾಸನಗಳು, ದಾನವನ್ನು ಉಲ್ಲೇಖಿಸುವ ಶಾಸನಗಳು ದಾನಶಾಸನಗಳು, ವಿಜಯವನ್ನು ಹೇಳುವ ಶಾಸನಗಳು ವಿಜಯಶಾಸನಗಳು, ಧರ್ಮಕಾರ್ಯಕ್ಕೆ ಸಂಬಂಧಿಸಿದ ಶಾಸನಗಳು ಧರ್ಮಶಾಸನಗಳು, ಅಭಯ ನೀಡಿದ ಶಾಸನಗಳು ಅಭಯ ಶಾಸನಗಳು, ಬೆಲೆಕೊಟ್ಟು ಕೊಂಡದ್ದನ್ನು ಹೆಸರಿಸುವ ಶಾಸನಗಳು ಕ್ರಯ ಶಾಸನಗಳು ಇವಲ್ಲದೆ ವೀರರ ಸ್ಮಾರಕಕ್ಕಾಗಿ ನೆಟ್ಟ ಶಾಸನಗಳು ವೀರಗಲ್ಲು ಶಾಸನಗಳು, ಸತಿ ಹೋದವರ ಸ್ಮರಣೆಗಾಗಿ ನಿಲ್ಲಿಸಿದ ಶಾಸನಗಳು ಮಹಾಸತಿ ಶಾಸನಗಳು, ಸೂರ್ಯಗ್ರಹಣ ಕಾಲದಲ್ಲಿ ಮೃತ್ಯವನ್ನಪ್ಪಿದವರ ಶಾಸನಗಳು ಜೈನರ ಅನಶನ ವ್ರತ ಮಾಡಿ ಸತ್ತವರ ಸಲುವಾಗಿ ತಯಾರಿಸಿದ ನಿಸದಿಶಾಸನಗಳು, ಪ್ರಶಸ್ತಿ ಶಾಸನಗಳು, ಯಂತ್ರಕಲ್ಲು ಶಾಸನಗಳು ಮುಂತಾದ ಅನೇಕ ಶಾಸನ ಪ್ರಕಾರಗಳಿವೆ.

ಶಾಸನಗಳನ್ನು ಬಂಡೆಗಲ್ಲು, ಶಿಲಾ ಮತ್ತು ಮರದಸ್ತಂಭ, ಬಂಗಾರ, ಬೆಳ್ಳಿ, ತಾಮ್ರ ಮತ್ತು ಕಂಚಿನ ತಗಡುಗಳು, ಇಟ್ಟಿಗೆ, ಶಂಖ, ಮಣ್ಣಿನ ಫಲಕ ಪಾತ್ರೆ, ಮೃದುವಾದ ಕಲ್ಲು ಮೊದಲಾದ ವಸ್ತುಗಳ ಮೇಲೆ ಕೆತ್ತುತ್ತಿದ್ದರು.[೬] ಶಾಸನ ಪಾಠಗಳನ್ನು ರಚಿಸಲು ರಾಜರು ವಿದ್ಯಾವಂತ ಅಧಿಕಾರಿಗಳನ್ನು ಇಟ್ಟುಕೊಳ್ಳುತ್ತಿದ್ದರು. ಅವರು ಶಬ್ದಗಳನ್ನು ತೂಗಿ ಉಪಯೋಗಿಸಿ ಜಾಗರೂಕತೆಯಿಂದ ಶಾಸನದ ಪಾಠವನ್ನು ತಯಾರಿಸಿ ರಾಜನ ಒಪ್ಪಿಗೆಯನ್ನು ಪಡೆಯುತ್ತಿದ್ದರು. ಬಾದಾಮಿ ಚಾಲುಕ್ಯರ ಕಾಲದಲ್ಲಿ ಶ್ರೀಮದನಿವಾರಿತಪುಣ್ಯವಲ್ಲಭ ಇತ್ಯಾದಿ ಅಧಿಕಾರಿಗಳ ಹೆಸರುಗಳು ದೊರೆಯುತ್ತವೆ. ಇವರು ತಲಾಂತರದಿಂದ ಈ ಕೆಲಸವನ್ನು ಮಾಡಿದವರೂ ಇದ್ದರೆ. ಪಾಠವು ತಯಾರಾದ ಮೇಲೆ ಅದನ್ನು ತಾಮ್ರದ ತಗಡುಗಳ ಮೇಲೆ ಮತ್ತು ಶಾಸನವನ್ನು ಬರೆಯಲು ಕೆತ್ತಿ ತಯಾರಿಸಿದ ಕಲ್ಲು ಹಲಗೆಗಳ ಮೇಲೆ ಬಣ್ಣದಿಂದ ಬರೆಯುತ್ತಿದ್ದರು. ಈ ರೀತಿ ಬರೆಯುವವರಿಗೆ ಲಿಪಿಕಾರರು ಎಂಬ ಹೆಸರು. ಶಾಸನವು ಆಕರ್ಷಕವಾಗುವಂತೆ ಸ್ಪಷ್ಟವಾಗಿ ಮತ್ತು ಸುಂದರವಾಗಿ ಕಾಣುವಂತೆ ಅವರು ಶಾಸನ ಪಾಠವನ್ನು ತಾಮ್ರಪಟ, ಕಲ್ಲು ಮುಂತಾದವುಗಳ ಮೇಲೆ ಕೆಂಪು ಮಸಿಯನ್ನು ಉಪಯೋಗಿಸಿ ಬರೆಯುತ್ತಿದ್ದರೆಂದು ತೋರುವುದು ಈ ಮಸಿಯನ್ನು ಸ್ವಾಭಾವಿಕ ಬಣ್ಣದಿಂದಲೇ

ತಯಾರಿಸುತ್ತಿದ್ದರು. ಈ ಪ್ರಕಾರ ಕೆಂಪುಬಣ್ಣದಲ್ಲಿ ಬರೆದ ಶಾಸನಗಳನ್ನು ಬಾದಾಮಿಯ ಬಂಡೆಗಳ ಮೇಲೆ ಈಗಲೂ ನೋಡಬಹುದು. ಅವು ಸುಮಾರು ೧೨೦೦ ವರ್ಷಗಳ ಹಿಂದೆಯೇ ಬರೆಯಲ್ಪಟ್ಟಿದ್ದರೂ ಅಚ್ಚಳಿಯದೆ ಉಳಿದಿವೆ.[೬]

ಪ್ರಸ್ತುತ ಮಹಾಕೂಟ ಪ್ರದೇಶದಲ್ಲಿ ದೊರೆತ ಶಸನಗಳ ವೈವಿದ್ಯತೆ ಕುರಿತಾದ ಅಧ್ಯಯನವಾದುದರಿಂದ ಈ ಹಿನ್ನೆಲೆಯಲ್ಲಿ ಲಭ್ಯವಾದ ಶಾಸನಗಳ ವಿಧಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ. ಮಹಾಕೂಟ ಪ್ರದೇಶದಲ್ಲಿ ಲಭ್ಯವಾದ ಶಾಸನಗಳನ್ನು ಪರಿಶೀಲಿಸಿದಾಗ ಒಟ್ಟಾರೆಯಾಗಿ ೧೫ ಶಾಸನಗಳು ಈವರೆಗೆ ದೊರೆತಿರುವುದು ೧೫ ಶಾಸನಗಳಲ್ಲಿ ದಾನಶಾಸನಗಳು ಮತ್ತು ವೀರಶಾಸನಗಳು ಹೆಚ್ಚಾಗಿ ಕಂಡು ಬರುತ್ತವೆ.

೩.೧ ದಾನ ಶಾಸನಗಳು :

ಯಾವುದೇ ಒಬ್ಬ ವ್ಯಕ್ತಿ ಯಾವುದಾದರೂ ಒಂದು ಸಾರ್ಥಕವಾದ ಉದ್ದೇಶದೊಂದಿಗೆ ಒಬ್ಬ ವ್ಯಕ್ತಿಗೂ, ಒಂದು ಸಂಸ್ಥೆಗೂ ನೀಡುವ ಆರ್ಥಿಕ ಮೂಲವಾದ ನೆರವನ್ನು ದಾಖಲು ಮಾಡುವುದು ಈ ಬಗೆಯ ಶಾಸನಗಳ ಮುಖ್ಯ ಉದ್ದೇಶ. ದಾನಗಳು ಸಾಮಾನ್ಯವಾಗಿ ದೇವಾಲಯದಲ್ಲಿ ನಡೆಯುವ ಪೂಜೆ, ಪುನಸ್ಕಾರಗಳಿಗೂ ಒಂದು ಮಠದಲ್ಲಿ ನಡೆಯುವ ವಿದ್ಯಾದಾನಕ್ಕೋ, ದೇವಾಲಯದಲ್ಲಿ ಪೂಜೆ ಮಾಡುವ ಪೂಜಾರಿಗಳಿಗೋ ನರ್ತಿಸುವ ನರ್ತಕಿಯರಿಗೋ, ವಾದ್ಯಗಾರರಿಗೋ ವಿದ್ಯಾದಾನ ಮಾಡುವ ಅಧ್ಯಾಪಕ ಮತ್ತು ವಿದ್ಯಾರ್ಥಿ ವೃಂದಕ್ಕೋ, ಸಾಂಸ್ಕೃತಿಕ ವಿಷಯಗಳಿಗೋ, ಅರವಟ್ಟಿಗೆ, ಕೆರೆ, ಬಾವಿ ಮುಂತಾದ ಲೋಕೋಪಯೋಗಿ ಕಾರ್ಯಗಳಿಗೋ ವ್ಯಕ್ತಿಯೊಬ್ಬನ ಸೇವೆ ಪರಾಕ್ರಮಗಳನ್ನು ಮನ್ನಿಸಿಯೋ ನೀಡಿದ ದಾನವಾಗಿರುತ್ತದೆ. ದಾನವಾಗಿ ನೀಡುವ ಆರ್ಥಿಕ ಮೂಲವು ಭೂಮಿಯಾಗಿರಬಹುದು. ನಗದು ರೂಪದ ಹಣವಾಗಿರಬಹುದು ಅಥವಾ ಪೂರೈಕೆ ಇರಬಹುದು.

ತಾನು ಕೊಟ್ಟ ದತ್ತಿಯು ಶಾಶ್ವತವಾಗಿ ಸದುಪಯೋಗವಾಗಿ ಮುಂದುವರೆಯಬೇಕೆಂಬ ಉದ್ದೇಶದಿಂದ ಈ ರೀತಿಯ ಶಾಸನಗಳನ್ನು ಬರೆಯಿಸತೊಡಗಿದರು.ತನ್ನ ದತ್ತಿಯ ಉದ್ದೇಶವನ್ನು ದತ್ತಿಯನ್ನು ಪಡೆದವನ ವಿವರಗಳನ್ನು ನೀಡಿದ ದತ್ತಿಯ ಸಂಪೂರ್ಣ ವಿವರಣೆಯನ್ನು ನೀಡಿ ಉದ್ದೇಶವನ್ನು ಸಾರ್ಥಕಪಡಿಸಬೇಕೆಂದು ಈ ಶಾಸನಗಳಲ್ಲಿ ದಾನಿಯು ಪ್ರಾರ್ಥಿಸಿರುವುದನ್ನು ಗಮನಿಸಬಹುದು. ಈ ದಾನಶಾಸನಗಳು ಶಿಲಾ ಶಾಸನಗಳಾಗಿರಬಹುದು ಅಥವಾ ತಾಮ್ರಶಾಸನಗಳಾಗಿರಬಹುದು.[೮]

ಇಂತಹ ದಾನಶಾಸನಗಳು ಮಹಾಕೂಟದಲ್ಲಿ ದೊರೆತಿವೆ. ಮಹಾಕೂಟ ಕ್ಷೇತ್ರ ಚಾಲುಕ್ಯ ಶಾಸನಗಳಿಂದ ಮಹತ್ವ ಪಡೆದಿದೆ. ಕ್ರಿ.ಶ. ೫-೭ನೇ ಯ ಶತಮಾನದ ಕನ್ನಡ ನಾಡಿನ ಇತಿಹಾಸದ ಗುಟ್ಟನ್ನು ಈ ಶಾಸನಗಳು ಬಿಡಿಸಿ ಹೇಳುತ್ತವೆ. ಮಹಾಕೂಟದಲ್ಲಿ ಆರು ಮಹತ್ವದ ಶಾಸನಗಳನ್ನು ಕಾಣಬಹುದು. ಅವುಗಳಲ್ಲಿ ಶ್ರೀ ಮಹಾಕೂಟೇಶ್ವರಿನಿಗೆ

ಚಾಲುಕ್ಯ ಅರಸ ಮಂಗಳೇಶ ಭಕ್ತಿಪೂರ್ವಕವಾಗಿ ಸಲ್ಲಿಸಿದ ದಾನಶಾಸನ ಮಂಗಳೇಶನ ಸ್ತಂಭಶಾಸನ ಎಂದೇ ಪ್ರಸಿದ್ಧವಾಗಿದೆ. ಇದನ್ನು ಸಿದ್ಧಾರ್ಥಿ ಸಂವತ್ಸರ ವೈಶಾಖ ಪೂರ್ಣಿಮೆ ಮಂಗಳೇಶನ ಆಳ್ವಿಕೆಯ ಐದನೆಯ ವರ್ಷದಲ್ಲಿ ನಿಲ್ಲಿಸಲಾಗಿದೆ.[೯] ಇದು ಕ್ರಿ.ಶ.೫೯೭ ನೆಯ ಇಸ್ವಿ ಏಪ್ರಿಲ್ ೬ಕ್ಕೆ ಸಮನಾಗುತ್ತದೆ.[೧೦] ೧೬ ಅಡಿ ಎತ್ತರದ ಈ ಅಷ್ಟಕೋನ ಶಿಲಾಸ್ತಂಭ ಪ್ರಸ್ತುತ ಬಿಜಾಪುರದ ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯದಲ್ಲಿದೆ.

ಮಂಗಳೇಶ ಉತ್ತರ ಭಾರತದ ಕಲಚೂರಿ ಮುಂತಾದವರನ್ನು ಸೋಲಿಸಿ ಯುದ್ಧದಲ್ಲಿ ಸಂಗ್ರಹವಾದ ಐಶ್ವರ್ಯವನ್ನೆಲ್ಲಾ ತನ್ನ ಮಲತಾಯಿ ದುರ್ಲಭ ದೇವಿಯ ಇಚ್ಚೆಯಂತೆ ಮಹಾಕೂಟೇಶ್ವರನಿಗೆ ಅರ್ಪಿಸಿದನೆಂದು ಶಾಸನದಲ್ಲಿ ಹೇಳಿದೆ. ಅವನು ದಾನವಾಗಿ ಕೊಟ್ಟಿದ್ದ ಕಿಸುವೊಳಲ್ (ಪಟ್ಟದಕಲ್ಲು) ತಿರ್ವರಿಗ್ರಾಮ (ತಿಮ್ಮಸಾಗರ) ನಂದಿಗ್ರಾಮ(ನಂದಿಕೇಶ್ವರ) ವ್ರಿಹಿಮುಖ (ನೆಲವಿಗಿ) ಮುಂತಾದ ಗ್ರಾಮಗಳು ಮಹಾಕೂಟದ ಬಳಿ ಇವೆ. ದಾನ ಧರ್ಮದ ಮಹತ್ವವನ್ನು ಶಾಸನಗಳಲ್ಲಿ ಒತ್ತಿ ಹೇಳಲಾಗಿದೆ. ಎಷ್ಟೋ ಜನ ರಾಜರು ಈ ಭೂಮಿಯನ್ನು ಆಳಿ ಹೋಗಿರುವರು. ಅವರಂತೆ ಚಕ್ರವರ್ತಿಗಳಾದವರು ದೇವರಿಗೆ ಭೂಮಿ ದಾನ ಮಾಡಬೇಕು. ಭೂ ದಾನ ಮಾಡಿದವನು ೬೦,೦೦೦ ವರ್ಷ ಸ್ವರ್ಗ ಸುಖದಲ್ಲಿರುವನು. ಆ ದಾನ ಕೆಡಿಸಿದವನು ಅಷ್ಟೋ ಕಾಲ ನರಕವನ್ನು ಅನುಭವಿಸುವನು. ಎಂದಿದೆ.

ಮಹಾಕೂಟೇಶ್ವರ ಮಂದಿರದ ಮುಖಮಂಟಪದ ಕಂಬವೊಂದರಲ್ಲಿ ಕ್ರಿ.ಶ. ೬೯೭ರಲ್ಲಿ ಪಟ್ಟಕ್ಕೆ ಬಂದ ಚಾಲುಕ್ಯರ ಅರಸು ವಿಜಯಾದಿತ್ಯನ ಆಸ್ಥಾನದ ರಾಜನರ್ತಕಿ ವಿನಾಪೋಟಿ ಎಂಬಾಕೆಯ ಒಂಭತ್ತು ಸಾಲಿನ ಶಾಸನವಿದೆ. ವಿಜಯಾದಿತ್ಯನ ಪ್ರಾಣವಲ್ಲಬೆಯಾದ ಈಕೆ ಮಹಾಕೂಟೇಶ್ವರನಿಗೆ ಬಂಗಾರದ ಪೀಠ, ಬೆಳ್ಳಿ ಕೊಡೆ ಹಾಗೂ ಎಂಟು ಕ್ಷೇತ್ರ ಭೂಮಿಯನ್ನು ದಾನ ಮಾಡಿದ ಉಲ್ಲೇಖ ಶಾಸನದಲ್ಲಿದೆ. ಈ ದಾನವನ್ನು ಅಳಿಸಿದವನು ಪಂಚ ಮಹಾಪಾತಕಯಾಗುವನೆಂಬ ಎಚ್ಚರಿಕೆಯನ್ನು ನೀಡಲಾಗಿದೆ.[೧೧]

ಮಹಾಕೂಟೇಶ್ವರ ದೇವಾಲಯದ ಸಭಾಮಂಟಪದ ಎಡ ಭಾಗದ ಕಂಬದಲ್ಲಿ ಶಕವರ್ಷ ಎಂಟುನೂರಾ ಐವತ್ತಾರು ಜಯಸಂವತ್ಸರದ ಕಾರ್ತಿಕ ಮಾಸದ ಶುದ್ಧ ಪಂಚಮಿಯ ಬುಧವಾರ ಎಂದಿದ್ದು ಇದು ಕ್ರಿ.ಶ. ೯೩೩ರ ಅಕ್ಟೋಬರ್ ೧೫ರ ಬುದವಾರಕ್ಕೆ ಸಮನಾಗುತ್ತದೆ. ಈ ಶಾಸನದಲ್ಲಿ ಬಪ್ಪುವರಸನೆಂಬುವನು ಮುಂಗಡಕ್ಕೆ ಬಂದಾಗ ನಂದಿಕೇಶ್ವರ ಮತ್ತು ನೆಲ್ಲುಗೆ ಎಂಬ ಎರಡು ಗ್ರಾಮಗಳನ್ನು ದಾನ ಮಾಡಿ ಬಿಟ್ಟಂತೆ ಹೇಳುತ್ತದೆ. ಶಾಸನದಲ್ಲಿ ಈ ಬಪ್ಪುವರಸನನ್ನು ಮಹಾಸಾಮಂತನ ರತ್ನಾವಲೋಕ, ರಣದುರ ಧವಳ ಕಿರಿಯ ಭೈರವ, ಪ್ರತ್ಯಂತ ಮಾರ್ತಂಡ ಮುಂತಾಗಿ ಹೆಸರುಗಳಿಂದ ಕರೆಯಲಾಗಿದೆ. ಶಾಸನವನ್ನು ಬರೆದವನು ಸಿಂಧರ ಮಗಳಾದ ನಿಜಾಬ್ಬೆಯ ಮಗನು[೧೨]. ಎಂದು ಶಾಸನದಲ್ಲಿ ಉಲ್ಲೇಖವಿದೆ. ದೇವಾಲಯದ ರಂಗಮಂಟಪದ ಕಂಬಗಳಲ್ಲಿ ದಾನ.ದತ್ತಿ ಮತ್ತು ನೀತಿ ಶ್ಲೋಕದ ಶಾಸನಗಳಿವೆ.

೩.೨. ವೀರಶಾಸನಗಳು :

ಯಾವುದೇ ಒಬ್ಬ ವ್ಯಕ್ತಿಯ ಗುಣಗಳನ್ನು ಕೀರ್ತಿಸುವ ಉದ್ದೇಶದಿಂದಲೇ ಹಾಕಿಸಲಾಗಿರುವ ಶಾಸನಗಳು ಇವು ಸಾಮಾನ್ಯವಾಗಿ ಶಿಲಾಶಾಸನಗಳೇ ಆಗಿರುತ್ತವೆ. ಅರಸನೋ, ಅಧಿಕಾರಿಯೋ ದತ್ತಿ, ದಾನ ನೀಡಿದಾಗ ಲೋಕೋಪಯೋಗಿ ಕಾರ್ಯಗಳನ್ನು ಮಾಡಿದಾಗ ಅವುಗಳನ್ನು ತಿಳಿಸುವ ನೆವದಲ್ಲಿ ಆ ವ್ಯಕ್ತಿಯನ್ನು ಮತ್ತು ಅವನ ವಂಶವನ್ನು ಕೀರ್ತಿಸುವ ಉದ್ದೇಶವನ್ನೇ ಮಹತ್ವದನ್ನಾಗಿ ಈ ಬಗೆಯ ಶಾಸನಗಳು ಮಾಡುತ್ತವೆ. ಕೇವಲ ದಾನ ಮಾಡಿದ ಸಂದರ್ಭದಲ್ಲಿ ಮಾತ್ರವಲ್ಲ. ವೀರೋಚಿತವಾದ ಕಾರ್ಯವನ್ನು ಎಸಗಿದಾಗ ಆಯಾ ಧರ್ಮವು ಶ್ರೇಷ್ಠವಾದುದು ಅಥವಾ ಕಠಿಣವಾದುದು ಎಂದು ಭಾವಿಸಿರುವ ವ್ರತವನ್ನು ಯಶಸ್ವಿಯಾಗಿ ನಡೆಸಿದಾಗ, ತನ್ನ ಜೀವನದ ಮೇಲೆ ಆಸೆ ತೋರದೆ ತಾನು ನಂಬಿದ ಮೌಲ್ಯಗಳಿಗಾಗಿ ತನ್ನ ಜೀವನವನ್ನೇ ತೆತ್ತ ಮಹಾಸತಿಯರ, ವೀರರ, ಗರುಡರ ವಿಷಯವನ್ನು ತಿಳಿಸುವ ಕೆಲವು ಶಾಸನಗಳು ಅವರನ್ನು ಮನತುಂಬಿ ಕೀರ್ತಿಸಿವೆ.

ಇಂತಹ ಶಾಸನಗಳು ಮಹಾಕೂಟದಲ್ಲಿ ಕಂಡು ಬರುತ್ತವೆ. ಮಹಾಕೂಟಸ್ತಂಭ ಶಾಸನದಲ್ಲಿ ಮಾನವ್ಯ ಗೋತ್ರಕ್ಕೆ ಸೇರಿದ ಹಾರಿತಿ ಪುತ್ರರಾದ ಬಹುಪರಾಕ್ರಮವಂತರಾದ ಮಾತಾಪಿತೃ ಭಕ್ತಿಯುಳ್ಳವರಾದ, ವಿಧಿಪೂರ್ವಕವಾಗಿ ಅಗ್ನಿ ಕರ್ಮಗಳನ್ನು ಮಾಡುತ್ತಿದ್ದ ಚಳಿಕ್ಯ ವಂಶದಲ್ಲಿ ಜಯಸಿಂಹ ಎಂಬುವನು ಉದಿಸಿದ ತಂದೆಯಂತೆಯೇ ರೂಪಗುಣಗಳನ್ನು ಹೊಂದಿದ ಪರಾಕ್ರಮಿಯಾದ ನಯ ವಿನಯವಂತನಾದ ರಣರಾಗ ಎಂಬುವನು ಇವನ ಮಗನಾಗಿ ಹುಟ್ಟಿದ ಇವನಿಗೆ ತನ್ನ ಜನರನ್ನು ಪ್ರೀತಿಸುತ್ತಿದ್ದ ತಂದೆಯ ಗುಣಗಳನ್ನೇ ಪಡೆದ ರಣವಿಕ್ರಮ ಒಂದನೇಯ ಪುಲಕೇಶಿ ಎಂಬ ನೃಪನು ಜನಿಸಿದ. ಇವನು ಅಗ್ನಿಷ್ಟೋಮ, ವಾಜಪೇಯ, ಬಹುಸುವರ್ಣ, ಪೌಂಡರೀಕ, ಅಶ್ವಮೇಧ ಎಂಬ ಯಾಗಗಳನ್ನು ಮಾಡಿ ಅವುಗಳ ಸ್ನಾನದಿಂದ ಪವಿತ್ರನಾಗಿದ್ದ ಇವನ ಮಗ 'ರಣವಿಕ್ರಾಸ್ತ' ಮಂಗಳೇಶ ಇವನು ಬಹುಸುವರ್ಣ ಅಗ್ನಿಷ್ಟೋಮ ಯಾಗಗಳನ್ನು ಮಾಡಿದ್ದ ವಂಗ, ಅಂಗ, ಕಳಿಂಗ, ವಟ್ಟೂರ, ಮಗಧ, ಮದ್ರಕೆ, ಕೇರಳ, ಗಂಗ, ಮೂಷಕ, ಪಾಂಡ್ಯ, ದ್ರಮಿಳ, ಚೋಳ, ಅಳುಪ, ವೈಜಮನ್ತ ಮೊದಲಾದ ದೊರೆಗಳನ್ನು ಸೋಲಿಸಿದ್ದ[೧೪] ಎಂದು ಶಾಸನದಲ್ಲಿ ಉಲ್ಲೇಖವಿದೆ. ಈ ವೀರ ಸಾಧನೆಯನ್ನು ಮಂಗಳೇಶನ ಕೀರ್ತಿಯು ಹೆಚ್ಚಿಸುವಲ್ಲಿ ಪ್ರಮುಖವಾಗಿದೆ.

ಮಹಾಕೂಟೇಶ್ವರ ದೇವಾಲಯದ ಪ್ರವೇಶದಲ್ಲಿರುವ ಕಂಬದ ಮೇಲಿನ ಶಾಸನದಲ್ಲಿ ರಾಷ್ಟ್ರಕೂಟ ದೊರೆ ಜಗತುಂಗನ ಆಳ್ವಿಕೆಯಲ್ಲಿ ಅವನ ಮಹಾಸಾಮಂತನಾಗಿ ಉತ್ತಮಗಳ್ಳ ಎಂಬುವವನು ಕಡಿತಲೆ, ಗುರಾಣಿ, ಹಿಡಿದು ಕಾಳಗದಲ್ಲಿ ಭಾಗವಹಿಸಿ ೧೯೬೬ ಜನರನ್ನು ಇರಿದುದನ್ನು ಶಾಸನ ತಿಳಿಸುತ್ತದೆ.[೧೫] ಅದೇ ದೇವಾಲಯದ ಮಂಟಪದ ಬಲಭಾಗದ ಕಂಬದ ಮೇಲಿನ ಶಾಸನವು ಅನ್ಯಸ್ಥಾನದಲ್ಲಿ ಮಾಡುವ ಪಾಪವು ಪುಣ್ಯಸ್ಥಾನದಲ್ಲಿ

ನಾಶವಾಗುತ್ತದೆ ಆದರೆ ಪುಣ್ಯಸ್ಥಾನದಲ್ಲಿ ಮಾಡುವ ಪಾಪವು ವಜ್ರಲೇಪನದಂತೆ ಅಂಟಿಕೊಳ್ಳುತ್ತದೆ.[೧೬] ಎಂದರ್ಥವನ್ನು ಈ ಶಾಸನವು ಮನಮೋಹಕವಾದ ಅರ್ಥವನ್ನು ಕೊಡುವ ಶಾಸನವಾಗಿದೆ.

೩.೩ ಇತರೆ ಶಾಸನಗಳು :

ನಮ್ಮ ನಾಡಿನಲ್ಲಿ ದೊರೆಯುವ ಶಾಸನಗಳ ವೈವಿದ್ಯವನ್ನು ಕುರಿತು ಮೇಲೆ ವಿಂಗಡಿಸಿ ತಿಳಿಸಿರುವ ವಿಷಯ ಏನೇನೂ ಸಾಲದು. ಶಾಸನ ಪ್ರಕಾರಗಳಿಗೆ ಸೇರದ ಹಲವಾರು ಶಾಸನಗಳನ್ನು ನಾವು ಕಾಣಬಹುದು. ವಿಗ್ರಹಗಳನ್ನು ಕೆತ್ತಿದ ರೂವಾರಿಗಳು ಆ ವಿಗ್ರಹದ ಕೆಳಗೆ ತಮ್ಮ ಹೆಸರನ್ನು ಬರೆದಿರುವ ನಿದರ್ಶನಗಳುಂಟು ಪ್ರವಾಸಿಗಳು ಪುಣ್ಯಕ್ಷೇತ್ರಕ್ಕೆ ಹೋದಾಗ ತಮ್ಮ ಹೆಸರನ್ನು ಕೆತ್ತಿರುವುದುಂಟು. ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲೆ ಇರುವ 'ಶ್ರೀ ಕವಿರತ್ನ' ಎಂಬ ಬರಹವನ್ನು ಕವಿರನ್ನನ ಹಸ್ತಾಕ್ಷರವೆಂದು ಭಾವಿಸಲಾಗಿದೆ. ಇವುಗಳನ್ನಲ್ಲದೆ ದೇವಾಲಯಗಳ ಅಂಗಳದ ಹಾಲುಗಲ್ಲುಗಳ ಮೇಲೆ ನಮಸ್ಕಾರ ಮಾಡುತ್ತಿರುವಂತೆ ತಮ್ಮ ರೇಖಾಚಿತ್ರಗಳನ್ನು ಕೆತ್ತಿಸಿ ಅದರ ಬದಿಯಲ್ಲಿ ತಮ್ಮ ಹೆಸರನ್ನು ಬರೆದಿರುವ ನಿದರ್ಶನ ಉಂಟು.[೧೭] ಈ ರೀತಿಯ ಶಾಸನಗಳು ಕಂಡು ಬರುತ್ತವೆ.

ಮಹಾಕೂಟೇಶ್ವರ ದೇವಾಲಯದ ಮಂಟಪದ ಬಲಭಾಗದ ಕಂಬದ ಮೇಲಿನ ಶಾಸನವು ಬಹುಶಃ ಕಂಬವನ್ನು ಕಟೆದ ಶಿಲ್ಪಿಯ ಹೆಸರಿರಬಹುದು.[೧೮] ಅದೇ ರೀತಿಯ ಸಂಗಮೇಶ್ವರ ದೇವಾಲಯದ ಕಂಬದ ಮೇಲಿನ ಶಾಸನವು ಕ್ರಿ.ಶ. ೭ನೇಯ ಶತಮಾನಕ್ಕೆ ಸೇರಿದ ಈ ಶಾಸನವು "ನಾವ್ಡಿಯನ್" ಎಂಬ ಶಿಲ್ಪಿಯನ್ನು ಹೆಸರಿಸುತ್ತದೆ.[೧೯] ಅದೇ ರೀತಿಯ ಶಾಸನವು ವಿರೂಪಾಕ್ಷೇಶ್ವರ ದೇವಾಲಯದ ಕಂಬದ ಮೇಲಿನ ಶಾಸನವು 'ಸಂಕ್ಕಡಿ' ಎಂಬ ವ್ಯಕ್ತಿಯನ್ನು ಹೆಸರಿಸುತ್ತದೆ.[೨೦] ಇದು ಕ್ರಿ.ಶ. ೮ನೇಯ ಶತಮಾನದ್ದು ಇನ್ನೂ ಹೊಂಡದ ಮಂಟಪದಲ್ಲಿನ ಕಂಬದ ಪೂರ್ವ ಮುಖದಲ್ಲಿನ ಶಾಸನವು ಕ್ರಿ.ಶ. ೭ನೇ ಶತಮಾನದ ಶಾಸನವು "ವ್ಯಾಳಸಿಂಹ" ಎಂಬ ಗುರುವನ್ನು ಹೆಸರಿಸುತ್ತದೆ.[೨೧] ಅದೇ ಮಂಟಪದ ಕಂಬದಲ್ಲಿನ ಉತ್ತರಮುಖದಲ್ಲಿನ ಶಾಸನವು ಪಪ್ಪಬ್ಬೆ ಪಲಭೆ ಮಾಡಿಸಿದ ಎಂದು ಹೇಳಿದೆ[೨೨] ಅದೇ ಮಂಟಪದ ಕಂಬದಲ್ಲಿನ ಪಶ್ಚಿಮ ಮುಖದ ಮೇಲಿನ ಶಾಸನವು ಶ್ರೀ ಇಸಾನಸಿವ"ನನ್ನು ಹೆಸರಿಸುತ್ತದೆ.[೨೩] ಅದೇ ಹೊಂಡದ ಉತ್ತರ ದಂಡೆಯಲ್ಲಿ ಬಿದ್ದಿರುವ ಕಂಬದ ಮೇಲಿನ ಶಾಸನವು ಕ್ರಿ.ಶ. ೮ನೇಯ ಶತಮಾನದ ಶಾಸನ "ಬಹುಗುಣ" ಎಂಬ ವ್ಯಕ್ತಿಯನ್ನು ಹೆಸರಿಸುತ್ತದೆ.[೨೪] ಇಂತಹ ಶಾಸನಗಳು ಮಹಾಕೂಟದಲ್ಲಿ ಹಲವಾರು ಕಂಡು ಬರುತ್ತವೆ.

ಶಾಸನಗಳ ವೈವಿದ್ಯತೆಯಿಂದ ಹಲವಾರು ದಾನಶಾಸನಗಳು ಮತ್ತು ವೀರಶಾಸನಗಳು ಹಾಗೂ ಇತರೆ ಶಾಸನಗಳಿಂದ ಮಹಾಕೂಟವನ್ನು ಪುಣ್ಯಕ್ಷೇತ್ರವನ್ನಾಗಿ ಮಾಡಿದೆ. ಎಂದು ನಮಗೆ ತಿಳಿದು ಬರುತ್ತದೆ. ಮಹಾಕೂಟವನ್ನು ಬಾದಾಮಿ ಚಾಲುಕ್ಯರ ಶಾಸನದಿಂದ ಶೈವಕ್ಷೇತ್ರವಾಗಿ ಬೆಳೆದಿದೆ. ಎಂದು ತಿಳಿದು ಬರುತ್ತದೆ.

ಅಡಿಟಿಪ್ಪಣಿ

೧. ಶೇಷಶಾಸ್ತ್ರಿ ಆರ್. ೨೦೦೫, ಶಾಸನ ಪರಿಚಯ,
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಪು-೧

೨. ಅಣ್ಣಿಗೇರಿ ಎ.ಎಂ ಮತ್ತು ಶೇಷಶಾಸ್ತ್ರಿ ಆರ್. ೨೦೦೭, ಶಾಸನ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು ಪಂಪಮಹಾಕವಿರಸ್ತೆ ಚಾಮರಾಜಪೇಟೆ, ಬೆಂಗಳೀದು ಪು-೭

೩. ಶೇಷಶಾಸ್ತ್ರಿ ಆರ್. ಪುರ್ವೋಕ್ತ ಪು-೧

೪. ಚಿದಾನಂದಮೂರ್ತಿ ಎಂ. ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಸಪ್ನಬುಕ್ ಹೌಸ್ ಗಾಂಧಿನಗರ, ಬೆಂಗಳೂರು ಪು-೧೩

೫. ಶೇಷಶಾಸ್ತ್ರಿ ಆರ್. ಪುರ್ವೋಕ್ತ ಪು-೨

೬. ಅಣ್ಣಿಗೇರಿ ಎ.ಎಂ. ಮತ್ತು ಆರ್. ಶೇಷಶಾಸ್ತ್ರಿ ಪುರ್ವೋಕ್ತ ಪು-೮

೭. ಅದೇ, ಪು-೯

೮. ಶೇಷಶಾಸ್ತ್ರಿ ಆರ್. ಪೂರ್ವೋಕ್ತ ಪು-೭

೯. ಸೇಸುನಾಥನ್ ಐ. ೨೦೦೬, ಕರ್ನಾಟಕದ ಪ್ರವಾಸಿ ತಾಣಗಳು-೧, ಸಾದನಾ ಪ್ರಕಾಶನ, ಬೆಂಗಳೂರು ಪು-೧೯೭

೧೦. ದೇವರಕೊಂಡಾರೆಡ್ಡಿ(ಸಂ),೨೦೦೦,ಕನ್ನಡ ವಿಶ್ವವಿದ್ಯಲಯ ಶಾಸನ ಸಂಪುಟ-೯, ಪ್ರಸಾರಾಂಗ, ಕ.ವಿ.ವಿ.ಹಂಪಿ ಪು-೩೪೭

೧೧. ಸೇಸುನಾಥನ್ ಐ. ಪೂರ್ವೋಕ್ತ. ಪು-೧೯೮

೧೨. ದೇವರಕೊಂಡಾರೆಡ್ಡಿ (ಸಂ), ಪೂರ್ವೋಕ್ತ, ಪು-೩೪೩

೧೩. ಶೇಷಶಾಸ್ತ್ರಿ ಆರ್. ಪರ್ವೋಕ್ತ ಪು-೧೭

೧೪. ದೇವರಕೊಂಡಾರೆಡ್ಡಿ (ಪ್ರ.ಸಂ) ಪೂರ್ವೋಕ್ತ ಪು-೩೪೭

೧೫. ದೇವರಕೊಂಡಾರೆಡ್ಡಿ (ಸಂ), ಪೂರ್ವೋಕ್ತ, ಪು-೩೪೧

೧೬. ಅದೇ, ಪು-೩೪೨

೧೭. ಶೇಷಶಾಸ್ತ್ರಿ ಆರ್. ಪುರ್ವೋಕ್ತ ಪು-೪೬

೧೮. ದೇವರಕೊಂಡಾರೆಡ್ಡಿ (ಸಂ), ಪೂರ್ವೋಕ್ತ, ಪು- ೩೪೨

೧೯. ಅದೇ, ಪು - ೩೪೪

೨೦. ಅದೇ, ಪು- ೩೪೪

೨೧. ಅದೇ, ಪು- ೩೪೫

೨೨. ಅದೇ, ಪು- ೩೪೫

೨೩. ಅದೇ, ಪು- ೩೪೫

೨೪. ಅದೇ, ಪು- ೩೪೬

ಅಧ್ಯಾಯ : ನಾಲ್ಕು

ವಾಸ್ತುಶಿಲ್ಪ

೪.೧. ದೇವಾಲಯಗಳು

೪.೧.೧ ಶೈವ ದೇವಾಲಯಗಳು

೪.೧.೨. ವೈಷ್ಣವ ದೇವಾಲಯಗಳು

೪.೨. ಶಿಲ್ಪಗಳು

೪.೨.೧ ಶೈವ ಶಿಲ್ಪಗಳು

೪.೨.೨. ವೈಷ್ಣವ ಶಿಲ್ಪಗಳು

೪.೨.೩. ವಿಶೇಷ ಶಿಲ್ಪಗಳು

ವಸ್ತುವಿನಿಂದ ರಚಿತವಾದ ವಾಸಯೋಗ್ಯವಾದ ವಾಸ್ತುವಿನ ಮೇಲೆ ರಚಿತವಾದ ಎಲ್ಲ ರಚನೆಗಳೂ ವಾಸ್ತು ರಚನೆ ಎಂದೆನಿಸುತ್ತದೆ. ಮಾನವನ ನಾಗರಿಕತೆಯ ಮಾನದಂಡವಾದ ಈ ವಾಸ್ತು ರಚನೆ ಯುಗ ಯುಗಾಂತರಗಳಲ್ಲಿ ಆತನ ಬುದ್ದಿ ವಿಕಾಸದ ರೀತಿಯನ್ನು ಖಚಿತವಾಗಿ ಚಿತ್ರಿಸುವ ಪ್ರತ್ಯಕ್ಷ ಸಾಧನವಾಗಿದೆ. ಅದು ನಾಲ್ಕು ಮುಖಗಳಿಂದ ಜನಿಸಿದ ವಿಶ್ವಕರ್ಮ, ಮಯ ತೃಷ್ಟ ಮತ್ತು ಮನುವಿನ ಪುತ್ರರಾದ ಸ್ಥಪತಿ, ಸೂತ್ರಗಾಹಿ, ವರ್ಧಕಿ ಮತ್ತು ತಕ್ಷಕರಿಂದ ವಾಸ್ತುಕಲೆ ಬೆಳೆಯಿತು ಎಂದು ಉಲ್ಲೇಖಗಳಿವೆ. ವಾಸ್ತು ಪುರುಷನು ಆಕಾರದಿಂದ ತನ್ನ ಕೈಕಾಲುಗಳನ್ನು ಮಡಚಿಕೊಂಡು ಈಶಾನ್ಯಕ್ಕೆ ತಲೆಯನ್ನು ಮಾಡಿ ಭೂಮಿಯ ಮೇಲೆ ಬಿದ್ದಾಗ ಚತುಷ್ಕೋಣಾಕಾರವಾಗಿ ವಾಸ್ತುಮಂಡಲ ನಿರ್ಮಾಣವಾಯಿತ್ತೆಂದೂ ಅವನ ಹೃದಯದಲ್ಲಿ ಬ್ರಹ್ಮ ಮತ್ತು ಇತರ ಅಂಗಗಳಲ್ಲಿ ಎಲ್ಲ ದೇವತೆಗಳು ನೆಲಸಿದರೆಂದೂ ಹೇಳುವ ಕಥೆಯೊಂದಿದೆ. ದೈವಿಕವಾದ ಶಕ್ತಿಯೊಂದನ್ನು ಈ ಕಲೆಯಲ್ಲಿ ಕಾಣಬೇಕೆಂಬ ಆಶಯವೇ ಆ ಪರಿಕಲ್ಪನೆಗೆ ಮೂಲವಾಗಿದೆ. ಈ ಈ ಅಧ್ಯಾಯದಲ್ಲಿ ಮಹಾಕೂಟದ ದೇವಾಲಯಗಳು ಹಾಗೂ ಶಿಲ್ಪಗಳ ವಾಸ್ತುಕಲೆಯನ್ನು ಪರಿಶೀಲಿಸಲಾಗಿದೆ.

೪.೧. ದೇವಾಲಯಗಳು :

ಭಾರತೀಯ ದೇವಾಲಯಗಳ ನಿರ್ಮಾಣದಲ್ಲಿ ವೈಜ್ಞಾನಿಕ ತತ್ವಗಳನ್ನು ಅಳವಡಿಸಿದ್ದಾರೆ. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಪ್ರಾಪಂಚಿಕ ಸುಖಗಳು ವ್ಯಕ್ತಿಯ ಪೂರ್ಣ ವಿಕಾಸಕ್ಕೆ ಬಹುಮುಖ್ಯವೆಂದು ಪ್ರಾಚೀನರ ನಂಬಿಕೆಯಾಗಿತ್ತು. ಹಾಗಾಗಿಯೇ ನಮ್ಮ ಸಂಸ್ಕೃತಿಗೆ ದೇವಾಲಯಗಳು ಪರಮೋಚ್ಚ ಆಲಯಗಳಾದವು. ಮಾನವ ದೈವ, ಇಹ–ಪರ, ವಾಸ್ತವಿಕ–ಆದರ್ಶಗಳ ಮಿಲನದ ಸಂಕೇತವೇ ದೇವಾಲಯವಾಗಿದೆ. ಒಂದು ಪ್ರದೇಶದ ವಾಸ್ತು ಕಲೆಯ ಆ ವಾಸ್ತು ನಿರ್ಮಾಣಕ್ಕೆ ಕಾರಣವಾದ ಜನತೆಯ ಮನೋಧರ್ಮಗಳನ್ನು ಮನೋವಿಲಾಸಗಳನ್ನು ಪ್ರತಿಬಿಂಬಿಸುತ್ತವೆ. ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ವಾಸ್ತು ಕಲೆ ಮಹತ್ವದ ಪಾತ್ರ ವಹಿಸುತ್ತದೆ.[೧] ಕಲಿಯುಗದಲ್ಲಿ ಪರಮಾತ್ಮನಿರುವುದೇ ದೇವಾಲಯಗಳಲ್ಲಿ. ಹೀಗಾಗಿ ಆತನಿಗೆ ಶರಣು ಹೋಗಲು ಪಾಪಗಳನ್ನು ನಾಶ ಮಾಡುವಂತೆ ಆತನನ್ನು ಪ್ರಾರ್ಥಿಸಲು ದೇವಾಲಯಗಳು ಹೆಚ್ಚಿನ ಮಟ್ಟಿಗೆ ನೆರವನ್ನು ನೀಡುತ್ತವೆ. ರಾಜಮಹಾ ರಾಜರು ತಮ್ಮ ವಿಜಯದ ಪ್ರತೀಕವಾಗಿ ದೇವಾಲಯಗಳನ್ನು ನಿರ್ಮಿಸುತ್ತಿದ್ದ ವಿಚಾರ ಸಮಕಾಲೀನ ಶಾಸನ ಮತ್ತು ಸಾಹಿತ್ಯ ಕುರುಹುಗಳಿಂದ ಸ್ಪಷ್ಟವಾಗುತ್ತದೆ. ಹೀಗೆ ಸುಖ, ಶಾಂತಿ, ಪುಣ್ಯ, ಪ್ರಾರ್ಥನೆ, ವಿಜಯದ ಪ್ರತೀಕ ಮೊದಲಾದವುಗಳು ದೇವಾಲಯಗಳ ರಚನೆಯ ಉದ್ದೇಶಗಳಾಗಿವೆ.

ಶಿಲಾಯುಗದ ಮಾನವನು ತನ್ನ ಸುತ್ತಲಿನ ಪ್ರಕೃತಿಯಲ್ಲಾಗುವ ಬದಲಾವಣೆಗಳ ಹಿಂದೆ ಯಾವುದೋ ಒಂದು ಅನಂತ ಮತ್ತು ಅಗೋಚರ ಶಕ್ತಿಯಿದೆ ಎಂದು ನಂಬಿ

ಅದಕ್ಕೆ ಒಂದು ರೂಪವನ್ನು ಕೊಟ್ಟನು. ಆ ರೂಪಗಳ ರಕ್ಷಣಾರ್ಥವಾಗಿ ಪ್ರಾರಂಭದಲ್ಲಿ ನೈಸರ್ಗಿಕ ಗುಹಾಲಯಗಳನ್ನು ಬಳಸಿಕೊಂಡರೂ ತರುವಾಯ ಪ್ರತ್ಯೇಕ ಆಲಯಗಳನ್ನು ನಿರ್ಮಿಸಲು ಪ್ರಾರಂಭಿಸಿದರು. ಆ ಪರಿಕಲ್ಪನೆಯೆ ದೇವಾಲಯಗಳ ನಿರ್ಮಾಣಕ್ಕೆ ನಾಂದಿಯಾಯಿತು. ಆರಂಭದಲ್ಲಿ ದೇವರ ಪ್ರತಿಮೆಯನ್ನು ಪ್ರತಿಷ್ಠಾಪಿಸಲು ಒಂದು ಚಿಕ್ಕ ಮಂಟಪವಷ್ಟೇ ಇದ್ದು ಅದು ದೇವಾಲಯದ ಸೀಮಿತ ಉದ್ದೇಶಗಳನ್ನು ಪೂರೈಸುತ್ತಿದ್ದಿತು. ಕಾಲಾನುಕ್ರಮದಲ್ಲಿ ಪೂಜಾ ವಿಧಿ-ವಿಧಾನಗಳು ಮತ್ತು ಆಚರಣೆಗಳು ಹೆಚ್ಚಿದಂತೆ ಅದಕ್ಕೆ ತಕ್ಕಂತೆ ದೇವಾಲಯವೂ ವಿಸ್ತೃತ ರೂಪವನ್ನು ಪಡೆಯಲಾರಂಭಿಸಿತು.

ವಾಸ್ತುಕಲಾ ಪರಂಪರೆಯ ನಿರ್ಮಾಣ, ಬೆಳವಣಿಗೆ ಮತ್ತು ಪ್ರಯೋಗಶೀಲತೆಯ ದೃಷ್ಟಿಯಿಂದ ಕನ್ನಡ ನಾಡು ನಿಜಕ್ಕೂ ವೈಶಿಷ್ಟ್ಯಪೂರ್ಣವಾಗಿದೆ. ಅದಕ್ಕೆ ಈ ನಾಡಿನ ನೆಲ, ಜಲ, ಶಿಲಾ ಸಂಪನ್ಮೂಲಗಳ ಜೊತೆಗೆ ಇದರ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಭೌಗೋಳಿಕ, ರಾಜಕೀಯ ಪರಿಸರ ಮತ್ತು ಜನಪದರ ಹೊಂದಾಣಿಕೆಯ ಮನೋಭೂಮಿಕೆ, ಅಳವಡಿಕೆಯ ಆಶಯ, ನೆರೆ-ಹೊರೆ ಪ್ರದೇಶಗಳೊಂದಿಗೆ ಸಂಬಂಧ-ಸಂಪರ್ಕಗಳ ಪರಿಣಾಮ ಮೊದಲಾದವುಗಳು ಪ್ರಧಾನವೆನಿಸುತ್ತವೆ. ಹೀಗಾಗಿ ಭಾರತದ ಉಳಿದೆಡೆ ಕಾಣಲಾರದಷ್ಟು ವೈವಿಧ್ಯಮಯ ವಾಸ್ತುಶೈಲಿಗಳು ಈ ನಾಡಿನಲ್ಲಿ ಕಂಡುಬರುತ್ತದೆ. ಕನ್ನಡ ನಾಡಿನಲ್ಲಿ ಕ್ರಿಸ್ತಶಕಾರಂಭದಲ್ಲಿ ನಿರ್ಮಾಣವಾದ ದೇವಾಲಯಗಳು ಇಂದು ಉಳಿದು ಬಂದಿಲ್ಲ. ಅವುಗಳ ಕುರಿತಾಗಿ ಉತ್ಖನನ ಮತ್ತು ಸಮಕಾಲೀನ ಶಾಸನಗಳಿಂದ ಮಾತ್ರ ಸ್ಪಷ್ಟವಾಗುತ್ತದೆ. ಹೀಗಾಗಿ ಈ ನಾಡಿನಲ್ಲಿ ದೇವಾಲಯಗಳ ವಿವಿಧ ಶೈಲಿ ಮತ್ತು ವಿನ್ಯಾಸಗಳನ್ನು ಅರಿಯಲು ಬಾದಾಮಿ ಚಾಲುಕ್ಯರ ಮನೆತನದ ಕಾಲಕ್ಕೆ ಮೊರೆಹೋಗಬೇಕಾಗುತ್ತದೆ. ಈ ಕಾಲದಲ್ಲಿ ಬಾದಾಮಿ, ಐಹೊಳೆ, ಪಟ್ಟದಕಲ್ಲು ಮಹಾಕೂಟ, ಅಲಂಪುರ ಮೊದಲಾದಡೆಗಳಲ್ಲಿ ಪ್ರಯೋಗ ಮತ್ತು ಸೃಜನಶೀಲತೆಯ ಜೊತೆಗೆ ಶಿಲಾಸಾಮಗ್ರಿ ಲಭ್ಯತೆ ನೆರೆಹೊರೆ ಪ್ರದೇಶಗಳಿಂದ ಬಂದ ಶಿಲ್ಪಿಗಳ ಕೈಚಳಕ, ರಾಜಾಶ್ರಯ, ಧರ್ಮಸ್ಫೂರ್ತಿ, ಸಂಪನ್ಮೂಲಗಳ ಕ್ರೂಢೀಕರಣವೇ ಮೊದಲಾದ ಸಂಗತಿಗಳು ವಿಶಿಷ್ಟ ವಾಸ್ತುಶೈಲಿ ಮತ್ತು ವಿನ್ಯಾಸಗಳಿಗೆ ಹೆಚ್ಚಿನ ಸ್ಫೂರ್ತಿ ನೀಡಿದವು. ಅಲ್ಲದೇ ಸ್ಥಳೀಯ ಜಾನಪದ ಶೈಲಿಯೊಂದಿಗೆ ಸಂಯೋಜನೆ ಮಾಡಲು ಅನುವಾಯಿತು. ಮಾನ್ಯಖೇಟದ ರಾಷ್ಟ್ರಕೂಟ ಮನೆತನದ ಕಾಲದಲ್ಲಿ ಹೆಚ್ಚು ಸ್ಫುಟಗೊಂಡು ಅತ್ಯುಚ್ಚ ಅಭಿವ್ಯಕ್ತಿಯನ್ನು ಪಡೆಯಿತು. ಆ ಪರಂಪರೆಯನ್ನು ಕಲ್ಯಾಣದ ಚಾಳುಕ್ಯರು, ದೋರಸಮುದ್ರದ ಹೊಯ್ಸಳರ, ವಿಜಯನಗರದ ಅರಸರು ಮತ್ತು ಸಮಕಾಲೀನ ಮಹಾಮಂಡಳೇಶ್ವರ, ಮಹಾಸಾಮಂತರ ಮನೆತನಗಳು ಮುಂದುವರಿಸಿದವು.

ದೇವಾಲಯ ವಾಸ್ತುಕಲೆ ಬೆಳೆಯುತ್ತ ಬಂದಂತೆ ಅವುಗಳ ನಿರ್ಮಾಣ ಕುರಿತಂತೆ ಕೃತಿಗಳು ರಚನೆಯಾದವು. ದೇವಾಲಯಗಳನ್ನು ಎಲ್ಲಿ ಕಟ್ಟಬೇಕು. ಹೇಗೆ ಕಟ್ಟಬೇಕು.

ಯಾವ ವಿಧಿ–ವಿಧಾನಗಳಿರಬೇಕು ಮೊದಲಾದ ವಿವರಗಳನ್ನು ನಿರ್ದೇಶಿಸುವ ಶಾಸ್ತ್ರವೇ ಸಿದ್ಧವಾಯಿತು. ಗೃಹಸೂತ್ರ, ಬೃಹತ್ಸಂಹಿತೆ, ಸುಪ್ರಬೇದಾಗಮ, ಕಾಮಿಕಾಗಮ, ಕಾರಣಾಗಮ, ಕಾರವಾಗಮ, ಅಜಿತಾಗಮ, ವೈಖಾನಸಾಗಮ, ಕೌಟಿಲ್ಯನ ಅರ್ಥಶಾಸ್ತ್ರ, ಭಾಣನ ಹರ್ಷಚರಿತೆ, ರಾಜತರಂಗಿಣಿ, ಮೃಚ್ಛಕಟಿಕ, ಅಮರಕೋಶ ಮೊದಲಾದ ಕೃತಿಗಳಲ್ಲಿ ವಾಸ್ತುಕಲೆಯ ವಿವರಣೆಗಳಿವೆ. ಅಪರಾಜಿತಪುಚ್ಛಾ, ಸಮಾರಾಂಗಣ, ಸೂತ್ರದಾರ, ವಿಶ್ವಕರ್ಮಪ್ರಕಾಶ, ಮಾನಸೋಲ್ಲಾಸ, ರೂಪಮಂಡನ ಮೊದಲಾದ ಕೃತಿಗಳು ಉತ್ತರ ಭಾರತದ ದೇವಾಲಯಗಳ ರೂಪರೇಷೆಯನ್ನು ಸೂಚಿಸುತ್ತದೆ. ಅಂತೆಯೇ ಮಯಮತ, ಮಾನಸಾರ, ತಂತ್ರ ಸಮುಚ್ಚಯ, ಕಾಶ್ಯಪಶಿಲ್ಪ, ವಿಮಾನಾರ್ಚನಕಲ್ಪ, ಪದ್ಮಸಂಹಿತಾ, ವಾಸ್ತುವಿದ್ಯಾ, ಶಿಲ್ಪರತ್ನ ಮೊದಲಾದ ಕೃತಿಗಳು ದಕ್ಷಿಣ ಭಾರತದ ದೇವಾಲಯಗಳ ರೂಪರೇಷೆಗಳನ್ನು ಉಲ್ಲೇಖಿಸಿವೆ. ಈ ಕೃತಿಗಳಲ್ಲಿ ದೇವಾಲಯಗಳನ್ನು ಭೌಗೋಳಿಕ ಪ್ರದೇಶ, ರಚನಾ ವಿನ್ಯಾಸ, ಶಿಖರದ ಶೈಲಿಯ ಹಿನ್ನೆಲೆಯಲ್ಲಿ ಬೇರೆ ಬೇರೆ ರೀತಿಯಲ್ಲಿ ವರ್ಗೀಕರಿಸಲಾಗಿದೆ. ಕಾಮಿಕಾಗಮ, ಕಾಶ್ಯಪಶಿಲ್ಪ, ಶಿಲ್ಪರತ್ನ ಮೊದಲಾದ ಕೃತಿಗಳಲ್ಲಿ ಹಿಮಾಲಯದಿಂದ ವಿಂದ್ಯ ಪರ್ವತಗಳವರೆಗಿನ ದೇವಾಲಯಗಳು ನಾಗರ ಶೈಲಿಯವು, ವಿಂಧ್ಯ ಪರ್ವತದಿಂದ ಕೃಷ್ಣಾನದಿ ತೀರದವರೆಗಿನ ದೇವಾಲಯಗಳು ವೇಸರ ಶೈಲಿಯವು ಹಾಗೂ ಕೃಷ್ಣಾ ನದಿಯಿಂದ ಕನ್ಯಾಕುಮಾರಿಯವರೆಗಿನ ದೇವಾಲಯಗಳು ದ್ರಾವಿಡ ಶೈಲಿಯವು ಎಂದು ಭೌಗೋಳಿಕ ಹಿನ್ನೆಲೆಯಲ್ಲಿ ವರ್ಗೀಕರಿಸಲಾಗಿದೆ. ವಿಮಾನಾರ್ಚನಕಲ್ಪ, ದೀಪ್ತಾಗಮ, ರೌರವಾಗಮ, ಮಯಮತ ಮೊದಲಾದ ಕೆಲವು ಕೃತಿಗಳಲ್ಲಿ ದೇವಾಲಯಗಳನ್ನು ರಚನಾ ವಿನ್ಯಾಸದ ಆಧಾರದ ಹಿನ್ನೆಲೆಯಲ್ಲಿ ವರ್ಗೀಕರಿಸಲಾಗಿದೆ. ಕರ್ನಾಟಕದಲ್ಲಿಯ ಕಲಾ ಸಿರಿಯ ಸಮಗ್ರ ಪದ್ಧತಿ ಹಾಗೂ ಶೈಲಿಯನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಬಾದಾಮಿ ತಾಲೂಕಿನ ಶ್ರೀ ಮಹಾಕೂಟ ಕ್ಷೇತ್ರವು ಕೂಡ ಪ್ರಮುಖವಾಗಿದೆ.

೪.೧.೧ ಶೈವ ದೇವಾಲಯಗಳು :

ಶೈವಧರ್ಮವು ವೇದಕಾಲಕ್ಕಿಂತಲೂ ಹಿಂದಿನದು. ಸಿಂಧೂ ಸಂಸ್ಕೃತಿಯಲ್ಲಿ ಪಶುಪತಿ ಶಿವನ ಮುದ್ರೆಗಳು ಇದ್ದದ್ದು ಕಂಡು ಬಂದಿದೆ. ಕರ್ನಾಟಕದಲ್ಲಿ ಕ್ರಿಸ್ತ ಶಕದ ಪ್ರಾರಂಭದಿಂದಲೂ ಶೈವಧರ್ಮವು ಪ್ರಚಲಿತದಲ್ಲಿದೆ. ಈವರೆಗೆ ತಿಳಿದಿರುವಂತೆ ಕರ್ನಾಟಕದಲ್ಲಿಯ ಅತಿ ಪ್ರಾಚೀನ ಶೈವ ದೇವಾಲಯದ ಉಲ್ಲೇಖವು ಬಾದಾಮಿಗೆ ಸಮೀಪದಲ್ಲಿರುವ ವಾಸನದಲ್ಲಿ ದೊರೆತ ಕ್ರಿ.ಶ.೨–೩ನೇ ಶತಮಾನದ ಶಾಸನದಿಂದ ತಿಳಿದು ಬರುತ್ತದೆ. ಬೌದ್ಧಮತಾವಲಂಬಿಗಳಾಗಿದ್ದ ಶಾತವಾಹನರು ಮಹಾದೇವ ದೇವಾಲಯಕ್ಕೆ ಪೂಜೆ ಸಲ್ಲಿಸಿದರು. ಕದಂಬರ ಕಾಲದಲ್ಲಿ ಶೈವಧರ್ಮವು ಪ್ರಮುಖವಾಗಿತ್ತು. ಅದರ ಮೂಲಪುರುಷನಾದ ತ್ರಿಲೋಚನ. ಕದಂಬರು ತ್ರಿಪುರ ಸಂಹಾರದ ನಂತರ ದಣಿದಿದ್ದ ಶಿವನ ಹಣೆಯಿಂದ ಕದಂಬ ಮರದ ಬುಡದಲ್ಲಿ ಬಿದ್ದ ಬೆವರಿನಿಂದ ಹುಟ್ಟಿದನಂತೆ ಎಂಬ ದಂತ ಕಥೆಯಿದೆ.

ಬಾದಾಮಿ ಚಾಲುಕ್ಯರ ಆಳ್ವಿಕೆಯಲ್ಲಿ ಶೈವಧರ್ಮವು ಉನ್ನತ ಸ್ಥಿತಿಯಲ್ಲಿದ್ದಿತು. ಪ್ರಾರಂಭದ ಹಂತದಲ್ಲಿ ವೈಷ್ಣವ, ಶೈವ, ಧರ್ಮಗಳು ಸಮ ಸಮನಾಗಿ ಘೋಷಿಸಲ್ಪಟ್ಟಂತೆ ಕಂಡು ಬರುತ್ತದೆ.[೨] ಮಹಾಕೂಟವು ಶೈವ ಕೇಂದ್ರವಾಗಿದೆ. ಶೈವ ದೇವಾಲಯಗಳ ವಾಸ್ತು ಕಲೆಯನ್ನು ಗಮನಿಸೋಣ.

೧. ಮಹಾಕೂಟೇಶ್ವರ ದೇವಾಲಯಗಳು :

ಸ್ಥಳ	: ಹೊಸ ಮಹಾಕೂಟ
ಕಾಲ	: ಕ್ರಿ.ಶ. ೫೫೦
ರಾಜವಂಶ	: ಬಾದಾಮಿ ಚಾಲುಕ್ಯರು
ದಿಕ್ಕು	: ಪೂರ್ವಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಪ್ರದಕ್ಷಿಣಾಪಥ, ಸಭಾಮಂಟಪ, ಮುಖಮಂಟಪ
ಸ್ಥಿತಿ	: ಉತ್ತಮ

ಈ ದೇವಾಲಯವು ಬಹಳ ಪ್ರಸಿದ್ಧವಾಗಿದೆ. ಇದನ್ನು ಬಾದಾಮಿ ಚಾಲುಕ್ಯರ ದೊರೆ ಜಯಸಿಂಹನ ಮಗ ರಣರಾಗ ಕ್ರಿ.ಶ. ೫೫೦ ರಲ್ಲಿ ನಿರ್ಮಿಸಿದನು.[೩] ಈ ದೇವಾಲಯದಲ್ಲಿ ಆರು ಪ್ರಮುಖ ಶಾಸನಗಳು ಇವೆ.

ಗರ್ಭಗೃಹ : ಇದು ಚೌಕಾಕಾರವಾಗಿದೆ. ಒಳಗೆ ಪಾಣಿಪೀಠವು ಭೂಮಿಯ ಮಟ್ಟದಲ್ಲಿದ್ದು ಮಧ್ಯದಲ್ಲಿ ವೃತ್ತಾಕಾರವಾದ ಲಿಂಗಪೀಠವಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟದಲ್ಲಿ ಲಜ್ಜಾಗೌರಿಯನ್ನು ಹೋಲುವ ಅಸ್ಪಷ್ಟ ಉಬ್ಬು ಶಿಲ್ಪವಿರುವುದು ಗಮನೀಯವಾಗಿದೆ. ಈ ರೀತಿಯ ಬಿಂಬವಿರುವುದು ತೀರ ಅಪರೂಪವಾಗಿದೆ. ಲಜ್ಜಾಗೌರಿಯ ಪೂಜೆಯು ಈಗಲೂ ಬಾದಾಮಿ ಚಾಲುಕ್ಯರ ಅನೇಕ ದೇವಾಲಯಗಳಲ್ಲಿರುವುದು ವ್ಯಕ್ತವಾಗುತ್ತದೆ.

ಪ್ರದಕ್ಷಿಣಾಪಥ : ಗರ್ಭಗೃಹದ ಪಕ್ಕದಲ್ಲಿ ಸಾಂಧಾರ ಪ್ರದಕ್ಷಿಣಾಪಥವಿದ್ದು ಇದರ ಗೋಡೆಗಳಲ್ಲಿ ಜಾಲಂದ್ರಗಳಿವೆ.

ಸಭಾಮಂಟಪ : ಸಭಾಮಂಟಪವು ವಿಶಾಲವಾಗಿದ್ದು ಸಭಾಮಂಟಪದ ಛಾವಣಿಯು ಯಾವುದೇ ಅಲಂಕಾರವನ್ನು ಹೊಂದಿರುವುದಿಲ್ಲ. ಇಲ್ಲಿರುವ ನಾಲ್ಕು ಕಂಬಗಳು ಚಾಲುಕ್ಯ ಶೈಲಿಯಲ್ಲಿದ್ದು ಚೌಕಾಕಾರವಾಗಿದ್ದು ಬೃಹದಾಕಾರವಾಗಿದೆ. ಮತ್ತು ಮಧ್ಯದಲ್ಲಿ ನಾಣ್ಯ ಮಂಟಪವಿದೆ. ಈ ಕಂಬಗಳಲ್ಲಿ ಶಾಸನಗಳು ಇವೆ. ಒಂದು ಶಾಸನವು ಬಪ್ಪುವರಸನು ಮಹಾಕೂಟಕ್ಕೆ ಬಂದಾಗ 'ನಂದಿಕೇಶ್ವರ' ಮತ್ತು 'ನೆಲ್ಲುಗೆ' ಎಂಬ ಎರಡು ಗ್ರಾಮಗಳನ್ನು ದಾನವಾಗಿ ಬಿಟ್ಟಂತೆ ಹೇಳಿದೆ. ಇನ್ನೊಂದು ಶಾಸನವು ಅನ್ಯಸ್ಥಾನದಲ್ಲಿ ಮಾಡುವ ಪಾಪವು ಪುಣ್ಯಸ್ಥಾನದಲ್ಲಿ ನಾಶವಾಗುತ್ತದೆ. ಆದರೆ ಪುಣ್ಯಸ್ಥಾನದಲ್ಲಿ ಮಾಡುವ ಪಾಪವು ವಜ್ರಲೇಪನದಂತೆ

ಅಂಟಿಕೊಳ್ಳುತ್ತದೆ. ಎಂದು ಹೇಳುತ್ತದೆ.

ಮುಖಮಂಟಪ : ಮುಖಮಂಟಪವು ತೆರೆದ ಚಿಕ್ಕ ಮಂಟಪವಾಗಿದೆ. ನಾಲ್ಕು ಕಂಬಗಳನ್ನು ಹೊಂದಿದೆ. ಅದರಲ್ಲಿ ಎರಡು ಕಂಬಗಳಲ್ಲಿ ಶಾಸನಗಳಿವೆ. ಒಂದು ಶಾಸನವು ಶಿವದೇವಾಲಯಕ್ಕೆ ಹಿಂದೆ ನೀಡಿದ ದತ್ತಿಯನ್ನು ಮಂಗಳೇಶನ ತಾಯಿ ದುರ್ಲಭದೇವಿ ಮತ್ತೆ ಹತ್ತು ಹಳ್ಳಿಗಳಿಂದ ಹೆಚ್ಚಿಸಿ ಮುಕ್ತೇಶ್ವರನಾಥನ ಹೆಸರಿನ ದತ್ತಿ ನೀಡಿದ ವಿಷಯವನ್ನು ಉಲ್ಲೇಖಿಸುತ್ತದೆ. ದೇವಾಲಯದ ಒಳಪ್ರಕಾರವು ವಿಶಾಲವಾಗಿದೆ. ಇತ್ತೀಚಿನ ಹತ್ತು ಕಂಭಗಳನ್ನು ಕಟ್ಟಲಾಗಿದೆ. ಮಹಾಕೂಟೇಶ್ವರನ ದೇವಾಲಯದ ಮುಖಮಂಟಪದ ಇನ್ನೊಂದು ಕಂಬದ ಮೇಲಿನ ಶಾಸನವು ಬಾದಾಮಿಚಾಲುಕ್ಯ ಅರಸನಾದ ವಿಜಯಾದಿತ್ಯನ ಸೂಳೆ ವಿನಾಪೋಟಿಯೆಂಬುವಳು ದೇವರಿಗೆ ಒಂದು ರತ್ನಪೀಠ ಮತ್ತು ಬೆಳ್ಳಿ ಛತ್ರವನ್ನು ಮಾಡಿಸಿಕೊಟ್ಟು ಕೆಲವು ಭೂಮಿಯನ್ನು ದಾನ ಮಾಡಿದಳೆಂದು ತಿಳಿದು ಬರುತ್ತದೆ.

ಈ ದೇವಾಲಯದ ಎದುರಿಗೆ ಪ್ರಾಕಾರದ ಹೊರಗೆ ಮಂಗಳೇಶನು ನಿಲ್ಲಿಸಿದ ಧರ್ಮ ಜಯಸ್ತಂಭವು ಈಗ ಬಿಜಾಪುರದ ವಸ್ತುಸಂಗ್ರಹಾಲಯದಲ್ಲಿದೆ. ಮಂಗಳೇಶನು ತನ್ನ ಮಲತಾಯಿಯಾದ ದುರ್ಲಭದೇವಿಯ ಅಪ್ಪಣೆ ಪಡೆದು ಕಿಸುವೊಳಲ್ (ಪಟ್ಟದಕಲ್ಲು) ಕೆಂದೂರು, ಮಾನ್ಯ, ನಂದಿಗ್ರಾಮ, ಆರ್ಯಪುರ ಮೊದಲಾದ ೧೦ ಊರುಗಳನ್ನು ಮಹಾಕೂಟೇಶ್ವರನಿಗೆ ದಾನ ಮಾಡಿದನೆಂದು ಈ ಜಯಸ್ತಂಭದ ಮೇಲಿರುವ ಶಾಸನವು ತಿಳಿಸುತ್ತದೆ. ಈ ದೇವಾಲಯದ ಮುಖಮಂಟಪದ ಗೋಡೆಯಲ್ಲಿ ಜಟಾಬಾರಶಿವ ಶಿಲ್ಪ ಹಾಗೂ ಜಟಾಮಂಡಲಶಿವ ಶಿಲ್ಪಗಳು ಕಂಡು ಬರುತ್ತವೆ.

ಈ ದೇವಾಲಯದ ಎದುರಿಗೆ ನಂದಿಮಂಟಪವಿದೆ. ಇದು ಅದಿಷ್ಠಾನವನ್ನು ಹೊಂದಿದೆ. ಇದರ ಮೇಲೆ ನಂದಿಮೂರ್ತಿ ಇದೆ. ಈ ಮಂಟಪವು ನಾಲ್ಕು ಕಂಬಗಳನ್ನು ಹೊಂದಿದೆ. ಈ ಕಂಬಗಳಲ್ಲಿ ಕಾಮಲೀಲೆಯಲ್ಲಿ ತಲ್ಲೀನರಾದ ಸ್ತ್ರೀಪುರುಷರ ಕೆತ್ತನೆಗಳಿವೆ. ಇವು ವೈವಿದ್ಯಮಯವಾದ ಆಸನಗಳಲ್ಲಿವೆ. ಲೌಕಿಕ ವ್ಯವಹಾರದಿಂದ ವಿಷಯ ಸುಖವನ್ನು ದಾಟಿದಾಗ ಮಹಾಕೂಟೇಶ್ವರನಲ್ಲಿ ಸಾಮುಜ್ಯ ಪದ ಸಿಗುವುದೆಂದು ಊಹಿಸಿ ಶಿಲ್ಪಿ ಈ ಚಿತ್ರಗಳನ್ನು ಬಿಡಿಸಿದಂತಿದೆ. ಈ ನಂದಿಮಂಟಪದ ಹಿಂದೆ ಆರನೇ ಶತಮಾನದ ಗಣಪತಿ ವಿಗ್ರಹವಿದೆ.[೪] ಭಕ್ತರು ಎರೆದ ಎಣ್ಣೆಯಿಂದಾಗಿ ಜಿಡ್ಡುಗಟ್ಟಿ ಕಪ್ಪಾಗಿದೆ. ಈ ದೇವಾಲಯದ ದಕ್ಷಿಣ ಗೋಡೆಯಲ್ಲಿ ಭಿಕ್ಷಾಟನೆ ಶಿವಶಿಲ್ಪ ಮತ್ತು ಶಿವಮೂರ್ತಿ ಶಿಲ್ಪ ಇವೆ. ಈ ಶಿಲ್ಪಗಳ ಕೆಳಗೆ ರಸಿಕ ದಂಪತಿಗಳ ಶಿಲ್ಪಗಳು ಹಾಗೂ ನಾಗಶಿಲ್ಪಗಳು ಇವೆ. ಅದೇ ಗೋಡೆಯ ಮೇಲೆ ಯುದ್ದದ ಶಿಲ್ಪಗಳು ಹಾಗೂ ಮಿತುನಶಿಲ್ಪಗಳು ಇವೆ. ದೇವಾಲಯದ ಪಶ್ಚಿಮ ಗೋಡೆಯಲ್ಲಿ ಕರಂಡ ಮಕುಟ ಶಿವಶಿಲ್ಪ ಹಾಗೂ ಈ ಶಿಲ್ಪದ ಕೆಳಗೆ ಬ್ರಹ್ಮ, ಮಹೇಶ್ವರ, ವಿಷ್ಣು ತ್ರಿಮೂರ್ತಿಶಿಲ್ಪಗಳು ಇವೆ. ಈ ದೇವಾಲಯದ ಉತ್ತರ ಗೋಡೆಯಲ್ಲಿ ಅರ್ಧನಾರೀಶ್ವರಮೂರ್ತಿ ಶಿಲ್ಪ ಹಾಗೂ

ಜಟಾಬಾರಶಿವ ಶಿಲ್ಪಗಳು ಇವೆ.

೨. ಮಲ್ಲಿಕಾರ್ಜುನ ದೇವಾಲಯ :

ಸ್ಥಳ	: ಹೊಸ ಮಹಾಕೂಟ
ಕಾಲ	: ೮ನೇ ಶತಮಾನ
ರಾಜವಂಶ	: ಬಾದಾಮಿ ಚಾಲುಕ್ಯರು
ದಿಕ್ಕು	: ಪೂರ್ವಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಪ್ರದಕ್ಷಣಾಪಥ, ಸಭಾಮಂಟಪ, ಮುಖಮಂಟಪ
ಸ್ಥಿತಿ	: ಉತ್ತಮ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ದೊರೆ ವಿಜಯಾದಿತ್ಯನ ಕಾಲದಲ್ಲಿ ರಚನೆಯಾದ ದೇವಾಲಯವೆಂದು ಹೇಳಲಾಗಿದೆ.[೫] ಇದು ಸುಮಾರು ಕ್ರಿ.ಶ. ೮ನೇ ಶತಮಾನದಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ.

ಗರ್ಭಗೃಹ : ಇದು ಚೌಕಾಕಾರವಾಗಿದೆ. ಒಳಗೆ ಪಾಣಿಪೀಠದ ಮೇಲೆ ಮಧ್ಯದಲ್ಲಿ ವೃತ್ತಾಕಾರವಾದ ದೊಡ್ಡ ಪ್ರಮಾಣದ ಲಿಂಗಪೀಠವಿದೆ. ಇದರಲ್ಲಿ ನಾಲ್ಕು ಕಂಬಗಳಿವೆ. ಅವು ಪ್ರತಿ ಮೂಲೆಗೆ ಒಂದು ಕಂಬವಿದೆ.

ಪ್ರದಕ್ಷಿಣಾಪಥ : ಇದು ಗರ್ಭಗೃಹದ ಪಕ್ಕದಲ್ಲಿ ಸಾಂಧಾರ ಪ್ರದಕ್ಷಿಣಾ ಪಥವಿದ್ದು ಇದು ಗೋಡೆಗಳಲ್ಲಿ ಜಾಲಂಧ್ರಗಳನ್ನು ಹೊಂದಿದೆ.

ಸಭಾಮಂಟಪ : ಇದು ವಿಶಾಲವಾಗಿದ್ದು ಸಭಾಮಂಟಪದ ಛತ್ತಿನಲ್ಲಿ ಬ್ರಹ್ಮ ಮತ್ತು ಪಾರ್ವತಿ ಸಮೇತ ಶಿವನ ಶಿಲ್ಪ ಫಲಕಗಳಿವೆ. ಇಲ್ಲಿ ೧೬ ಕಂಬಗಳಿವೆ. ಅವುಗಳಲ್ಲಿ ೮ ಕಂಬಗಳು ಗೋಡೆಗೆ ಸೇರಿಕೊಂಡಿವೆ. ಕಂಬಗಳು ಯಾವುದೇ ರೀತಿಯ ಅಲಂಕಾರವನ್ನು ಹೊಂದಿಲ್ಲ ಮಧ್ಯದಲ್ಲಿ ನಾಣ್ಯ ಮಂಟಪವಿದೆ.

ಮುಖಮಂಟಪ : ಮುಖಮಂಟಪವು ತೆರದ ಕಿರಿದಾದ ಮಂಟಪವನ್ನು ಹೊಂದಿದೆ. ನಾಲ್ಕು ಕಂಬಗಳನ್ನು ಹೊಂದಿದೆ. ಬಲಭಾಗದ ಕಂಬದ ಮೇಲೆ ಶಾಸನವಿದೆ. ಕಂಬಗಳು ಅಲಂಕೃತವಾಗಿಲ್ಲ. ಈ ಮಂಟಪದ ಗೋಡೆಗೆ ಶೈವ ದ್ವಾರಪಾಲಕರುಗಳು ಇದ್ದಾರೆ. ಈ ಮಂಟಪದ ಕಂಬಗಳು ಚೌಕಾಕಾರದ ಕಂಬಗಳಾಗಿವೆ. ಈ ಮಂಟಪದ ಗೋಡೆಗೆ ಶಿವ ಪರಿವಾರ ಮೂರ್ತಿ ಇದೆ.

ಈ ದೇವಾಲಯದ ಉತ್ತರ ಗೋಡೆಗೆ ವಿಷ್ಣುಶಿಲ್ಪ ಮತ್ತು ಅರ್ಧನಾರೀಶ್ವರ ಶಿಲ್ಪಗಳು ಇವೆ. ಈ ದೇವಾಲಯದ ಪಶ್ಚಿಮ ಗೋಡೆಯಲ್ಲಿ ಪರಶುಧರ ಶಿವಶಿಲ್ಪವಿದೆ. ಈ ದೇವಾಲಯದ ದಕ್ಷಿಣದ ಗೋಡೆಯಲ್ಲಿ ಸ್ಥಾನಕಬ್ರಹ್ಮ ಶಿಲ್ಪ ಮತ್ತು ತ್ರಿಶೂಲಧರ ಶಿವಶಿಲ್ಪ ಇದೆ.

ಈ ದೇವಾಲಯದ ಎದುರಿಗೆ ನಂದಿ ಮಂಟಪವಿದೆ. ಇದು ನಾಲ್ಕು ಕಂಬಗಳನ್ನು

ಹೊಂದಿದೆ. ದೊಡ್ಡ ಪ್ರಮಾಣದ ನಂದಿ ಮೂರ್ತಿಯು ಇರುತ್ತದೆ.

೩. ಮಹಾಕೂಟೇಶ್ವರ ದೇವಾಲಯ :

ಸ್ಥಳ	: ಹಳೆಮಹಾಕೂಟ
ಕಾಲ	: ಕ್ರಿ.ಶ. ೭ನೇ ಶತಮಾನ
ದಿಕ್ಕು	: ಪೂರ್ವಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಪ್ರದಕ್ಷಿಣಾಪಥ, ಸಭಾಮಂಟಪ, ಮುಖಮಂಟಪ
ಸ್ಥಿತಿ	: ಕನಿಷ್ಠ

ಈ ದೇವಾಲಯವು ಗಜಪೃಷ್ಠಾಕೃತಿಯ ಒಂದು ಶಿವ ದೇವಾಲಯವಾಗಿದೆ. ಬಾದಾಮಿ ಪರಿಸರದಲ್ಲಿರುವ ಮೂರು ಈ ಬಗೆಯ ದೇವಾಲಯಗಳಲ್ಲಿ ಇದೇ ಪ್ರಾಚೀನವಾದುದೆಂದು ಅಧ್ಯಯನವು ತಿಳಿಸುತ್ತದೆ.[೬] ಅಪೂರ್ವ ಮಾದರಿಯ ಈ ದೇವಾಲಯ ಸುಮಾರು ಕ್ರಿ.ಶ. ೭ನೇ ಶತಮಾನದ್ದು[೭] ಎಂದು ತಿಳಿದು ಬರುತ್ತದೆ.

ಗರ್ಭಗೃಹ : ಗರ್ಭಗೃಹವು ಗಜಪೃಷ್ಟಾಕೃತಿಯದಾಗಿದೆ. ಜಲದಾರಿಯುಳ್ಳ ವರ್ತುಳಾಕಾರದ ಪೀಠದಲ್ಲಿ ದೊಡ್ಡ ಪ್ರಮಾಣದ ಲಿಂಗವಿದೆ ಈ ಲಿಂಗ ಚಾಲುಕ್ಯರ ಕಾಲದ್ದಾಗಿದೆ. ಗರ್ಭಗೃಹ ಬಾಗಿಲು ಚೌಕಟ್ಟಿನ ಮೇಲಿನ ಅಡ್ಡ ಶಾಖೆಯ ಎರಡು ಬದಿಗಳಲ್ಲಿನ ಉದ್ದ ಶಾಖೆಗಳನ್ನು ಮೀರಿ ಚಾಚಿಕೊಂಡಿದೆ. ಇದರ ಮಧ್ಯದಲ್ಲಿ ಹಾವುಗಳ ಬಾಲಗಳನ್ನು ಹಿಡಿದ ಗರುಡ ಉಬ್ಬುಶಿಲ್ಪ ಇದೆ. ಉದ್ದ ಶಾಖೆಗಳ ಬುಡದಲ್ಲಿ ದ್ವಾರಪಾಲಕರ ಉಬ್ಬು ಶಿಲ್ಪಗಳಿರುವ ಗರ್ಭಗೃಹಕ್ಕೆ ಮೊದಲು ಶಿಖರವಿತ್ತೋ ಇಲ್ಲವೋ ಸ್ಪಷ್ಟವಾಗಿರುವುದಿಲ್ಲ

ಪ್ರದಕ್ಷಿಣಾಪಥ : ಸಭಾಮಂಟಪ ಮತ್ತು ಗರ್ಭಗೃಹದ ಗೋಡೆಗಳ ನಡುವೆ ಪ್ರದಕ್ಷಿಣೆಗೆ ಅವಕಾಶವನ್ನು ಮಾಡಲಾಗಿದೆ.

ಸಭಾಮಂಟಪ : ಸಭಾಮಂಟಪವು ಮಧ್ಯ ನಾಲ್ಕು ಕಂಬಗಳನ್ನು ಹೊಂದಿದೆ. ಮತ್ತು ಎರಡು ಕಂಬಗಳು ಗೋಡೆಗೆ ಅಂಟಿಕೊಂಡಿವೆ. ಮೇಲ್ಛಾವಣಿ ಬಿದ್ದು ಹೋಗಿದೆ. ಸಭಾಮಂಟಪದ ಎಡಬದಿಗೆ ಸುಂದರವಾಗಿ ಕೆತ್ತನೆಗೊಂಡಿರುವ ಸ್ಕಂದನ ಕಾಲ್ಬೆರಳು ಈಟಿಯ ಕೆಳತುದಿ, ಅರ್ಧ ತುಂಡಾದ ನವಿಲಿನ ಬಾಲ ಕಾಣಸಿಗುತ್ತದೆ. ಬಲಬದಿಯಲ್ಲಿ ವೃತ್ತಾಕಾರದ ಪೀಠವಿದೆ. ಇದು ಗಣೇಶ ಶಿಲ್ಪವೆನ್ನಿರಿಸಿದ ಪೀಠವಾಗಿದೆ. ನವಿಲು ವಾಹನವುಳ್ಳ ನಿಂತಭಂಗಿಯಲ್ಲಿರುವ ಕಾರ್ತಿಕೇಯನ ಸುಂದರ ವಿಗ್ರಹ ಸಭಾಮಂಟಪದಲ್ಲಿದೆ.

ಮುಖಮಂಟಪ : ಈ ದೇವಾಲಯದ ಮುಖಮಂಟಪವು ಬಿದ್ದುಹೋಗಿರುವುದು ಕಂಡು ಬರುತ್ತದೆ. ಅಂದರೆ ಅಲ್ಲಿ ಕಂಬಗಳು ನಮಗೆ ಕಂಡು ಬರುತ್ತವೆ. ಈ ದೇವಾಲಯದ ಎದುರಿಗೆ "ಕೋಟೆತೀರ್ಥ" ಎಂಬ ಪುಷ್ಕರಿಣಿಯನ್ನು ಕಾಣುತ್ತೇವೆ. ಈ ಕೋಟಿತೀರ್ಥದ ದಡವನ್ನು ದೇವಾಲಯದ ಬಿಡಿ ಭಾಗಗಳಿಂದ ಕಟ್ಟಲಾಗಿದೆ. ಈ ಕೋಟಿತೀರ್ಥವು ಚಾಲುಕ್ಯರ

ಕಾಲದ ಲ್ಲಿ ಕೆತ್ತಿದ ಕಲ್ಲುಗಳಿಂದ ಮೆಟ್ಟಿಲುಗಳನ್ನು ಕಟ್ಟಲಾಗಿದೆ.

೪. ಅಡಿಕೇಶ್ವರ ದೇವಾಲಯ :

ಸ್ಥಳ	: ಹಳೆ ಮಹಾಕೂಟ
ರಾಜವಂಶ	: ಬಾದಾಮಿ ಚಾಲುಕ್ಯರು
ದಿಕ್ಕು	: ಪೂರ್ವಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಸಣ್ಣಸಾಲೆ
ಸ್ಥಿತಿ	: ಮಧ್ಯಮ

ಈ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದ್ದು ಎಂದು ತಿಳಿದು ಬರುತ್ತದೆ.

ಗರ್ಭಗೃಹ : ಇದು ಚೌಕಾಕಾರವಾಗಿದ್ದು ಅದರಲ್ಲಿ ಗೋಡೆಗೆ ಅಂಟಿಕೊಂಡ ನಾಲ್ಕು ಕಂಬಗಳನ್ನು ಒಳಗೊಂಡ ಗರ್ಭಗೃಹವು ಮದ್ಯದಲ್ಲಿ ಪಾಣಿಪೀಠದಲ್ಲಿ ಒಂದು ಲಿಂಗವಿದೆ. ಇದರಲ್ಲಿ ಅಲಂಕಾರವಾದ ಕಂಬಗಳು ಇಲ್ಲ ಎಂಬುದು ತಿಳಿದು ಬರುತ್ತದೆ.

ಸಣ್ಣಸಾಲೆ : ಇದು ದೇವಾಲಯಕ್ಕೆ ಚಿಕ್ಕದಾದ ಸಾಲೆಯನ್ನು ಹೊಂದಿದೆ. ಇದರಲ್ಲಿ ಯಾವುದೇ ರೀತಿಯ ಶಿಲ್ಪಗಳು ಕಂಡು ಬರುವುದಿಲ್ಲ. ಇದರಲ್ಲಿ ಅಲಂಕಾರವನ್ನು ಹೊಂದದಿರುವ ಸಾಲೆಯಾಗಿದೆ.

೫. ಶಿವದೇವಾಲಯ :

ಸ್ಥಳ	: ಹಳೆ ಮಹಾಕೂಟ
ರಾಜವಂಶ	: ಕಲ್ಯಾಣ ಚಾಲುಕ್ಯರು
ದಿಕ್ಕು	: ಉತ್ತರಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಮುಖಮಂಟಪ
ಸ್ಥಿತಿ	: ಕನಿಷ್ಠ

ಈ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದ್ದು ಎಂದು ತಿಳಿದು ಬರುತ್ತದೆ. ಈ ದೇವಾಲಯವನ್ನು ಅಡಿಕೇಶ್ವರ ದೇವಾಲಯಕ್ಕೆ ಅಂಟಿಕೊಂಡು ಕಟ್ಟಲಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಪೂರ್ವಾಭಿಮುಖವಾಗಿದೆ. ಗರ್ಭಗೃಹವು ನಾಲ್ಕು ಕಂಬಗಳನ್ನು ಹೊಂದಿದೆ. ಅವು ಮೂಲೆಗೆ ಒಂದರಂತೆ ಗೋಡೆಗೆ ಅಂಟಿಕೊಂಡಿವೆ. ಪಾಣಿಪೀಠದ ಮಧ್ಯದಲ್ಲಿ ಲಿಂಗವಿದೆ. ಆದರೆ ಈಗ ಅದನ್ನು ಕಿತ್ತಿದ್ದಾರೆ. ಇಲ್ಲಿ ಕಂಬಗಳು ಚೌಕಾಕಾರದವಾಗಿವೆ. ಮತ್ತು ಗರ್ಭಗೃಹವು ಚೌಕಾಕಾರವಾಗಿವೆ. ಈ ಕಂಬಗಳು ಯಾವುದೇ ರೀತಿಯ ಅಲಂಕಾರವನ್ನು ಹೊಂದಿಲ್ಲ.

ಮುಖಮಂಟಪ : ಮುಖಮಂಟಪವು ಉತ್ತರಾಭಿಮುಖವಾಗಿದೆ. ಇದು ತೆರೆದ ಮುಖ

ಮಂಟಪವನ್ನು ಹೊಂದಿದೆ. ಒಟ್ಟು ಆರು ಕಂಬಗಳನ್ನು ಒಳಗೊಂಡಿದೆ. ಈ ಕಂಬದಲ್ಲಿ ಯಾವುದೆ ರೀತಿಯ ಅಲಂಕಾರಗಳನ್ನು ಮಾಡಿರುವುದಿಲ್ಲ ಎಂದು ತಿಳಿದು ಬರುತ್ತದೆ.

೬. ಭೈರವೇಶ್ವರ ದೇವಾಲಯ :

ಸ್ಥಳ : ಹೊಸ ಮಹಾಕೂಟದ ತೋಟದಲ್ಲಿದೆ

ರಾಜವಂಶ : ರಾಷ್ಟ್ರಕೂಟರು

ದಿಕ್ಕು : ಪೂರ್ವಾಭಿಮುಖ

ತಳವಿನ್ಯಾಸ : ಗರ್ಭಗೃಹ, ಅಂತರಾಳ, ಸಭಾಮಂಟಪ

ಸ್ಥಿತಿ : ಮಧ್ಯಮ

ಈ ದೇವಾಲಯವು ವಾಸ್ತು ಲಕ್ಷಣಗಳನ್ನಾಧರಿಸಿ ರಾಷ್ಟ್ರಕೂಟರ ಕಾಲದ್ದಾಗಿದೆ[೧೦] ಎಂದು ತಿಳಿದು ಬರುತ್ತದೆ.

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ. ಇದು ಪೂರ್ವಾಭಿಮುಖವಾಗಿದೆ. ಈ ಗರ್ಭಗೃಹವು ಹದಿನಾರು ಕಂಬಗಳನ್ನು ಹೊಂದಿದೆ. ಒಂದು ಮೂಲೆಗೆ ನಾಲ್ಕು ಕಂಬಗಳನ್ನು ಹೊಂದಿರುವುದು ಕಂಡು ಬರುತ್ತದೆ. ಒಳಗೆ ಪಾಣಿಪೀಠವು ಭೂಮಿಯ ಮಟ್ಟದಲ್ಲಿದ್ದು ಮದ್ಯದಲ್ಲಿ ವೃತ್ತಾಕಾರವಾದ ಲಿಂಗಪೀಠವಿದೆ. ಗರ್ಭಗೃಹದಲ್ಲಿ ವಿಷ್ಣುವಿನಮೂರ್ತಿ ಇರುವುದು ಮತ್ತು ಇದರ ಹತ್ತಿರ ಅವನ ಅವತಾರಗಳಾದ ವರಾಹ ಮತ್ತು ನರಸಿಂಹದೇವರ ಮೂರ್ತಿಗಳಿರುವವು. ಗರ್ಭಗೃಹದಲ್ಲಿರುವ ಕಂಬಗಳು ಅಲಂಕಾರಗಳಿಂದ ಕೂಡಿಲ್ಲ. ಇವು ಸಾದಾ ಕಂಬಗಳಾಗಿವೆ.

ಅಂತರಾಳ : ಇದು ಚೌಕಾಕಾರವಾಗಿದೆ. ಇದು ಎಂಟು ಕಂಬಗಳನ್ನು ಹೊಂದಿದೆ. ದ್ವಾರಬಾಗಿಲು ಸರಳವಾಗಿದೆ. ಕಂಬಗಳು ಸರಳ ರೀತಿಯಲ್ಲಿವೆ. ಇವು ಅಲಂಕಾರದಿಂದ ಕೂಡಿಲ್ಲ. ಅಂತರಾಳದ ಗೋಡೆಯ ಮೇಲೆ ಯಾವುದೇ ರೀತಿಯ ಶಿಲ್ಪಗಳು ಕಂಡು ಬಂದಿಲ್ಲ.

ಸಭಾಮಂಟಪ : ಈ ದೇವಾಲಯದ ಸಭಾಮಂಟಪವು ವಿಶಾಲವಾಗಿದ್ದು ಇದು ಚೌಕಾಕಾರವಾಗಿದೆ. ಹದಿನಾಲ್ಕು ಕಂಬಗಳನ್ನು ಹೊಂದಿ ವಿಶಾಲವಾಗಿದೆ. ನಡುವೆ ನಾಲ್ಕು ಕಂಬಗಳು ಇವೆ. ಎಂಟು ಕಂಬಗಳು ಗೋಡೆಗೆ ನಾಲ್ಕು ಅಂಟಿಕೊಂಡಿವೆ. ಸಭಾಮಂಟಪದ ಮದ್ಯ ನಾಣ್ಯಪೀಠವಿದೆ. ಇಲ್ಲಿ ಕಂಬಗಳು ಸಾದಾ ರೀತಿಯಲ್ಲಿವೆ. ಯಾವುದೇ ರೀತಿಯ ಅಲಂಕಾರವನ್ನು ಹೊಂದಿರುವುದಿಲ್ಲ. ಯಾವ ಗೋಡೆಯ ಮೇಲೆ ಶಿಲ್ಪಗಳು ಇಲ್ಲ.

೭. ಅಡಿಕೇಶ್ವರ ದೇವಾಲಯ :

ಸ್ಥಳ : ಹೊಸ ಮಹಾಕೂಟದ ತೋಟದಲ್ಲಿದೆ

ರಾಜವಂಶ : ರಾಷ್ಟ್ರಕೂಟರು

ದಿಕ್ಕು : ಪೂರ್ವಾಭಿಮುಖ

ತಳವಿನ್ಯಾಸ : ಗರ್ಭಗೃಹ, ಅಂತರಾಳ ಸಭಾಮಂಟಪ

ಸ್ಥಿತಿ : ಉತ್ತಮ

ಈ ದೇವಾಲಯವನ್ನು ವಾಸ್ತು ಲಕ್ಷಣಗಳನ್ನಾಧರಿಸಿ ರಾಷ್ಟ್ರಕೂಟರ ಕಾಲದ್ದು[೧೧] ಎಂದು ತಿಳಿದು ಬರುತ್ತದೆ. ಈ ದೇವಾಲಯವು ಜೀರ್ಣೋದ್ಧಾರಗೊಂಡಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದ್ದು ಪೂರ್ವಾಭಿಮುಖವಾಗಿದೆ. ಸಾದಾ ರೀತಿಯಲ್ಲಿದೆ. ಮದ್ಯದಲ್ಲಿ ಪಾಣಿಪೀಠವು ಭೂಮಿಯ ಮಟ್ಟದಲ್ಲಿದ್ದು ವೃತ್ತಾಕಾರವಾದ ಲಿಂಗಪೀಠವಿದೆ.

ಅಂತರಾಳ : ಇದು ಚೌಕಾಕಾರವಾಗಿದೆ. ಇದು ಸರಳ ರೀತಿಯಲ್ಲಿ ನಿರ್ಮಾಣವಾಗಿದೆ. ಯಾವುದೇ ರೀತಿಯ ಅಲಂಕಾರಗಳು ಕಂಡು ಬರುವುದಿಲ್ಲ ದ್ವಾರ ಬಾಗಿಲು ಸರಳವಾಗಿದೆ.

ಸಭಾಮಂಟಪ : ಸಭಾಮಂಟಪವು ವಿಶಾಲವಾಗಿದ್ದು ಚೌಕಾಕಾರವಿದೆ. ಇದರಲ್ಲಿ ಹದಿನಾರು ಕಂಬಗಳನ್ನು ಒಳಗೊಂಡಿದೆ. ಅದರಲ್ಲಿ ಹನ್ನೆರಡು ಕಂಬಗಳು ಗೋಡೆಗೆ ಅಂಟಿಕೊಂಡಿವೆ. ನಾಲ್ಕು ಕಂಬಗಳು ಮದ್ಯದಲ್ಲಿವೆ. ಕಂಬಗಳು ಯಾವುದೆ ರೀತಿಯ ಅಲಂಕಾರಗಳನ್ನು ಹೊಂದಿಲ್ಲ. ಮದ್ಯದಲ್ಲಿ ನಾಣ್ಯಪೀಠವಿದೆ. ಎಂದು ತಿಳಿದು ಬರುತ್ತದೆ. ಸಭಾಮಂಟಪದ ಗೋಡೆಗಳ ಮೇಲೆ ಯಾವುದೇ ರೀತಿಯ ಶಿಲ್ಪಗಳು ಕಂಡು ಬರುವುದಿಲ್ಲ.

೮. ಸಂಗಮೇಶ್ವರ ದೇವಾಲಯ :

ಸ್ಥಳ : ಹೊಸ ಮಹಾಕೂಟ

ರಾಜವಂಶ : ಬಾದಾಮಿ ಚಾಲುಕ್ಯರು

ದಿಕ್ಕು : ಪೂರ್ವಾಭಿಮುಖ

ತಳವಿನ್ಯಾಸ : ಗರ್ಭಗೃಹ, ಮುಖಮಂಟಪ

ಸ್ಥಿತಿ : ಉತ್ತಮ

ಈ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಾಣವಾಗಿದೆ.[೧೨]

ಗರ್ಭಗೃಹ : ಇದು ಚೌಕಾಕಾರವಾಗಿದೆ. ಗರ್ಭಗೃಹವು ಪೂರ್ವಾಭಿಮುಖವಾಗಿದೆ. ಒಳಗೆ ಪಾಣಿಪೀಠದಲ್ಲಿ ಲಿಂಗವಿದೆ. ಗರ್ಭಗೃಹದಲ್ಲಿ ಯಾವುದೇ ರೀತಿಯ ಶಿಲ್ಪಗಳು ಕಂಡು ಬರುವುದಿಲ್ಲ. ಗರ್ಭಗೃಹ ಸಾದಾ ರೀತಿಯಲ್ಲಿ ನಿರ್ಮಾಣವಾಗಿದೆ.

ಮುಖಮಂಟಪ : ತೆರೆದ ಮುಖಮಂಟಪವನ್ನು ಹೊಂದಿದೆ. ನಾಲ್ಕು ಕಂಬಗಳನ್ನು ಒಳಗೊಂಡಿದೆ. ಕಂಬಗಳು ಸ್ವಲ್ಪಮಟ್ಟಿಗೆ ಅಲಂಕಾರಗೊಂಡಿವೆ. ಎಂದು ಕಂಡು ಬರುತ್ತದೆ. ಎರಡು ಕಂಬಗಳ ಮದ್ಯದಲ್ಲಿ ಶಿಲ್ಪಗಳು ಕಂಡು ಬರುತ್ತದೆ.

ಈ ದೇವಾಲಯದ ದಕ್ಷಿಣ ಗೋಡೆಯಲ್ಲಿ ಅಪಸ್ವರ ಪುರುಷನನ್ನು ತಿಳಿದು

ಸಮಭಂಗಿಯಲ್ಲಿ ನಿಂತಿರುವ ಊರ್ಧ್ವರೇತೇಶ್ವರ ಶಿಲ್ಪ ಮನೋಹರವಾಗಿದೆ. ಈ ದೇವಾಲಯದ ಪಶ್ಚಿಮಗೋಡೆಯಲ್ಲಿ ಜಗತ್‌ಸೃಷ್ಟಿಗೆ ಕಾರಣವಾದ ಶಿವಶಕ್ತಿಯರನ್ನು ಒಂದುಗೂಡಿಸಿ ಕೆತ್ತಿದ ಅರ್ಧನಾರೀಶ್ವರ ವಿಗ್ರಹ ಬಹು ಸುಂದರವಾಗಿದೆ. ಈ ದೇವಾಲಯದ ಉತ್ತರ ಗೋಡೆಯಲ್ಲಿ ಹರಿಹರನ ಶಿಲ್ಪವಿದೆ.

೯. ವಿರೂಪಾಕ್ಷೇಶ್ವರ ದೇವಾಲಯ :

ಸ್ಥಳ	: ಹೊಸ ಮಹಾಕೂಟ
ರಾಜವಂಶ	: ಬಾದಾಮಿ ಚಾಲುಕ್ಯರು
ದಿಕ್ಕು	: ಪೂರ್ವಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಮುಖಮಂಟಪ
ಸ್ಥಿತಿ	: ಉತ್ತಮ

ಈ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಾಣವಾಗಿದೆ.[೧೩]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ. ಇದು ಪೂರ್ವಾಭಿಮುಖವಾಗಿದೆ. ಒಳಗೆ ಪಾಣಿಪೀಠದಲ್ಲಿ ಮಧ್ಯ ಲಿಂಗವಿದೆ. ಗರ್ಭಗೃಹ ಸಾದಾ ರೀತಿಯಲ್ಲಿದೆ. ಇಲ್ಲಿ ಅಲಂಕಾರಗಳನ್ನು ಹೊಂದಿಲ್ಲ.

ಮುಖಮಂಟಪ : ತೆರೆದ ಮುಖಮಂಟಪವನ್ನು ಹೊಂದಿದ್ದು ಇದು ಪೂರ್ವಾಭಿಮುಖವಾಗಿದೆ. ಇದು ನಾಲ್ಕು ಕಂಬಗಳನ್ನು ಒಳಗೊಂಡಿದೆ. ಈ ಗುಡಿಯ ಕಂಬದ ಮೇಲೆ ಶಾಸನವಿದೆ. ಶ್ರೀ ಸಂಕ್ಕಡಿ ಪ್ರಗಿತಿ ಮಳೌಲ್ಬನ್ ಇದು ಸಂಕ್ಕಡಿ ಎಂಬ ವ್ಯಕ್ತಿಯನ್ನು ಹೆಸರಿಸುವ ಶಾಸನವಾಗಿದೆ. ಇದು ಕ್ರಿ.ಶ. ೮ನೆಯ ಶತಮಾನದ ಶಾಸನವಾಗಿದೆ. ಕಂಬಗಳು ಚೌಕಾಕಾರವಾಗಿದ್ದು ಸ್ವಲ್ಪ ಮಟ್ಟಿಗೆ ಅಲಂಕಾರಗೊಂಡಿವೆ. ಮತ್ತು ಎರಡು ಕಂಬಗಳ ನಡುವೆ ಪಟ್ಟಿಕೆಗೆ ಕಾಮಲೀಲೆಯಲ್ಲಿ ನಿರತರಾದವರ ಶಿಲ್ಪಗಳು ಇವೆ.

ಈ ದೇವಾಲಯದ ಉತ್ತರ ಗೋಡೆಗೆ ಉಗ್ರನರಸಿಂಹನ ಮೂರ್ತಿ ಶಿಲ್ಪವಿದೆ. ಪಶ್ಚಿಮದ ಗೋಡೆಗೆ ವಿಷ್ಣು ಶಿಲ್ಪವಿದೆ. ದಕ್ಷಿಣದ ಗೋಡೆಗೆ ಭೂವರಹನ ಶಿಲ್ಪವಿದೆ. ಈ ದೇವಾಲಯದ ಎದುರಿಗೆ ನಂದಿಮೂರ್ತಿಯು ಇದೆ.

೧೦. ಮಹಾಲಿಂಗ ದೇವಾಲಯ :

ಸ್ಥಳ	: ಹೊಸ ಮಹಾಕೂಟ
ರಾಜವಂಶ	: ಬಾದಾಮಿ ಚಾಲುಕ್ಯರು
ದಿಕ್ಕು	: ಪೂರ್ವಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಮುಖಮಂಟಪ

ಸ್ಥಿತಿ : ಮದ್ಯಮ

ಈ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಿಸಲಾಗಿದೆ.[೧೪]

ಗರ್ಭಗೃಹ : ಇದು ಚೌಕಾಕಾರವಾಗಿದ್ದು ಪೂರ್ವಾಭಿಮುಖವಾಗಿದೆ. ಒಳಗೆ ಪಾಣಿಪೀಠವಿದೆ. ಮದ್ಯ ಲಿಂಗವಿದೆ. ಗರ್ಭಗೃಹವು ಯಾವುದೇ ರೀತಿಯ ಅಲಂಕಾರದಿಂದ ಕೂಡಿರುವುದಿಲ್ಲ ಇದು ಸಾದಾ ರೀತಿಯಲ್ಲಿ ಇದೆ.

ಮುಖಮಂಟಪ : ಇದು ಪೂರ್ವಾಬಿಮುಖವಾಗಿದ್ದು ನಾಲ್ಕು ಕಂಬಗಳನ್ನು ಹೊಂದಿದೆ. ಇದು ತೆರೆದ ಮುಖಮಂಟಪವಾಗಿದೆ. ಕಂಬಗಳು ಚೌಕಾಕಾರವಾಗಿದೆ. ಕಂಬಗಳು ಯಾವುದೇ ರೀತಿಯ ಅಲಂಕಾರಗಳಿಂದ ಕೂಡಿರುವುದಿಲ್ಲ ಈ ದೇವಾಲಯದಲ್ಲಿ ಶಾಸನಗಳು ಕಂಡು ಬಂದಿಲ್ಲ.

೧೧. ವೀರಭದ್ರ ದೇವಾಲಯ :

ಸ್ಥಳ : ಹೊಸ ಮಹಾಕೂಟ

ರಾಜವಂಶ : ಬಾದಾಮಿ ಚಾಲುಕ್ಯರು

ದಿಕ್ಕು : ಪೂರ್ವಾಭಿಮುಖ

ತಳವಿನ್ಯಾಸ : ಗರ್ಭಗೃಹ, ಮುಖಮಂಟಪ

ಸ್ಥಿತಿ : ಉತ್ತಮ

ಈ ದೇವಾಲಯವು ಬಾದಾಮಿ ಚಾಲುಕ್ಯರ ಅರಸು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ಈ ದೇವಾಲಯವು ನಿರ್ಮಾಣವಾಗಿದೆ.[೧೫]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹವು ವಿಶಾಲವಾಗಿದ್ದು ಇದರಲ್ಲಿ ನಾಲ್ಕು ಕಂಬಗಳನ್ನು ಒಳಗೊಂಡಿದೆ. ಕಂಬಗಳು ಅಲಂಕಾರವನ್ನು ಹೊಂದಿಲ್ಲ. ಈ ಗರ್ಭಗೃಹದಲ್ಲಿ ವೀರಭದ್ರ ಮೂರ್ತಿಯು ಇದೆ. ಗರ್ಭಗೃಹದಲ್ಲಿ ಯಾವುದೇ ಅಲಂಕಾರವು ಇರುವುದಿಲ್ಲ.

ಮುಖಮಂಟಪ : ಇದು ತೆರೆದ ಮುಖಮಂಟಪವನ್ನು ಹೊಂದಿದ್ದು ಪೂರ್ವಾಭಿಮುಖವಾಗಿದೆ. ಇದು ನಾಲ್ಕು ಕಂಬಗಳನ್ನು ಒಳಗೊಂಡಿದೆ. ಇತ್ತೀಚಿನ ಎರಡು ಕಂಬಗಳು ಇವೆ. ಮುಖಮಂಟಪ ಕಂಬದಲ್ಲಿ ಯಾವುದೇ ರೀತಿಯ ಅಲಂಕಾರಗಳನ್ನು ಹೊಂದಿಲ್ಲ. ಈ ದೇವಾಲಯದಲ್ಲಿ ಶಾಸನಗಳು ಕಂಡು ಬರುವುದಿಲ್ಲ.

೧೨. ಕಾಲಕಾಲೇಶ್ವರ ದೇವಾಲಯ :

ಸ್ಥಳ : ಹೊಸ ಮಹಾಕೂಟ

ರಾಜವಂಶ : ಬಾದಾಮಿ ಚಾಲುಕ್ಯರು

ದಿಕ್ಕು : ಪೂರ್ವಾಭಿಮುಖ

ತಳವಿನ್ಯಾಸ : ಗರ್ಭಗೃಹ, ಮುಖಮಂಟಪ

ಸ್ಥಿತಿ : ಕನಿಷ್ಠ

ಈ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಾಣವಾಗಿದೆ.[೧೬]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದ್ದು, ಇದು ಪೂರ್ವಾಭಿಮುಖವಾಗಿದೆ. ಗರ್ಭಗೃಹದ ಒಳಗೆ ಪಾಣಿಪೀಠವಿದ್ದು, ಮಧ್ಯದಲ್ಲಿ ಲಿಂಗವಿದೆ. ಗರ್ಭಗೃಹವು ಯಾವುದೇ ಅಲಂಕಾರಗಳನ್ನು ಹೊಂದಿಲ್ಲ.

ಮುಖಮಂಟಪ : ಇದು ತೆರೆದ ಮುಖಮಂಟಪವನ್ನು ಹೊಂದಿದ್ದು ಇದು ಪೂರ್ವಾಭಿಮುಖವಾಗಿದೆ. ಇದು ನಾಲ್ಕು ಕಂಬಗಳನ್ನು ಹೊಂದಿರುತ್ತದೆ. ಇಲ್ಲಿಯ ಕಂಬಗಳು ಚೌಕಾಕಾರವಾಗಿದ್ದು ಅವುಗಳಲ್ಲಿ ಸ್ವಲ್ಪ ಮಟ್ಟಿಗೆ ಅಲಂಕಾರಗಳನ್ನು ಹೊಂದಿರುತ್ತವೆ.

ಈ ದೇವಾಲಯದ ಉತ್ತರ ಗೋಡೆಗೆ ಹರಿಹರನ ಶಿಲ್ಪವನ್ನು ಹೊಂದಿದೆ. ಪಶ್ಚಿಮಗೋಡೆಗೆ ಅರ್ಧನಾರೀಶ್ವರ ಶಿಲ್ಪವನ್ನು ಹೊಂದಿರುತ್ತದೆ. ಈ ದೇವಾಲಯದ ಎದುರುಗಡೆಗೆ ನಂದಿ ಮೂರ್ತಿಯು ಕಂಡು ಬರುತ್ತದೆ.

೧೩. ನಟರಾಜ ದೇವಾಲಯ :

ಸ್ಥಳ : **ಹೊಸ ಮಹಾಕೂಟ**

ರಾಜವಂಶ : **ಬಾದಾಮಿ ಚಾಲುಕ್ಯರು**

ದಿಕ್ಕು : **ಉತ್ತರಾಭಿಮುಖ**

ತಳವಿನ್ಯಾಸ : ಗರ್ಭಗೃಹ, ಮುಖಮಂಟಪ

ಸ್ಥಿತಿ : ಕನಿಷ್ಠ

ಈ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ರಚನೆಯಾದ ದೇವಾಲಯವಾಗಿದೆ.[೧೭]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ. ಇದು ಉತ್ತರಾಭಿಮುಖವಾಗಿದೆ. ಒಳಗೆ ಪಾಣಿಪೀಠದ ಮಧ್ಯದಲ್ಲಿ ಲಿಂಗವಿದೆ. ಗರ್ಭಗೃಹವು ಯಾವುದೇ ರೀತಿಯ ಅಲಂಕಾರಗಳನ್ನು ಹೊಂದಿಲ್ಲ. ಇದು ಸಾದಾ ರೀತಿಯಲ್ಲಿ ಕಟ್ಟಲಾಗಿದೆ.

ಮುಖಮಂಟಪ : ಇದು ತೆರೆದ ಮುಖಮಂಟಪವನ್ನು ಹೊಂದಿದ್ದು ಅದು ನಾಲ್ಕು ಕಂಬಗಳಿಂದ ಕೂಡಿದೆ. ಈ ಕಂಬಗಳು ಚೌಕಾಕಾರವಿದ್ದು ಅವು ಯಾವುದೇ ರೀತಿಯ ಅಲಂಕಾರಗಳನ್ನು ಹೊಂದಿಲ್ಲ. ಮುಖಮಂಟಪವು ಉತ್ತರಾಭಿಮುಖವಾಗಿದೆ. ಈ ದೇವಾಲಯದ ಎದುರಿಗೆ ನಂದಿಮೂರ್ತಿಯು ಇದೆ.

೧೪. ಭೀಮೇಶ್ವರಲಿಂಗ ದೇವಾಲಯ :

ಸ್ಥಳ	:	ಹೊಸ ಮಹಾಕೂಟ
ರಾಜವಂಶ	:	ಬಾದಾಮಿ ಚಾಲುಕ್ಯರು
ದಿಕ್ಕು	:	ಪೂರ್ವಾಭಿಮುಖ
ತಳವಿನ್ಯಾಸ	:	ಗರ್ಭಗೃಹ, ಮುಖಮಂಟಪ
ಸ್ಥಿತಿ	:	ಕನಿಷ್ಠ

ಈ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ರಚನೆಯಾದ ದೇವಾಲಯವಾಗಿದೆ.[೧೮]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ. ಇದು ಪೂರ್ವಾಭಿಮುಖವಾಗಿದೆ. ಒಳಗೆ ಪಾಣಿಪೀಠದ ಮಧ್ಯದಲ್ಲಿ ಲಿಂಗವಿದೆ. ಗರ್ಭಗೃಹವು ಯಾವುದೇ ರೀತಿಯ ಅಲಂಕಾರಗಳನ್ನು ಹೊಂದಿಲ್ಲ. ಇದು ಸಾದಾ ರೀತಿಯಲ್ಲಿ ನಿರ್ಮಿಸಲಾಗಿದೆ.

ಮುಖಮಂಟಪ : ತೆರೆದ ಮುಖಮಂಟಪವನ್ನು ಹೊಂದಿತ್ತು ಆದರೆ ಇದು ಈಗ ಬಿದ್ದು ಹೋಗಿದೆ. ಕೇವಲ ಎರಡು ಕಂಬಗಳು ಮಾತ್ರ ಉಳಿದಿವೆ. ಈ ಕಂಬಗಳು ಚೌಕಾಕಾರವಾಗಿವೆ. ಅವು ಯಾವುದೇ ರೀತಿಯ ಅಲಂಕಾರಗಳನ್ನು ಹೊಂದಿಲ್ಲ. ಮುಖಮಂಟಪವು ಪೂರ್ವಾಭಿಮುಖವಾಗಿದೆ. ಈ ದೇವಾಲಯದ ಎದುರಿಗೆ ನಂದಿಮೂರ್ತಿಯು ಇದೆ.

೧೫. ಕನ್ನಯ್ಯ ದೇವಾಲಯ :

ಸ್ಥಳ	:	ಹೊಸ ಮಹಾಕೂಟ
ರಾಜವಂಶ	:	ಬಾದಾಮಿ ಚಾಲುಕ್ಯರು
ದಿಕ್ಕು	:	ಉತ್ತರಾಭಿಮುಖ
ತಳವಿನ್ಯಾಸ	:	ಗರ್ಭಗೃಹ, ಮುಖಮಂಟಪ
ಸ್ಥಿತಿ	:	ಕನಿಷ್ಠ

ಈ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ನಿರ್ಮಿಸಲಾಗಿದೆ.[೧೯]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ. ಇದು ಉತ್ತರಾಭಿಮುಖವಾಗಿದೆ. ಗರ್ಭಗೃಹದಲ್ಲಿ ನಾಲ್ಕು ಕಂಬಗಳಿವೆ. ಅವು ಗೋಡೆಗೆ ಅಂಟಿಕೊಂಡಿದ್ದು ಚೌಕಾಕಾರವಾಗಿವೆ. ಇವು ಯಾವುದೇ ರೀತಿಯ ಅಲಂಕಾರಗಳನ್ನು ಹೊಂದಿಲ್ಲ. ಒಳಗಡೆ ಪಾಣಿಪೀಠದಲ್ಲಿ ಲಿಂಗವಿದೆ.

ಮುಖಮಂಟಪ : ಇದು ತೆರೆದ ಮುಖಮಂಟಪವನ್ನು ಹೊಂದಿದ್ದು ಇದು ಎಂಟು ಕಂಬಗಳಿಂದ ಕೂಡಿದೆ. ಈ ಕಂಬಗಳು ಚೌಕಾಕಾರವಾಗಿವೆ. ಇವು ಯಾವುದೇ ರೀತಿಯ ಅಲಂಕಾರಗಳನ್ನು ಹೊಂದಿಲ್ಲ. ಸಾದಾ ರೀತಿಯಲ್ಲಿ ನಿರ್ಮಾಣವಾಗಿವೆ. ಈ ದೇವಾಲಯದ

ಎದುರಿಗೆ ನಂದಿಮೂರ್ತಿಯು ಇದೆ.

೧೯. ವ್ಯಾಘ್ರವಾದೇಶ ದೇವಾಲಯ :

ಸ್ಥಳ : ಹೊಸ ಮಹಾಕೂಟ

ರಾಜವಂಶ : ಬಾದಾಮಿ ಚಾಲುಕ್ಯರು

ದಿಕ್ಕು : ಪಶ್ಚಿಮಾಭಿಮುಖ

ತಳವಿನ್ಯಾಸ : ಗರ್ಭಗೃಹ, ಮುಖಮಂಟಪ

ಸ್ಥಿತಿ : ಕನಿಷ್ಠ

ಈ ದೇವಾಲಯುವನ್ನು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ರಚನೆಯಾಗಿದೆ.[೨೦]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದ್ದು, ಪಶ್ಚಿಮಾಭಿಮುಖವಾಗಿದೆ. ಒಳಗೆ ಪಾಣಿಪೀಠದ ನಡುವೆ ಲಿಂಗವಿದೆ. ಸಾದಾ ರೀತಿಯಲ್ಲಿ ರಚನೆಯಾಗಿದೆ. ಗರ್ಭಗೃಹದಲ್ಲಿ ಯಾವುದೇ ರೀತಿಯ ಅಲಂಕೃತವಾಗಿಲ್ಲ.

ಮುಖಮಂಟಪ : ಇದು ತೆರೆದ ಮುಖಮಂಟಪವನ್ನು ಹೊಂದಿದ್ದು ಪಶ್ಚಿಮಾಭಿಮುಖವಾಗಿದೆ. ಇಲ್ಲಿ ನಾಲ್ಕು ಕಂಬಗಳಿವೆ, ಅವು ಚೌಕಾಕಾರವಾಗಿದ್ದು ಯಾವುದೇ ರೀತಿಯ ಅಲಂಕಾರಗಳನ್ನು ಹೊಂದಿಲ್ಲ. ಮುಖಮಂಟಪವು ಈ ದೇವಾಲಯದ ಎದುರಿಗೆ ನಂದಿಮೂರ್ತಿಯು ಇದೆ.

೧೭. ಪಿನಾಕವಾಣಿ ದೇವಾಲಯ :

ಸ್ಥಳ : ಹೊಸ ಮಹಾಕೂಟ

ರಾಜವಂಶ : ಬಾದಾಮಿ ಚಾಲುಕ್ಯರು

ದಿಕ್ಕು : ಪಶ್ಚಿಮಾಭಿಮುಖ

ತಳವಿನ್ಯಾಸ : ಗರ್ಭಗೃಹ, ಮುಖಮಂಟಪ

ಸ್ಥಿತಿ : ಕನಿಷ್ಠ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ಕಾಲದ ಅರಸನಾದ ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ನಿರ್ಮಾಣವಾಗಿದೆ.[೨೧]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದ್ದು, ಇದು ಪಶ್ಚಿಮಾಭಿಮುಖವಾಗಿದೆ. ಒಳಗೆ ಪಾಣಿಪೀಠದ ಮೇಲೆ ಲಿಂಗವಿದೆ. ಗರ್ಭಗೃಹವು ಸಾದಾ ರೀತಿಯಲ್ಲಿದೆ. ಯಾವುದೇ ರೀತಿಯಲ್ಲಿ ಅಲಂಕೃತವಾಗಿಲ್ಲ.

ಮುಖಮಂಟಪ : ಇದು ತೆರೆದ ಮುಖಮಂಟಪವಾಗಿದ್ದು ಇದು ಪಶ್ಚಿಮಾಭಿಮುಖವಾಗಿದೆ. ನಾಲ್ಕು ಕಂಬಗಳಿಂದ ಕೂಡಿದ್ದು ಅದು ಈಗ ಬಿದ್ದು ಹೋಗಿದೆ. ಈಗ ಎರಡು ಕಂಬಗಳು ಮಾತ್ರ ಉಳಿದಿವೆ. ಈ ಕಂಬಗಳು ಸ್ವಲ್ಪ ಮಟ್ಟಿಗೆ ಅಲಂಕಾರ ಹೊಂದಿವೆ. ಎರಡು ಕಂಬಗಳ ನಡುವೆ ಸಂಗೀತಗಾರರ ಶಿಲ್ಪಗಳು ಇವೆ.

೧೮. ಅಗಸ್ತೇಶ್ವರ ದೇವಾಲಯ :

ಸ್ಥಳ	: ಹೊಸ ಮಹಾಕೂಟ
ರಾಜವಂಶ	: ಬಾದಾಮಿ ಚಾಲುಕ್ಯರು
ದಿಕ್ಕು	: ಪಶ್ಚಿಮಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಮುಖಮಂಟಪ
ಸ್ಥಿತಿ	: ಕನಿಷ್ಠ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ರಚನೆಯಾಗಿದೆ.[೨೨]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದ್ದು ಇದು ಪಶ್ಚಿಮಾಭಿಮುಖವಾಗಿ ಸಾದಾ ರೀತಿಯಲ್ಲಿ ನಿರ್ಮಾಣವಾಗಿದೆ. ಯಾವುದೇ ರೀತಿಯ ಅಲಂಕಾರಗಳು ಇಲ್ಲ. ಗರ್ಭಗೃಹದ ಒಳಗೆ ಪಾಣಿಪೀಠದ ಮೇಲೆ ಲಿಂಗವಿದೆ.

ಮುಖಮಂಟಪ : ಇದು ತೆರೆದ ಮುಖಮಂಟಪವನ್ನು ಹೊಂದಿದ್ದು ಪಶ್ಚಿಮಾಭಿಮುಖವಾಗಿದೆ. ಈಗ ಅದು ಬಿದ್ದು ಹೋಗಿದೆ. ಇದು ನಾಲ್ಕು ಕಂಬಗಳಿಂದ ಕೂಡಿತ್ತು ಎಂದು ತಿಳಿದು ಬರುತ್ತದೆ. ಕಂಬಗಳು ಯಾವುದೇ ರೀತಿಯ ಅಲಂಕಾರವನ್ನು ಹೊಂದಿಲ್ಲ.

೧೯. ಕೋಟೆಲಿಂಗ ದೇವಾಲಯ :

ಸ್ಥಳ	: ಹೊಸ ಮಹಾಕೂಟ
ರಾಜವಂಶ	: ಬಾದಾಮಿ ಚಾಲುಕ್ಯರು
ದಿಕ್ಕು	: ಪಶ್ಚಿಮಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಮುಖಮಂಟಪ
ಸ್ಥಿತಿ	: ಕನಿಷ್ಠ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ರಚನೆಯಾಗಿದೆ.[೨೩]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ ಇದು ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹದ ಒಳಗೆ ಪಾಣಿಪೀಠದ ಮಧ್ಯ ಲಿಂಗವಿದೆ. ಗರ್ಭಗೃಹವು ಯಾವುದೇ ರೀತಿಯ ಅಲಂಕಾರದಿಂದ ಕೂಡಿಲ್ಲ. ಸಾದಾ ರೀತಿಯಲ್ಲಿ ರಚನೆಯಾಗಿದೆ.

ಮುಖಮಂಟಪ : ಈಗ ಇದು ಬಿದ್ದು ಹೋಗಿದೆ.ಆದರೆ ಇದು ಪಶ್ಚಿಮಾಭಿಮುಖವಾಗಿತ್ತು ಎಂದು ಕಂಡು ಬರುತ್ತದೆ. ಈಗ ಎರಡು ಕಂಬಗಳು ಕಂಡು ಬರುತ್ತವೆ ಅವು ಚೌಕಾಕಾರವಾಗಿದ್ದು ಯಾವುದೇ ರೀತಿಯ ಕಂಬಗಳು ಅಲಂಕಾರವನ್ನು ಹೊಂದಿಲ್ಲ. ಈ ದೇವಾಲಯದ ಉತ್ತರ ಗೋಡೆಗೆ ದೇವತೆಯ ಶಿಲ್ಪವು ಕಂಡು ಬರುತ್ತದೆ.

೨೦. ಲಕುಲೀಶ ದೇವಾಲಯ :

ಸ್ಥಳ : ಹೊಸ ಮಹಾಕೂಟ

ರಾಜವಂಶ : ಬಾದಾಮಿ ಚಾಲುಕ್ಯರು

ದಿಕ್ಕು : ಪಶ್ಚಿಮಾಭಿಮುಖ

ತಳವಿನ್ಯಾಸ : ಗರ್ಭಗೃಹ, ಮುಖಮಂಟಪ

ಸ್ಥಿತಿ : ಮಧ್ಯಮ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ಕಾಲದ ಅರಸು ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ರಚನೆಯಾಗಿದೆ.[೨೪]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ ಇದು ಪಶ್ಚಿಮಾಭಿಮುಖವಾಗಿದ್ದು, ಇದರಲ್ಲಿ ಯಾವುದೇ ರೀತಿಯ ಅಲಂಕಾರಗಳು ಇಲ್ಲ. ಗರ್ಭಗೃಹದ ಒಳಗೆ ಪಾಣಿಪೀಠದ ಮದ್ಯದಲ್ಲಿ ಲಿಂಗವಿದೆ. ಸಾದಾ ರೀತಿಯಲ್ಲಿ ರಚನೆಯಾಗಿದೆ.

ಮುಖಮಂಟಪ : ಇದು ತೆರೆದ ಮುಖಮಂಟಪವನ್ನು ಹೊಂದಿದ್ದು ಪಶ್ಚಿಮಾಭಿಮುಖವಾಗಿದೆ. ಇದು ನಾಲ್ಕು ಕಂಬಗಳಿಂದ ಕೂಡಿದೆ. ಇವು ಯಾವುದೇ ರೀತಿಯ ಅಲಂಕಾರವನ್ನು ಹೊಂದಿಲ್ಲ. ಅವು ಚೌಕಾಕಾರವಾಗಿವೆ.

ಈ ದೇವಾಲಯದ ದಕ್ಷಿಣ ಗೋಡೆಗೆ ಲಕುಲೀಶನ ಶಿಲ್ಪ ಇದೆ. ಪೂರ್ವ ಗೋಡೆಗೆ ವಿಷ್ಣುಶಿಲ್ಪವಿದೆ.

೨೧. ವಿಶ್ವೇಶ್ವರ ದೇವಾಲಯ :

ಸ್ಥಳ : ಹೊಸ ಮಹಾಕೂಟ

ರಾಜವಂಶ : ಬಾದಾಮಿ ಚಾಲುಕ್ಯರು

ದಿಕ್ಕು : ಪೂರ್ವಾಭಿಮುಖ

ತಳವಿನ್ಯಾಸ : ಗರ್ಭಗೃಹ, ಮುಖಮಂಟಪ

ಸ್ಥಿತಿ : ಮಧ್ಯಮ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ಕಾಲದ್ದು, ಆದರೆ ಈಗ ಇದನ್ನು ಪುನರ್ ರಚನೆ ಮಾಡಿದ್ದಾರೆ.

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ ಇದು ಪೂರ್ವಾಭಿಮುಖವಾಗಿದ್ದು, ಗರ್ಭಗೃಹದ ಒಳಗೆ ಯಾವುದೇ ರೀತಿಯ ಅಲಂಕಾರವಿಲ್ಲ. ಗರ್ಭಗೃಹದ ಒಳಗೆ ಪಾಣಿಪೀಠದ ಮೇಲೆ ಲಿಂಗವಿದೆ.

ಮುಖಮಂಟಪ : ಇದು ಪೂರ್ವಾಭಿಮುಖವಾಗಿದೆ. ಆದರೆ ಈಗ ಅದರ ಆಕಾರವೆ ಬದಲಾಗಿದೆ. ಎಂದು ಕಂಡು ಬರುತ್ತದೆ. ಇದು ನಾಲ್ಕು ಕಂಬಗಳಿಂದ ಕೂಡಿತ್ತು ಎಂದು

ಕಂಡು ಬರುತ್ತದೆ. ಆದರೆ ಈಗ ಆಧುನಿಕ ಕಟ್ಟಡವನ್ನು ಕಟ್ಟಲಾಗಿದೆ.

೨೨. ಸೋಮೇಶ್ವರ ದೇವಾಲಯ :

ಸ್ಥಳ : ಹೊಸ ಮಹಾಕೂಟ
ರಾಜವಂಶ : ಬಾದಾಮಿ ಚಾಲುಕ್ಯರು
ದಿಕ್ಕು : ಪೂರ್ವಾಭಿಮುಖ
ತಳವಿನ್ಯಾಸ : ಗರ್ಭಗೃಹ,
ಸ್ಥಿತಿ : ಮಧ್ಯಮ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ಕಾಲದ್ದು, ಈ ದೇವಾಲಯದ ಸುತ್ತಲು ಕಟ್ಟಡಗಳು ನಿರ್ಮಾಣವಾಗಿದೆ.

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ ಇದು ಪೂರ್ವಾಭಿಮುಖವಾಗಿದ್ದು, ಗರ್ಭಗೃಹದ ಒಳಗೆ ಪಾಣಿಪೀಠದ ಮದ್ಯದಲ್ಲಿ ಲಿಂಗವಿದೆ. ಇದು ಯಾವುದೇ ರೀತಿಯ ಅಲಂಕಾರದಿಂದ ಕೂಡಿಲ್ಲ. ಸಾದಾ ರೀತಿಯಲ್ಲಿ ನಿರ್ಮಾಣವಾಗಿದೆ. ಈ ದೇವಾಲಯದ ಎದುರಿಗೆ ನಂದಿಮೂರ್ತಿ ಇದೆ.

೨೩. ರಾಮೇಶ್ವರಲಿಂಗ ದೇವಾಲಯ :

ಸ್ಥಳ : ಹೊಸ ಮಹಾಕೂಟ
ರಾಜವಂಶ : ಬಾದಾಮಿ ಚಾಲುಕ್ಯರು
ದಿಕ್ಕು : ಪೂರ್ವಾಭಿಮುಖ
ತಳವಿನ್ಯಾಸ : ಗರ್ಭಗೃಹ,
ಸ್ಥಿತಿ : ಮಧ್ಯಮ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ. ಕಾಲದಲ್ಲಿ ನಿರ್ಮಾಣವಾಗಿದೆ.

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ ಇದು ಪೂರ್ವಾಭಿಮುಖವಾಗಿದ್ದು, ಗರ್ಭಗೃಹದ ಒಳಗೆ ಪಾಣಿಪೀಠವು ಭೂಮಿಯ ಮಟ್ಟದಲ್ಲಿದ್ದು ಮದ್ಯದಲ್ಲಿ ವೃತ್ತಾಕಾರವಾದ ಲಿಂಗಪೀಠವಿದೆ. ಇದು ಯಾವುದೇ ರೀತಿಯ ಅಲಂಕಾರದಿಂದ ಕೂಡಿಲ್ಲ.

ಈ ದೇವಾಲಯದ ಎದುರು ನಂದಿಮಂಟಪವಿದೆ. ಅದು ನಾಲ್ಕು ಕಂಬಗಳಿಂದ ಕೂಡಿದೆ. ಕಂಬಗಳು ಚೌಕಾಕಾರವಿದ್ದು ಅವು ಯಾವುದೇ ರೀತಿಯ ಅಲಂಕೃತಗೊಂಡಿಲ್ಲ. ಸಾದಾ ರೀತಿಯಲ್ಲಿ ರಚನೆಯಾಗಿದೆ.

೨೪. ಸರಸ್ವತಿ ದೇವಾಲಯ :

ಸ್ಥಳ : ಹೊಸ ಮಹಾಕೂಟ
ರಾಜವಂಶ : ಕಲ್ಯಾಣಿ ಚಾಲುಕ್ಯರು
ದಿಕ್ಕು : ಪಶ್ಚಿಮಾಭಿಮುಖ

ತಳವಿನ್ಯಾಸ : ಗರ್ಭಗೃಹ,

ಸ್ಥಿತಿ : ಮಧ್ಯಮ

ಈ ದೇವಾಲಯವು ಕಲ್ಯಾಣಿ ಚಾಲುಕ್ಯರ ಕಾಲದ್ದು, ಎಂದು ತಿಳಿದು ಬರುತ್ತದೆ.[೨೫]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ ಇದು ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹದಲ್ಲಿ ಸರಸ್ವತಿಮೂರ್ತಿ ಶಿಲ್ಪವಿದೆ. ಇದು ಕಲ್ಯಾಣಿ ಚಾಲುಕ್ಯರ ಕಾಲದ್ದು, ಎಂದು ನಮಗೆ ತಿಳಿದು ಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಎಲ್ಲೂ ಸರಸ್ವತಿಯ ಶಿಲ್ಪವು ಕಂಡು ಬರುವುದಿಲ್ಲ.

೨೫. ಗೌರವಮ್ಮನ ದೇವಾಲಯ :

ಸ್ಥಳ : ಹೊಸ ಮಹಾಕೂಟ

ರಾಜವಂಶ : ಬಾದಾಮಿ ಚಾಲುಕ್ಯರು

ದಿಕ್ಕು : ಪಶ್ಚಮಾಭಿಮುಖ

ತಳವಿನ್ಯಾಸ : ಗರ್ಭಗೃಹ

ಸ್ಥಿತಿ : ಮಧ್ಯಮ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ಕಾಲದ್ದು, ಎಂದು ನಮಗೆ ತಿಳಿದು ಬರುತ್ತದೆ.

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ. ಇದು ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹದಲ್ಲಿ ಗೌರಮ್ಮನ ಮೂರ್ತಿಶಿಲ್ಪವಿದೆ. ಆ ಮೂರ್ತಿಶಿಲ್ಪದ ಎಡಬಾಗದ ಮೇಲೆ ಉಬ್ಬುಶಿಲ್ಪವಿದೆ. ಎಡಗೋಡೆಯ ಮತ್ತು ಬಲಗೋಡೆಯ ಒಳಬಾಗದಲ್ಲಿ ಶಿಲ್ಪಗಳು ಕಂಡು ಬರುತ್ತವೆ. ಈ ಗರ್ಭಗೃಹದಲ್ಲಿಯ ಗೌರಮ್ಮನ ಮೂರ್ತಿಯು ಇತ್ತೀಚಿನದ್ದು ಎಂದು ಕಂಡು ಬರುತ್ತದೆ. ಈ ಸ್ಥಳದಲ್ಲಿ ಲಜ್ಜಾಗೌರಿಯ ಮೂರ್ತಿಶಿಲ್ಪವಿತ್ತು ಎಂದು ತಿಳಿದು ಬರುತ್ತದೆ.

೨೬. ಬಾಣಂತಿ ದೇವಾಲಯ :

ಸ್ಥಳ : ಹೊಸ ಮಹಾಕೂಟ

ರಾಜವಂಶ : ಬಾದಾಮಿ ಚಾಲುಕ್ಯರು

ದಿಕ್ಕು : ಪಶ್ಚಿಮಾಭಿಮುಖ

ತಳವಿನ್ಯಾಸ : ಗರ್ಭಗೃಹ, ಮುಖಮಂಟಪ

ಸ್ಥಿತಿ : ಉತ್ತಮ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ಅರಸು ಮೊದಲನೆಯ ಪುಲಕೇಶಿಯ ಕಾಲದ್ದು, ಎಂದು ತಿಳಿದು ಬರುತ್ತದೆ.[೨೬]

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ. ಇದು ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹದ ಒಳಗೆ ಪಾಣಿಪೀಠದ ಮಧ್ಯದಲ್ಲಿ ಲಿಂಗವಿದೆ. ಈಗ ಅದನ್ನು ಕಿತ್ತಲಾಗಿದೆ. ಇದು ಯಾವುದೇ ರೀತಿಯ ಅಲಂಕಾರದಿಂದ ಕೂಡಿಲ್ಲ. ಸಾದಾ ರೀತಿಯಲ್ಲಿ ನಿರ್ಮಾಣವಾಗಿದೆ.

ಮುಖಮಂಟಪ : ಇದು ತೆರೆದ ಮುಖಮಂಟಪವನ್ನು ಹೊಂದಿದೆ. ಇದು ಪಶ್ಚಿಮಾಭಿಮುಖವಾಗಿದೆ. ಇದು ನಾಲ್ಕು ಕಂಬಗಳು ಇವೆ. ಕಂಬಗಳು ಚೌಕಾಕಾರವಾಗಿದ್ದವು ಇವು ಅಲಂಕೃತಗೊಂಡಿಲ್ಲ ಸಾದಾ ರೀತಿಯಲ್ಲಿವೆ.

೨೭. ಹಿರೇಮಹಾಕೂಟೇಶ್ವರ ದೇವಾಲಯ :

ಸ್ಥಳ	: ಹೊಸ ಮಹಾಕೂಟದ ಪಶ್ಚಿಮ ದಿಕ್ಕಿನ ಗುಡ್ಡದಲ್ಲಿದೆ.
ರಾಜವಂಶ	: ಬಾದಾಮಿ ಚಾಲುಕ್ಯರು
ದಿಕ್ಕು	: ಪೂರ್ವಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಮುಖಮಂಟಪ
ಸ್ಥಿತಿ	: ಕನಿಷ್ಠ

ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ಕಾಲದ್ದು, ಎಂದು ತಿಳಿದು ಬರುತ್ತದೆ. ಇದು ಕಲ್ಲುಬಂಡೆಗಳ ಕೆಳ ಭಾಗದಲ್ಲಿದೆ.

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದೆ ಇದು ಪೂರ್ವಾಭಿಮುಖವಾಗಿದ್ದು, ಗರ್ಭಗೃಹದ ಒಳಗೆ ನಾಲ್ಕು ಕಂಬಗಳಿದ್ದು ಚೌಕಾಕಾರದಲ್ಲಿವೆ. ಇವು ಯಾವುದೇ ರೀತಿಯ ಅಲಂಕಾರದಿಂದ ಕೂಡಿಲ್ಲ. ಇವುಗಳು ಪ್ರತಿಯೊಂದು ಮೂಲೆಗೊಂದರಂತೆ ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಪಾಣಿಪೀಠವಿದ್ದು ಅದರ ಮಧ್ಯದಲ್ಲಿ ಲಿಂಗವಿದೆ. ಈ ಗರ್ಭಗೃಹದಲ್ಲಿ ಇತ್ತೀಚೆಗೆ ಒಂದು ಕಂಬದ ಬದಿಯಲ್ಲಿ ಮೂರ್ತಿಶಿಲ್ಪವನು ಇಟ್ಟಿದ್ದಾರೆ. ಅದು ಒಡೆದ ಭಾಗವಿದ್ದು ಅದು ಮಹಿಸಾಷುರಮರ್ದಿನಿ ಶಿಲ್ಪ ಎಂದು ತಿಳಿದು ಬರುತ್ತದೆ.

ಮುಖಮಂಟಪ : ಇದು ಈಗ ಬಿದ್ದು ಹೋಗಿದೆ. ಅದರ ಅವಶೇಷಗಳಿಂದ ಇದು ನಾಲ್ಕು ಕಂಬಗಳನ್ನು ಹೊಂದಿತ್ತು ಕಂಬಗಳು ಸ್ವಲ್ಪ ಮಟ್ಟಿಗೆ ಅಲಂಕೃತಗೊಂಡಿವೆ. ಇದು ಪೂರ್ವಾಭಿಮುಖವಾಗಿವೆ.

೨೮. ಕೋಣೆ ಶಂಕರ ದೇವಾಲಯ

ಸ್ಥಳ	: ಹೊಸ ಮಹಾಕೂಟದ ವಿಷ್ಣುಪುಷ್ಕರಣಿಯ ವಾಯುವ್ಯ ದಿಕ್ಕಿನಲ್ಲಿದೆ.
ರಾಜವಂಶ	: ಬಾದಾಮಿ ಚಾಲುಕ್ಯರು
ದಿಕ್ಕು	: ಪೂರ್ವಾಭಿಮುಖ
ತಳವಿನ್ಯಾಸ	: ಗರ್ಭಗೃಹ, ಮುಖಮಂಟಪ

ಸ್ಥಿತಿ : ಉತ್ತಮ

ಈ ದೇವಾಲಯವು ಗುಹಾಂತರ ದೇವಾಲಯವಾಗಿದೆ. ಇದು ಬಾದಾಮಿ ಚಾಲುಕ್ಯರ ಕಾಲದ ದೇವಾಲಯವಾಗಿದೆ. ಈ ಗುಹೆಯಲ್ಲಿ ಶಿವನು ತಪಸ್ಸು ಮಾಡಿ ಮನಶಾಂತಿಯನ್ನು ಪಡೆದನೆಂಬ ನಂಬಿಕೆ ಇದೆ.[೨೭] ಇದನ್ನು ಕೋಣೆ ಶಂಕರ ದೇವಾಲಯ ಎಂದು ಕರೆಯುತ್ತಾರೆ. ಗರ್ಭಗೃಹ ಹಾಗೂ ಮುಖಮಂಟಪ ಹೊಂದಿರುವ ಈ ದೇವಾಲಯದ ದರ್ಶನ ಪಡೆಯಬೇಕಾದರೆ ನೀರಿನಲ್ಲಿ ಮುಳುಗಿ ಈಜಿಕೊಂಡು ಹೋಗಬೇಕಾಗುತ್ತದೆ. ಗರ್ಭಗೃಹದಲ್ಲಿ ಲಿಂಗವಿದೆ. ಮುಖಮಂಟಪವಿರುವ ಚಿಕ್ಕ ದೇವಾಲಯದಲ್ಲಿ ಜಲಾಂತರ್ಗತಲಿಂಗ ಕಾಣಿಸುವುದು. ಇದೇ ಶಂಕರಲಿಂಗ ಐದು ಬೊಗಸೆ ನೀರೆರದರೆ ಪಾಪ ವಿಮೋಚನೆಯಾಗಿ ಇಷ್ಟ ಸುಖ ಸೌಭಾಗ್ಯ ಪಡೆಯಬಹುದೆಂಬ ನಂಬಿಕೆ ಭಕ್ತಾದಿಗಳಲ್ಲಿದೆ. ವಿಕಲ್ಪ ಜಾಲವನು ಛೇದಿಸಿ ತ್ರಿಕೂಟ ಸ್ಥಾನದಲ್ಲಿ ದೃಢವಾದ ಬಂಧನಮಂ ಮಾಡಿ ತ್ರಿಕೋನ ಸ್ಥಾನದಲ್ಲಿ ಮನ ಪ್ರಾಣಂಗಳೊಡನೆ ಕೂಡೆದ್ದು ನಾಸಿಕಾಗ್ರದಲ್ಲಿಯ ನಾದ ಬ್ರಹ್ಮಾತ್ಮಕಮಪ್ಪ ಸೂಕ್ಷ್ಮಕುಂಡಲಿಯನ್ನು ಬೇದಿಸಿ ಸುಷುಮ್ನಾ ಸ್ಥಾನದೊಳೆಲೆ ಶಿಷ್ಯನೆ ಆನಂದ ಸ್ವರೂಪನಾಗಿದ್ದನು. ಎಂದು ಪಾರಮಾರ್ಥ ಪ್ರಕಾಶಿಕೆಯಲ್ಲಿ ಗುರುವಿನ ಬೋಧ ಪ್ರಕಾರವನ್ನು ಹೇಳಿರುವುದು ಮಹಾಕೂಟದಲ್ಲಿರುವ ಕೋಣೆ ಶಂಕರನನ್ನು ಸಂಕೇತಿಸುವಂತಿದೆ.

೨೯. ಚತುರ್ಮುಖಲಿಂಗ ಮಂಟಪ :

ಸ್ಥಳ : ಹೊಸ ಮಹಾಕೂಟದ ವಿಷ್ಣುಪುಷ್ಕರಣಿಯಲ್ಲಿದೆ.

ರಾಜವಂಶ : ಬಾದಾಮಿ ಚಾಲುಕ್ಯರು

ಸ್ಥಿತಿ : ಉತ್ತಮ

ಈ ಮಂಟಪವು ಬಾದಾಮಿ ಚಾಲುಕ್ಯರ ಅರಸು ಮೊದಲನೆಯ ಪುಲಿಕೇಶಿ ಕಟ್ಟಿಸಿದುದು ಎಂದು ಮಹಾಕೂಟ ಸ್ತಂಭಶಾಸನದಲ್ಲಿ ಸೂಚಿತವಾಗಿದೆ.[೨೮] ಇದು ವಿಷ್ಣುಪುಷ್ಕರಣಿಯಲ್ಲಿ ಚೌಕಾಕಾರದ ಮಂಟಪವಾಗಿದೆ. ಮಂಟಪದೊಳಗೆ ಮುಖವಿರುವ ಶಿವಲಿಂಗವಿದೆ. ಲಿಂಗದ ನಾಲ್ಕು ಬದಿಯುಲ್ಲೂ ಸುಂದರ ಕೆತ್ತನೆಯು ಶಿವನ ಮುಖವಿರುವುದರಿಂದ ಇದು "ಚತುರ್ಮುಖ ಲಿಂಗ" ಎಂದೇ ಪ್ರಸಿದ್ದವಾಗಿದೆ. ಇದೊಂದು ಅಪರೂಪದ ಶಿವಲಿಂಗವಾಗಿದೆ. ಈ ಮಂಟಪವು ನಾಲ್ಕು ಕಂಬಗಳಿಂದ ಕೂಡಿದೆ. ಅದರಲ್ಲಿ ಶಾಸನಗಳು ಇವೆ. ಮಂಟಪದ ಕಂಬದ ಪೂರ್ವಾಭಿಮುಖದಲ್ಲಿ "ಶ್ರೀವ್ಯಾಳಸಿಂಹ ಗುರುವ"[೨೯] ಎಂಬುದು ಹೆಸರಿಸುತ್ತದೆ. ಉತ್ತರಮುಖದಲ್ಲಿ "ಪಪ್ಪಬ್ಬೆತಲಭೆ ಮಾಡಿಸಿದ"[೩೦] ಎಂದು ಹೇಳಿದೆ. ಪಶ್ಚಿಮುಖದಲ್ಲಿ "ಶ್ರೀಕ ಇಸಾನಸಿವ"[೩೧] ಸಾನವನ್ನು ಹೆಸರಿಸುತ್ತದೆ.

೪.೧೨. ವೈಷ್ಣವ ದೇವಾಲಯಗಳು :

ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಹಲ್ಮಿಡಿಶಾಸನವು (ಕ್ರಿ.ಶ.೪೫೦) ವಿಷ್ಣುವಿನ

ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಮೃಗೇಶವರ್ಮನ ಬನವಾಸಿ ಶಾಸನದಲ್ಲಿ ವರಾಹವನ್ನು, ಇಮ್ಮಡಿ ಕೃಷ್ಣವರ್ಮನ ಬನಹಳ್ಳಿ ಶಾಸನದಲ್ಲಿ ನರಸಿಂಹನನ್ನು ಪ್ರಾರ್ಥಿಸುವ ಮಂಗಲ ಶ್ಲೋಕವಿದೆ. ವಿಷ್ಣುವಿನ ಸ್ತುತಿ ಇದೆ. ವರಾಹ ಅವರ ಲಾಂಛನವಾಗಿತ್ತು. ಪರಮ ಭಾಗವತ, ಶ್ರೀಪೃಥ್ವಿವಲ್ಲಭ, ಶ್ರೀವಲ್ಲಭ ಎಂಬ ಉಪಾದಿಗಳು ಚಾಲುಕ್ಯರ ಪ್ರಾರಂಭದ ಅರಸರ ಶಾಸನಗಳಲ್ಲಿ ಉಪನಾಮಗಳಾಗಿಯೆ ಕಾಣಿಸಿಕೊಳ್ಳುತ್ತವೆ. ಆದ್ದರಿಂದ ಚಾಲುಕ್ಯವಂಶದ ಪ್ರಾರಂಭದ ಅರಸರು ವೈಷ್ಣವರಾಗಿದ್ದರೆಂಬುದು ನಿಸ್ಸಂಶಯ. ಕದಂಬರಂತೆ ಚಾಲುಕ್ಯರು ವೈದಿಕ ಆಚರಣೆಗಳನ್ನು ರೂಢಿಸಿಕೊಂಡಿದ್ದರು. ಮಹಾಕೂಟ ಸ್ತಂಭಶಾಸನದಲ್ಲಿ ಮೊದಲನೆಯ ಪುಲಿಕೇಶಿಯು ಅಗ್ನಿಷ್ಟೋಮ, ಅಗ್ನಿಚಯನ, ವಾಜಪೇಯ, ಬಹುಸುವರ್ಣ, ಪೌಂಡರಿಕ ಯಜ್ಞಗಳನ್ನು ಮಾಡಿದುದನ್ನು ಹೇಳಲಾಗಿದೆ.[೨] ಹೀಗಾಗಿ ಕ್ರಿ.ಪೂ. ಸುಮಾರು ೪ನೇ ಶತಮಾನದ ನಗರೀಶಾಸನ, ರಾಜ್ಯಸ್ಥಾನದ ಗೌಸುಂದಿಯ ಕ್ರಿ.ಶ. ೧ನೆಯ ಶತಮಾನದ ನಾರಾಯಣ ವಾಟಿಕ, ತಿಗುವಾದ ವಿಷ್ಣು ದೇವಾಲಯ ಇವು ಈ ಧರ್ಮದ ದೇವಾಲಯಗಳ ಪರಂಪರೆಗೆ ಸಂಬಂಧಿಸಿದಂತೆ ಅತೀ ಪ್ರಾಚೀನ ನಿದರ್ಶನಗಳಾಗಿವೆ. ಕನ್ನಡ ನಾಡಿನ ಸಂದರ್ಭದಲ್ಲಿ ಶಾತವಾಹನರು ಮತ್ತು ಸಮಕಾಲೀನ ಮನೆತನಗಳು ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಮತ್ತು ಕಲಚೂರಿಗಳು, ದೊರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು ಈ ಧರ್ಮದ ಆಚಾರ್ಯರಿಗೆ ಆಶ್ರಯ–ಪ್ರೋತ್ಸಾಹ ನೀಡುವುದರೊಂದಿಗೆ ಧಾರ್ಮಿಕ ನಿರ್ಮಾಣಗಳ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿವೆ. ಮಹಾಕೂಟದಲ್ಲಿ ಆಳ್ವಿಕೆ ಮಾಡಿದ ಬಾದಾಮಿ ಚಾಲುಕ್ಯರು ಮತ್ತು ಅವರ ಪೂರ್ವಿಕರಿಂದ ನಿರ್ಮಾಣವಾದ ವೈಷ್ಣವ ಧರ್ಮದ ದೇವಾಲಯದ ಕುರುಹುಗಳು ಕಂಡು ಬರುತ್ತವೆ.

೧. ಮಹಾಕೂಟವು ಶೈವಕೇಂದ್ರವಾಗಿದ್ದರೂ ಆ ಕ್ಷೇತ್ರದ ಕೇಂದ್ರಬಿಂದು "ವಿಷ್ಣು ಪುಷ್ಕರಣಿ" ಆಗಿದೆ. ಈ ಹೊಂಡದ ಪಶ್ಚಿಮಕ್ಕೆ ಅದರ ಅಕ್ಷಗರ್ಭ ಸೂತ್ರಕ್ಕಿರುವ ಮಹಾಲಿಂಗ ದೇವಾಲಯ ಹೊರಗೋಡೆಯ ಮೇಲೆ ವರಾಹ, ಉಗ್ರನರಸಿಂಹರ ಮಧ್ಯಮ ಗಾತ್ರದ ಶಿಲ್ಪಗಳಿವೆ. ಶ್ರೀಮಹಾಕೂಟೇಶ್ವರ ಪುರಾಣವು ಸಿಂಹಾಸುರರನ್ನು ಸಂಹರಿಸಲು ಶಿವನು ವಿಷ್ಣು ರೂಪದಿಂದ ಬಂದ ಆತನನ್ನು ಮಹಾಕೂಟದಲ್ಲಿ ಸುದರ್ಶನ ಚಕ್ರದಿಂದ ಕೊಂದನೆಂದು ಬಣ್ಣಿಸುತ್ತದೆ. ಈ ಉಪಕಥೆಯ ಬಣ್ಣನೆಯ ನಂತರ ಸ್ಥಳಪುರಾಣವು ಮಹಾಕೂಟ ಕ್ಷೇತ್ರವನ್ನು ನರಸಿಂಹ ಕ್ಷೇತ್ರವೆಂದು ಕರೆದಿದೆ. ಪುರಾಣದ ಕಥೆಯನ್ನು ಬದಿಗಿರಿಸಿದರೂ ಆದಿ ಕದಂಬರ ದ್ವಿಭುಜ ನರಸಿಂಹ ಶಿಲ್ಪದ ಹಿನ್ನೆಲೆಯಲ್ಲಿ ಗಮನಿಸಿದಾಗ ಮಹಾಕೂಟದಲ್ಲಿ ಚಾಲುಕ್ಯಪೂರ್ವ ಕಾಲದಲ್ಲಿ ನರಸಿಂಹ ಮಂದಿರವೊಂದು ಇದ್ದಿರಬೇಕೆಂದು ತರ್ಕಿಸಲು ಅವಕಾಶವಿದೆ. ಬಾಣಂತಿ ದೇವಾಲಯ ಹತ್ತಿರವಿರುವ ಇಟ್ಟಿಗೆಯ ಕಟ್ಟಡಗಳ ಅವಶೇಷಗಳು ಇಂತಹ

[illegible]

ಮಂದಿರದ್ದಾಗಿರಬಹುದೆ?[೩೩] ಎಂದು ವಿದ್ವಾಂಸರು ತರ್ಕಿಸಿದ್ದಾರೆ.

೨. ವಿಷ್ಣು ಪುಷ್ಕರಣಿ :

ಸ್ಥಳ : ಹೊಸ ಮಹಾಕೂಟ

ರಾಜವಂಶ : ಬಾದಾಮಿ ಚಾಲುಕ್ಯರು

ಸ್ಥಿತಿ : ಉತ್ತಮ

ಈ ಪುಷ್ಕರಣಿಯನ್ನು ಬದಾಮಿ ಚಾಲುಕ್ಯರ ಅರಸು ಮೊದಲನೆಯ ಪುಲಿಕೇಶಿಯ ಕಾಲದ್ದು ಎಂದು ತಿಳಿದು ಬರುತ್ತದೆ.[೩೪] ವಿಷ್ಣು ಪುಷ್ಕರಣಿ ಈ ಹೊಂಡದ ಮಹತ್ವವನ್ನು ಮಹಾಕೂಟ ಮಹಾತ್ಮೆಯ ವಿಶದವಾಗಿ ವರ್ಣಿಸುತ್ತದೆ. ಇದನ್ನು ಅಗಸ್ತ್ಯಮುನಿಗಳು ನಿರ್ಮಿಸಿದ್ದಾರೆಂದು[೩೫] ಹೇಳುತ್ತಾರೆ. ವೈಶಾಖ ಮಾಸದ ಲಲಿತಾಪೌರ್ಣಿಮೆ (ಅಂದರೆ ಆಗಿ ಹುಣ್ಣಿಮೆ) ದಿವಸ ಇದರಲ್ಲಿ ಸ್ನಾನ ಮಾಡಿದರೆ ಕಾಶಿಯಲ್ಲಿ ಸುಧೀರ್ಘ ಕಾಲ ತಪಸ್ಸು ಮಾಡಿದ ಫಲ ಬರುವುದೆಂದು ಮಹಾಕೂಟೇಶ್ವರ ಸ್ಥಳಪುರಾಣದಲ್ಲಿ ಬಂದಿದೆ. ಈ ಪುಷ್ಕರಣಿಯ ಪಾವಿತ್ರ್ಯವನ್ನು ಸೂಚಿಸುವ ಕಥೆಗಳೂ ಇವೆ. ಅದರಲ್ಲಿ ಕಾಶಿಯ ರಾಜನದೂ ಒಂದು ಹಿಂದಕ್ಕೆ ಕಾಶಿಯಲ್ಲಿ ದಿವೋದಾಸನೆಂಬ ಒಬ್ಬ ಅರಸನಿದ್ದನು. ಅವನಿಗೆ ದಿವ್ಯಾದೇವಿ ಎಂಬ ಒಬ್ಬ ಮಗಳಿದ್ದಳು. ಅವಳ ಮುಖ ಮಂಗನ ಮುಖದಂತೆ ಮತ್ತು ಉಳಿದ ದೇಹಸ್ತ್ರೀ ದೇಹದಂತೆ ಇತ್ತು. ಇದು ಹೀಗೆ ಏಕಾಗಿದೆ ಇದರ ನಿವಾರಣೋಪಾಯ ಏನಾದರೂ ಇದೆಯೇ? ಎಂದು ಚಾತುಕರ್ಣ್ಯ ಎಂಬ ಪಂಡಿತನನ್ನು ಅವನು ಕೇಳದನು. ಅದಕ್ಕೆ ಚಾತಕರ್ಣ್ಯನು ನಿನ್ನ ಮಗಳು ಹಿಂದಿನ ಜನ್ಮದಲ್ಲಿ ಪಾಪಕರ್ಮಮಾಡಿದ್ದರ ಫಲವಾಗಿ ಮಹಾಕೂಟದಲ್ಲಿ ಮಂಗವಾಗಿ ಹುಟ್ಟಿದಳು ಆದರೆ ಅವಳು ಸತ್ತಾಗ ಅವಳ ದೇಹ ಮಾತ್ರ ವಿಷ್ಣು ಪುಷ್ಕರಣಿಯಲ್ಲಿ ಬಿದ್ದು ಮುಖವು ಬೀಳದೆ ಆ ಪುಷ್ಕರಣಿಯ ಮೇಲಿರುವ ಔದುಂಬರ ಮರದಲ್ಲಿ ಸಿಕ್ಕಿಕೊಂಡಿದೆ. ಆ ಮುಖವನ್ನು ನೀನು ಆ ಪುಷ್ಕರಣಿಯಲ್ಲಿ ಕೆಡವಿಸಿದರೆ ನಿನ್ನ ಮಗಳಿಗೆ ಸ್ತ್ರೀಯ ಮುಖ ಬರುವುದು ಎಂದು ಹೇಳಿದನು. ಮುಂದೆ ಅದೇ ಪ್ರಕಾರ ಕಾಶಿಯ ರಾಜನ ಮಾಡಲು ಅವನ ಮಗಳಿಗೆ ಮನುಷ್ಯರ ಸ್ವಾಭಾವಿಕ ಮುಖ ಬಂದಿತೆಂದು ಹೇಳಿದೆ. ಕೈ ಮುಗಿದು ಕುಳಿತ ಕಾಶಿಯ ರಾಜನ ಮೂರ್ತಿಯನ್ನು ಮಹಾಕೂಟದಲ್ಲಿ ಈಗಲೂ ತೋರಿಸುತ್ತಾರೆ.

ಮಹಾಕೂಟದಲ್ಲಿದ್ದ ಸಿಂಹಾಸುರನ ವಧೆಗಾಗಿ ಶಿವನು ವಿಷ್ಣುರೂಪದಿಂದ ಬಂದು ಸಿಂಹಾಸುರನ ವಧೆಯಾದ ಮೇಲೆ ವಿಷ್ಣುರೂಪದಲ್ಲಿದ್ದ ಶಿವನು ಈ ಹೊಂಡದಲ್ಲಿ ಅದೃಶ್ಯನಾದನೆಂದು ಪುರಾಣಗಳು ಹೇಳುತ್ತವೆ. ಅಂದಿನಿಂದ ಈ ಪುಷ್ಕರಣಿ ಶಿವನೇ ವಿಷ್ಣು ರೂಪದಲ್ಲಿ ಬಂದುದರ ದ್ಯೋತಕವಾಗಿ ವಿಷ್ಣುಪುಷ್ಕರಣಿತೀರ್ಥವೆಂತಲೂ ವಿಷ್ಣು ರೂಪದಲ್ಲಿದ್ದವನು ಶಿವನೇ ಇದ್ದುದರ ಕುರುಹಿಗಾಗಿ ಶಿವಪುಷ್ಕರಣಿ ತೀರ್ಥವೆಂತಲೂ

ಹೆಸರು ಬಂದಿರಬೇಕು. ಎನೇ ಇರಲಿ ಇದು ಶಿವ–ವಿಷ್ಣುಗಳ ಅಭೇದತ್ವದ ಪ್ರತೀಕವಾದ ಮಹತ್ವ ತೀರ್ಥವಾಗಿದೆ.

"ಏಕೋಂ ದೇವಪ್ಪರಮಶಿವ।

ಪಂಚಭೂತಾತ್ ಪ್ರತಿನಿಧಿತ॥

ಚ ಸರ್ವಭೂತಾರಂರಾತ್ಮಕ। ಏವ। ಸಕಲ ಜೀವಿಗಳಿಗೆ ಚೈತನ್ಯ ಸಾಕ್ಷಿಯಾಗಿರುವ ಪಂಚಭೂತಗಳ ಒಬ್ಬುಳಿಯಂತಿರುವ ಚತುರ್ಮುಖ ಲಿಂಗವು ಸುಂದರ ಶಿಲಾಮಂಟಪದಲ್ಲಿ ಇದು ಆ ಲಿಂಗಕ್ಕೆ ಜಲಾಭಿಷೇಕವನ್ನು ಮಾಡಿ ಸ್ನಾನಗೈದರೆ ಪಾಪನಾಶವಾಗಿ ಕೋಟಿ ಲಿಂಗಗಳನ್ನು ಪೂಜಿಸಿದ ಫಲವು ಲಭಿಸುವುದು.[೩೬] ಎಂದು ಅಲ್ಲಿ ಜನರ ನಂಬಿಕೆಯಾಗಿದೆ. ಇದರ ಪೂರ್ವಕ್ಕಿರುವ ಕೊಂಡಿಯಿಂದ ಸತತವಾಗಿ ನೀರು ಹರಿಯುತ್ತಿದ್ದರೂ ನೀರಿನ ಪ್ರಮಾಣ ಮಾತ್ರ ಎಷ್ಟೂ ಕಡಿಮೆಯಾಗುವುದಿಲ್ಲ. ಇದು ಸುತ್ತಮುತ್ತಲಿನ ತೋಟ ಪಟ್ಟಿಗಳ ಹಸಿರಿಗೆ ಉಸಿರಾಗಿದೆ. ಇದರಲ್ಲಿ ಹನ್ನೆರಡು ತಿಂಗಳೂ ಒಂದೇ ಪ್ರಮಾಣದಲ್ಲಿ ನೀರು ಇರುವುದು ಒಂದು ವೈಶಿಷ್ಟ್ಯವಾಗಿದೆ.

೪.೨ ಶಿಲ್ಪಗಳು :

ಭಾರತೀಯ ಕಲೆಯ ಯಾವ ಪ್ರಕಾರಕ್ಕೂ ಆದ್ಯಾತ್ಮ ಅಥವಾ ಧರ್ಮವೇ ಕೇಂದ್ರಬಿಂದು. ಶಿಲ್ಪಕಲೆಗೂ ಅಷ್ಟೇ ನಿರಾಕಾರನಾದ ದೇವನಿಗೆ ಒಂದು ರೂಪವನ್ನು ಕಲ್ಪಿಸಿ ಅದನ್ನು ಪೂಜೆ ಮಾಡತೊಡಗಲು ಶಿಲ್ಪಕಲೆಗೆ ದಾರಿಯಾಯಿತು[೩೭] ಸಾಹಿತ್ಯದಲ್ಲಿ ವ್ಯಕ್ತವಾದ ಶ್ರೀಕೃಷ್ಣನ ಬೋಧನೆಗಿಂತ ಕೃಷ್ಣಕಲೀಲೆಗಳು ಶಿಲ್ಪದಲ್ಲಿ ಕಾಣಿಸಿಕೊಳ್ಳುವುದರ ಮೂಲಕ ಜನಸಾಮಾನ್ಯರು ಧರ್ಮ ಪ್ರೇರಿತರಾದರು. ಧರ್ಮಪ್ರಜ್ಞೆ ಬೆಳೆಸಲು ಶಿಲ್ಪವು ಸಶಕ್ತ ಮಾಧ್ಯಮವಾಯಿತು.[೩೮] ಪ್ರಪಂಚದ ಪ್ರಧಾನಶಿಲ್ಪ ಮಾರ್ಗಗಳ ಬೆಳವಣಿಗೆಯನ್ನು ಪ್ರತ್ಯೇಕವಾದ ಮೂಲತತ್ವ ಮತ್ತು ಗುರಿ ಇರುವಂತೆ ತೋರುತ್ತದೆ. ಭಾರತೀಯ ಶಿಲ್ಪದ ಪ್ರಧಾನತತ್ವ ಆಧ್ಯಾತ್ಮಿಕ ಸಾಧನೆಯಾಗಿದೆ. ಹೀಗಾಗಿ ಇಲ್ಲಿಯ ಎಲ್ಲ ಶಿಲ್ಪಗಳು ಸಮಕಾಲೀನ ಧಾರ್ಮಿಕ ಮನೋಭಾವನೆಯನ್ನು ಪ್ರತಿಬಿಂಬಿಸುತ್ತದೆ.

ಪ್ರಪಂಚದಲ್ಲಿಯೇ ಭಾರತೀಯ ಶಿಲ್ಪಕಲೆಯ ಪ್ರಾರಂಭವು ಪ್ರಾಚೀನತವೆಂದು ತೋರುತ್ತದೆ. ಶಿಲಾಯುಗದ ಮಾನವನು ಪ್ರಕೃತಿಯಲ್ಲಾಗುವ ಬರವಣಿಗೆಗಳ ಹಿಂದೆ ಯಾವುದೋ ಒಂದು ಅಗೋಚರವಾದ ಶಕ್ತಿಯಿದೆ. ಎಂದು ನಂಬಿ ಅವುಗಳಿಗೆ ಸಂಕೇತ, ಮೂರ್ತಿ ಮನುಷ್ಯಾಕಾರದ ರೂಪಗಳನ್ನು ಕೊಟ್ಟು ಪೂಜಿಸತೊಡಗಿದನು. ಸಿಂಧೂ ನಾಗರಿಕತೆಯ ನೆಲೆಗಳ ಉತ್ಖನನಗಳಲ್ಲಿ ದೊರೆತ ಕೆಲವು ಶಿಲ್ಪಾವಶೇಷಗಳು ಬಹು ಉನ್ನತಮಟ್ಟದ ಶಿಲ್ಪ ಜ್ಞಾನವನ್ನು ಪರಿಚಯಿಸಿವೆ.

ವೈದಿಕ ಸಂಸ್ಕೃತಿಯಲ್ಲಿ ಸಾರ್ವಜನಿಕವಾಗಿ ಶಿಲ್ಪಗಳ ಆರಾಧನೆ ಪ್ರಚಲಿತದಲ್ಲಿರಲಿಲ್ಲ. ಕಾಲಾಂತರದಲ್ಲಿ ಆರ್ಯರು ದ್ರಾವಿಡರ ದೈವಗಳನ್ನು ಪರಿಗ್ರಹಿಸಿ ಅವಕ್ಕೆಲ್ಲ ಒಂದೊಂದು ರೂಪವನ್ನು ವಹಿಸಿಕೊಟ್ಟರು. ಭಾರತದ ಚಾರಿತ್ರಿಕ ಯುಗದಲ್ಲಿ ಪ್ರಪ್ರಥಮ ಶಿಲ್ಪವು ಮೌರ್ಯರ ಕಾಲದ್ದಾಗಿದೆ. ಶುಂಗ ಮನೆತನದ ಕಾಲದ ಶಿಲ್ಪಿ ರಚನೆಯು ಪ್ರಾಚೀನ ಶೈಲಿಯನ್ನು ಕಳೆದುಕೊಂಡು ಸಮರ್ಥರೂಪವನ್ನು ಪಡೆದುಕೊಂಡಿತು. ಕುಶಾನ ಮನೆತನದ ಆಶ್ರಯದಲ್ಲಿ ಗಾಂಧಾರ ಕಲೆಯು ಸಮಕಾಲೀನ ಗ್ರೀಕ್ ಮತ್ತು ಬೌದ್ಧ ಕಲೆಗಳ ಮಿಶ್ರಣವನ್ನು ಪಡೆಯಿತು. ಗುಪ್ತ ಮನೆತನದ ಕಾಲದಲ್ಲಿ ಹಲವು ಶಿಲ್ಪ ಶೈಲಿಗಳ ಸಂಗಮಿಸಿ ದೃಢವಾದ ಭಾರತೀಯ ಶಿಲ್ಪದ ಅಭಿವ್ಯಕ್ತಿಯು ಸಾದ್ಯವಯಿತು. ಈ ಕಾಲದ ಶಿಲ್ಪಗಳ ಅಂಗೋಪಾಂಗಗಳ ಪ್ರಮಾಣ ಸಂತುಲನೆ ದೇಹದಲ್ಲಿ ನಾವೀನ್ಯತೆ, ಗಾಂಭೀರ್ಯಭಾವ, ನವರಸಗಳು ಮತ್ತು ಪ್ರಶಾಂತತೆಗಳ ಅಭಿವ್ಯಕ್ತಿ ವ್ಯಕ್ತವಾಯಿತು. ಹೀಗೆ ಭಾರತೀಯ ಶಿಲ್ಪಕಲೆಯು ವಿವಿಧ ಅರಸು ಮನೆತನಗಳ ಆಶ್ರಯದಲ್ಲಿ ಸಮಕಾಲೀನ ಆಚಾರ-ವಿಚಾರಗಳು, ನಂಬಿಕೆ, ಸಂಪ್ರದಾಯಗಳ ಪರಿಕಲ್ಪನೆಯಲ್ಲಿ ವಿಶಿಷ್ಟ ಲಕ್ಷಣಗಳೊಂದಿಗೆ ಬೆಳೆದು ಉನ್ನತ ಸ್ಥಾನವನ್ನು ಪಡೆಯುತ್ತ ಬಂದಿದೆ. ಕನ್ನಡನಾಡಿನಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಶಿಲ್ಪಕ್ಕೆ ಅವಿಚ್ಛಿನ್ನವಾದ ಸ್ಥಾನವಿದೆ. ಚಾರಿತ್ರಿಕ ಯುಗಕ್ಕೆ ಬಂದರೆ ಶಾತವಾಹನರ ಮನೆತನದ ಕಾಲಾವಧಿಯಲ್ಲಿ ಶಿಲ್ಪಕಲೆಯ ಸ್ವಲ್ಪಮಟ್ಟಿಗೆ ವಿವರಗಳು ದೊರೆಯುತ್ತವೆ. ಕದಂಬರ ಮನೆತನದ ಕಾಲಾವಧಿಯಲ್ಲಿ ಶಿಲ್ಪಾವಶೇಷಗಳು ಕಂಡು ಬರುತ್ತವೆ. ಬಹು ದೊಡ್ಡ ಪ್ರಮಾಣದಲ್ಲಿ ಶಿಲ್ಪಕಲೆಯು ಮೊದಲು ಕಾಣಿಸಿಕೊಳ್ಳುವುದು ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ಮುಂದೆ ಆಳ್ವಿಕೆಗೆ ಬಂದ ಅರಸುಮನೆತನಗಳು ವಿವಿಧ ಧರ್ಮಗಳಿಗೆ ಪ್ರೋತ್ಸಾಹ ನೀಡಿ ಧರ್ಮದ ಶಿಲ್ಪಗಳು ಬೆಳಕಿಗೆ ಬಂದವು.

ಶಿಲ್ಪಗಳ ಪ್ರಧಾನ ಲಕ್ಷಣಗಳಾದ ಭಂಗಿ ಮುದ್ರೆ, ಆಯುಧಗಳು ಪ್ರಮುಖವಾಗಿವೆ. ಮುದ್ರೆಗಳಲ್ಲಿ ಭಂಗಿ ಮತ್ತು ಆಯುಧಗಳನ್ನು ನಿರ್ದೇಶಿಸುವುದರಿಂದ ಮುದ್ರೆಗಳು ಪ್ರಮುಖವಾಗಿವೆ. ದಕ್ಷಿಣ ಭಾರತದ ಶಿಲ್ಪಗಳಲ್ಲಿ ಮುದ್ರೆಗಳ ಬಳಕೆಯು ಗಾಂಧಾರ ಕಲೆಯ ಪ್ರಭಾವದಿಂದ ಕ್ರಿ.ಶ. ೨-೩ ನೆಯ ಶತಮಾನದಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಅಭಯಮುದ್ರೆ ವರದಮುದ್ರೆ, ಆಜಾನುಲಂಬಬಾಹುಮುದ್ರೆ, ಜ್ಞಾನಮುದ್ರೆ ವ್ಯಾಖ್ಯಾನಮುದ್ರೆ, ದ್ಯಾನಮುದ್ರೆ, ಅರ್ಧಪತಾಕೆಮುದ್ರೆ, ನಿದ್ರಾಹಸ್ತ, ನಾಟ್ಯಕರಮ್, ಮುಷ್ಟಿಕರಮ್, ದನುರ್‌ಹಸ್ತ, ಊರುಹಸ್ತ, ಆಲಂಗನಹಸ್ತ, ಥಮರುಗಹಸ್ತ, ಡೋಲಕರಮ್, ಗಜಹಸ್ತ, ಕಟಕಮುದ್ರೆ ಮತ್ತು ಸಿಂಹಕರ್ಣಮುದ್ರೆ ಶಿಲ್ಪಗಳಲ್ಲಿ ಮುದ್ರೆಗಳನ್ನು ಗುರುತಿಸಬಹುದು ಸ್ಥಾನಕ ಆಸೀನ ಮತ್ತು ಶಯನ ಎಂಬ ೩ ಪ್ರಕಾರಗಳು ಶಿಲ್ಪಗಳು ದಾಕ್ಷಿಣಾತ್ಯ ಶಿಲ್ಪಗಳಲ್ಲಿ ಉಲ್ಲೇಖಿಸಿವೆ. ಇವುಗಳಲ್ಲಿ ಮತ್ತೊಂದು ಪ್ರಭೇದವಾದ ಯಾನಕ ಎಂಬುದನ್ನು ಸೇರಿಸಬಹುದು. ಸಮಭಂಗಿ, ದ್ವಿಭಂಗಿ, ತ್ರಿಭಂಗಿ, ಅತಿಭಂಗಿ, ನೃತ್ಯ ಮೊದಲಾದ ಭಂಗಿಗಳು ಸ್ಥಾನಕ ಭಂಗಿಯ ಪ್ರಕಾರಗಳಾಗಿವೆ.

ಯೋಗಾಸನ, ಅನಂತಾಸನ, ಸಿಂಹಾಸನ, ಭದ್ರಾಸನ, ವಿಮಲಾಸನ, ಪದ್ಮಾಸನ, ಆಲೀಡಾಸನ, ಪ್ರಾತ್ಯಾಲೀಡಾಸನ, ವೀರಾಸನ ಸುಖಾಸನ, ಸವ್ಯಲಲಿತಾಸನ, ವಾಮಲಲಿತಾಸನ, ಪ್ರಲಂಭಾಸನ ಇವು ಆಸೀನ ಭಂಗಿಯಲ್ಲಿಯ ಪ್ರಕಾರಗಳಾಗಿವೆ.

ಸಾತ್ವಿಕ, ವೀರ, ಶಾಂತ ಶಿಲ್ಪಗಳಲ್ಲಿ ೨ ಇಲ್ಲವೇ ೪ ಕೈಗಳಿರುತ್ತವೆ. ರಾಜಸ, ತಾಮಸ, ಶಿಲ್ಪಗಳಲ್ಲಿ ೬, ೮ ಕೈಗಳಿರುತ್ತವೆ. ಶಿಲ್ಪಗಳಲ್ಲಿ ಶಂಖ, ಚಕ್ರ, ಗದಾ, ತ್ರಿಶೂಲ, ಡಮರು, ಶೂಲ, ಟಂಕ, ಪಾಶ, ಖಟ್ವಾಂಗ, ಖಡ್ಗ, ದನಸ್ಸು, ಬಾಣ, ವಜ್ರ, ಶಕ್ತಿಶುಪರ ಅಂಕುಶಂಕುಶ, ಮುಸಲ, ನೇಗಿಲು, ಅಗ್ನಿ ಮುಂತಾದ ಆಯುಧಗಳು ಪ್ರಮುಖವಾಗಿವೆ. ಶಿಲ್ಪಗಳಲ್ಲಿ ಸಾಮಾನ್ಯವಾಗಿ ಕೊರಳ ಸರಳಗಳು ಮಂಡನ ದ್ರವ್ಯಗಳು, ವೈಜಯಂತಿ, ಕುಚಭದ, ರತ್ನಪಟ್ಟ, ಪತ್ರಪಟ್ಟ, ಅಲಕಚೂಲಕ ಪ್ರಭಾಮಂಡಲ, ಲಿರೀಟಮುಕುಟ, ಜಟಾಮುಕುಟ, ಕಂಡಮುಕುಟ, ಜಟಾಬಂಧ, ಜಟಾಭಾರ, ಶಿಖಾಮಣಿ, ಉದರಬಂಧ, ಉಪವೀತ, ಕಟಿಸೂತ್ರ, ಬೆರಳುಂಗುರಗಳು ಮುಂತಾದವುಗಳು ವಸ್ತ್ರಾಭರಣಗಳಿರುತ್ತವೆ.ಆಯಾ ದೇವ-ದೇವತೆಗಳಿಗೆ ಪ್ರಾಚೀನಕಾಲದಿಂದಲೂ ವಾಹನಗಳನ್ನು ಕಲ್ಪಿಸುವುದು ರೂಢಿಯಲ್ಲಿದೆ. ಶಿವನಿಗೆ ನಂದಿ, ಮೈಲಾರಲಿಂಗನಿಗೆ ಕುದುರೆ, ಬ್ರಹ್ಮನಿಗೆ ಹಸ, ವಿಷ್ಣುವಿಗೆ ಗರುಡ, ಗಣಪತಿಗೆ ಮೂಷಕ, ಕಾರ್ತಿಕೇಯನಿಗೆ ನವಿಲು, ದತ್ತಾತ್ರೇಯನಿಗೆ ನಾಯಿ, ಮಹಿಷಾಸುರಮರ್ದಿನಿಗೆ ಸಿಂಹ, ಸರಸ್ವತಿಗೆ ನವಿಲು, ಲಕ್ಷ್ಮಿಗೆ ಪದ್ಮ, ಬ್ರಾಹ್ಮಿಗೆ ಹಂಸ, ಕೌಮಾರಿಗೆ ಮಯೂರ, ವರಾಹಿಣಿ ಮಹಿಷ, ವೈಷವಿಗೆ ಗರುಡ, ಇದ್ರಾಣಿಗೆ ಗಜ, ಮಹೇಶ್ವಗೆ ನಂದಿ, ಚಾಮುಂಡಿಗೆ ನರಿ ಇನ್ನೂ ಮುಂತಾದ ವಾಹನಗಳನ್ನು ಹೊಂದಿರುತ್ತವೆ. ಮಹಾಕೂಟದಲ್ಲಿ ಶೈವ ವೈಷ್ಣವ ಶಿಲ್ಪಗಳು ಕಂಡು ಬಂದಿವೆ. ಅವುಗಳ ಪ್ರತಿಮಾ ಲಕ್ಷಣಗಳನ್ನು ಈ ಕೆಳಗಿನಂತಿವೆ.

೪.೨.೧ ಶೈವ ಶಿಲ್ಪಗಳು :

ಸಿಂದೂಕೊಳ್ಳದ ನಾಗರಿಕತೆಯಲ್ಲಿ ಪಶುಪತಿ ಶಿವನ ಮುದ್ರೆಗಳು ಇದ್ದದ್ದು ಕಂಡು ಬಂದಿವೆ.[೩೯] ಇದು ಶೈವ ಪರಂಪರೆಯ ಶಿಲ್ಪಕಲೆಯು ಪ್ರಾಚೀನತೆಯ ದ್ರಷ್ಟಿಯಿಂದ ಮಹತ್ವದ್ದಾಗಿದೆ. ಈ ಸಂಸ್ಕೃತಿಯಲ್ಲಿ ಶಿವರಾಧನೆ ಪ್ರಚಲಿತದಲ್ಲಿತ್ತೆಂಬುದು ನಮಗೆ ತಿಳಿದು ಬರುತ್ತದೆ. ಶಿವನ ಉಲ್ಲೇಖವು ವೈದಿಕ ಸಂಸ್ಕೃತಿಯ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಕನ್ನಡ ನಾಡಿನಲ್ಲಿ ಬಾದಾಮಿ ಚಾಲುಕ್ಯ ಮನೆತನದ ಕಾಲದಿಂದೀಚೆಗೆ ಶೈವಧರ್ಮವು ಬಹು ದೊಡ್ಡ ಪ್ರಮಾಣದಲ್ಲಿ ಮುನ್ನಡೆಯಿತು. ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಮೊದಲಾದ ಅರಸು ಮನೆತನಗಳ ಆಶ್ರಯ ಮತ್ತು ಪ್ರೋತ್ಸಾಹದಡಿಯಲ್ಲಿ ಶೈವ ಶಿಲ್ಪಗಳ ಬೆಳವಣಿಗೆಯನ್ನು ಸಮಕಾಲೀನ ಶಿಲ್ಪಾವಶೇಷಗಳಿಂದ ಕಂಡುಕೊಳ್ಳಬಹುದಾಗಿದೆ. ಮಹಾಕೂಟದಲ್ಲಿ ಕಂಡು ಬರುವ ಕೆಲವು ಶೈವ ಧರ್ಮದ ಮೂರ್ತಿಶಿಲ್ಪಗಳನ್ನು ಲಕ್ಷಿಸಬಹುದು.

೧. **ಅರ್ಧನಾರೀಶ್ವರ :**

ಸ್ಥಳ : ಹೊಸ ಮಹಾಕೂಟದ ಮಲ್ಲಿಕಾರ್ಜುನ ದೇವಾಲಯದ ಉತ್ತರ ಗೋಡೆಯಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : : ಎರಡು

ಆಯುಧಗಳು : ತ್ರಿಶೂಲ, ಹೂ, ಹಾವು, ಸಿರಿನಿರಿಗಿ

ಆಭರಣ : ಡಾಬು, ಬಳೆ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ನಿಂತ ಭಂಗಿ ಇದೆ. ಇದರಂತೆ ಇನ್ನೆರಡು ದೇವಾಲಯಗಳ ಗೋಡೆಗೆ ಇವೆ. ಅವು ಸಂಗಮೇಶ್ವರ ದೇವಾಲಯದ ಪಶ್ಚಿಮ ಗೋಡೆಗೆ ಹಾಗೂ ಇನ್ನೊಂದು ಕಾಲಕಾಲೇಶ್ವರ ದೇವಾಲಯದ ಪಶ್ಚಿಮ ಗೋಡೆಗೆ ಇದೆ ಇವು ಬೇರೆ ಬೇರೆ ರೀತಿಯಲ್ಲಿ ಅಲಂಕೃತಗೊಂಡಿವೆ. ಈ ಶಿಲ್ಪದ ಬಲಬದಿಯ ಕೈಯಲ್ಲಿ ತ್ರಿಶೂಲ ಎಡಬದಿಯ ಕೈಯಲ್ಲಿ ಹೂವನ್ನು ಹಿಡಿದುಕೊಂಡಿದೆ. ಈ ಶಿಲ್ಪದ ಕೆಳಗೆ ದೂತರಿದ್ದಾರೆ. ಅವರು ಇಬ್ಬರು ದೂತರ ಹಾಗೂ ಹಾವು ಇದೆ. ಮಹಾಕೂಟೇಶ್ವರ ದೇವಾಲಯದ ದಕ್ಷಿಣಗೋಡೆಗೆ ಇನ್ನೊಂದು ಈ ಶಿಲ್ಪವು ಇದೆ.

೨. **ಕರಂಡ ಮಕಟ ಶಿವ :**

ಸ್ಥಳ : ಹೊಸ ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಪಶ್ಚಿಮ ಗೋಡೆಯಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ಎರಡು

ಆಯುಧಗಳು : ತ್ರಿಶೂಲ

ಆಭರಣಗಳು : ಹಾರ, ಜನಿವಾರ

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಮಹಾಕೂಟೇಶ್ವರ ದೇವಾಲಯದ ಪಶ್ಚಿಮ ಗೋಡೆಯ ಕೋಷ್ಟಕದಲ್ಲಿದೆ. ಶಿಲ್ಪವು ಎರಡು ಕೈಗಳನ್ನು ಹೊಂದಿದೆ. ಬಲಬದಿಯ ಕೈಯಲ್ಲಿ ತ್ರಿಶೂಲವನ್ನು ಹಿಡಿದಿದೆ. ಎಡಬದಿಯ ಕೈಯಲ್ಲಿಯ ವಾಸ್ತು ಯಾವುದು ಎಂಬುದು ಅಸ್ಪಷ್ಟವಾಗಿದೆ. ಈ ಶಿಲ್ಪದ ಎರಡು ಕೈಗಳ ರಟ್ಟೆಗೆ ಹಾವುಗಳನ್ನು ಸುತ್ತಿಕೊಂಡಿದೆ.

೩. **ಶಿವಮೂರ್ತಿ :**

ಸ್ಥಳ : ಹೊಸ ಮಹಾಕೂಟೇಶ್ವರ ದೇವಾಲಯದ ಉತ್ತರ ಗೋಡೆಯ

ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ಎರಡು

ಆಯುಧಗಳು : ತ್ರಿಶೂಲ

ಆಭರಣಗಳು : ಕೊರಳಲ್ಲಿ ರುದ್ರಾಕ್ಷಿ, ಹೊಟ್ಟೆಗೆ ರುದ್ರಾಕ್ಷಿ, ತೋಳಪಟ್ಟಿ, ಕಿವಿಯಲ್ಲಿ ರಿಂಗ್

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಶಿಲ್ಪವು ನಿಂತಭಂಗಿಯಲ್ಲಿದೆ. ಇದು ಎರಡು ಕೈಗಳನ್ನು ಹೊಂದಿದೆ . ಬಲಬದಿಯ ಕೈಯಲ್ಲಿ ತ್ರಿಶೂಲ ಹಿಡಿದುಕೊಂಡಿದೆ. ಎಡಬದಿಯ ಕೈಯು ಭಗ್ನವಾಗಿದೆ. ತೊಡೆಗೆ ಹಾವನ್ನು ಸುತ್ತಿಕೊಂಡಿದೆ.

೪. ಜಟ ಭಾರಶಿವ :

ಸ್ಥಳ : ಹೊಸ ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಪೂರ್ವದ ಗೋಡೆಯ ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ಎರಡು

ಆಯುಧಗಳು : ತ್ರಿಶೂಲ

ಆಭರಣ : ಕೊರಳಲ್ಲಿ ರುದ್ರಾಕ್ಷಿ, ಹೊಟ್ಟೆಗೆ ರುದ್ರಾಕ್ಷಿಪಟ್ಟಿ

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿದ್ದು ಎರಡು ಕೈಗಳನ್ನು ಹೊಂದಿದ್ದು ಬಲಗಡೆಯ ಕೈಯಲ್ಲಿ ಶೂಲವನ್ನು ಹಿಡಿದಿದೆ. ಎರಡನೆಯ ಲೈಯಲ್ಲಿ ಅಸ್ಪಷ್ಟವಾಗಿದೆ. ಅದು ಗೊತ್ತಾಗುವುದಿಲ್ಲ. ಎರಡು ಕೋಡೆಗೆ ಹಾವು ಸುತ್ತಿಕೊಂಡಿದೆ. ಎರಡು ರಟ್ಟೆಗೆ ಪಟ್ಟಿಗಳು ಇವೆ.

೫. ಜಟ ಮಂಡಲ ಶಿವ :

ಸ್ಥಳ : ಹೊಸ ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಪೂರ್ವದ ಗೋಡೆಯ ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ಎರಡು

ಆಯುಧಗಳು : ಶೂಲ

ಆಭರಣ : ಕೊರಳಲ್ಲಿ ರುದ್ರಾಕ್ಷಿಸರ, ಹೊಟ್ಟೆಗೆ ರುದ್ರಾಕ್ಷಿಪಟ್ಟಿ

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿದ್ದು ಎರಡು ಕೈಗಳನ್ನು ಹೊಂದಿದ್ದು ಬಲಗಡೆಯ ಕೈಯಲ್ಲಿ ತ್ರಿಶೂಲವನ್ನು ಹಿಡಿದಿದೆ. ಎಡಗಡೆಯ ತೊಡೆಯ ಮೇಲೆ ಇಟ್ಟುಕೊಂಡಿದ್ದಾನೆ. ಎರಡು ತೊಡೆಗಳಿಗೆ ಹಾವು ಸುತ್ತಿಕೊಂಡಿದೆ.

೬. ಸ್ಥಾನಕ ಬ್ರಹ್ಮ :

ಸ್ಥಳ : ಹೊಸ ಮಹಾಕೂಟದ ಮಲ್ಲಿಕಾರ್ಜುನ ದೇವಾಲಯದ ದಕ್ಷಿಣ ಗೋಡೆಯ ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ನಾಲ್ಕು

ಆಯುಧಗಳು : ಕಿರುಗತ್ತಿ, ದುಂಡನೆಯ ಗುರಾನಿ, ಚಕ್ರ

ಆಭರಣ : ಜನಿವಾರ, ಕಿವಿಯಲ್ಲಿ ಓಲೆಗಳು

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಇದು ನಾಲ್ಕು ಬುಜವನ್ನು ಹೊಂದಿದೆ. ಇದು ನಿಂತ ಭಂಗಿಯಲ್ಲಿದೆ. ಬಲಗಡೆಯ ಮೊದಲ ಕೈಯನ್ನು ಆಶೀರ್ವದಿಸುವುದಾಗಿದೆ. ಎರಡನೆಯ ಕೈಯಲ್ಲಿ ಕಿರುಗತ್ತಿಯನ್ನು ಹಿಡಿದಿದೆ. ಎಡಗಡೆಯ ಕೈಯಲ್ಲಿ ಮೊದಲ ಕೈಯಲ್ಲಿ ದುಂಡನೆಯ ಗುರಾನಿ ಹಿಡಿದಿದೆ. ಎರಡನೆಯ ಕೈಯಲ್ಲಿ ಚಕ್ರದಾಕೃತಿಯ ಆಯುಧವನ್ನು ಹಿಡಿದಿದೆ. ಈ ಶಿಲ್ಪದ ಬಲಬದಿ ಮತ್ತು ಎಡಬದಿಯಲ್ಲಿ ಸೇವಕಿಯರಿರುವರು.

೭. ಶಿವಪರಿವಾರ ಮೂರ್ತಿ :

ಸ್ಥಳ : ಹೊಸ ಮಹಾಕೂಟದ ಮಲ್ಲಿಕಾರ್ಜುನ ದೇವಾಲಯದ ಪೂರ್ವದ ಗೋಡೆಯ ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ಎರಡು

ಆಯುಧಗಳು : ತ್ರಿಶೂಲ

ಆಭರಣ : ಪಟ್ಟಿಹಾರ, ರುದ್ರಾಕ್ಷಿಸರ, ಕಿವಿ ಓಲೆಗಳು

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿದೆ. ಇದು ಎರಡು ಕೈಗಳನ್ನು ಹೊಂದಿದೆ. ಬಲಗಡೆಯ ಕೈಯಲ್ಲಿ ತ್ರಿಶೂಲವನ್ನು ಹಿಡಿದಿದೆ. ಎರಡನೆಯ ಕೈಯನ್ನು ಮೇಲೆ ಎತ್ತಿದೆ. ಆದರೆ ಅದರ ಕೈಯಲ್ಲಿ ಏನು ಇದೆ. ಎಂಬುದು ಗೊತ್ತಾಗುತ್ತಿಲ್ಲ ಅದು ಅಸ್ಪಷ್ಟವಾಗಿದೆ.

ಕಾಲುಗಳು ಸಮನಾಗಿ ಇರುವುದಿಲ್ಲ. ಎಡಬದಿಯ ಕಾಲನ್ನು ತಿರುಗಿಸಿ ನಿಂತಿದೆ.

೮. ಹರಿಹರ :

ಸ್ಥಳ : ಹೊಸ ಮಹಾಕೂಟದ ಸಂಗಮೇಶ್ವರ ದೇವಾಲಯದ ಉತ್ತರ ಭಾಗದ ಗೋಡೆಯ ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ನಾಲ್ಕು

ಆಯುಧಗಳು : ಅಸ್ಪಷ್ಟ

ಆಭರಣ : ಜನಿವಾರ, ಕೊರಳಹಾರ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿದೆ. ಇದು ಚತುರ್ಭುಜನಾಗಿದ್ದು ಮೇಲಿನ ಬಲಗೈಯಲ್ಲಿ ಸರ್ಪವನ್ನು ಹಿಡಿದಿರುವುದೊಂದು ಪ್ರತಿಮೆ ವಿಶೇಷವೆನಿಸಿದೆ. ಇನ್ನೊಂದು ಎಡಗೈಯನ್ನು ತೊಡೆಯ ಮೇಲೆ ಇಟ್ಟುಕೊಂಡಿದೆ. ಇನ್ನೊಂದು ಹರಿಹರನ ಶಿಲ್ಪವು ಕಾಲಕಾಲೇಶ್ವರ ದೇವಾಲಯದ ಉತ್ತರ ಗೋಡೆಯ ಕೋಷ್ಠಕದಲ್ಲಿ ಇರುತ್ತದೆ.

೯. ಪರಶುಧರ ಶಿವ :

ಸ್ಥಳ : ಹೊಸ ಮಹಾಕೂಟದ ಮಲ್ಲಿಕಾರ್ಜುನ ದೇವಾಲಯದ ಪಶ್ಚಿಮ ಗೋಡೆಯ ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ನಾಲ್ಕು

ಆಯುಧಗಳು : ಕೊಡಲೆ

ಆಭರಣ : ಕೈಯಲ್ಲಿ ರುದ್ರಾಕ್ಷಿಸರ, ಕೊರಳಲ್ಲಿ ರುದ್ರಾಕ್ಷಿಸರ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು ನಿಂತ ಭಂಗಿಯಲ್ಲಿದೆ. ಕೈಯಲ್ಲಿ ಅಂದರೆ ಬಲಗೈಯಲ್ಲಿ ಕೊಡಲೆ ಹಿಡಿದಿದ್ದಾನೆ. ಇನ್ನೊಂದು ಕೈಯಲ್ಲಿ ರುದ್ರಾಕ್ಷಿ ಸರವನ್ನು ಹಿಡಿದಿದ್ದಾನೆ. ಎಡಗೈಯಲ್ಲಿ ಸರ್ಪವನ್ನು ಹಿಡಿದಿದ್ದಾನೆ. ಇನ್ನೊಂದು ಕೈಯನ್ನು ತೊಡೆಯ ಮೇಲೆ ಇಟ್ಟುಕೊಂಡಿದ್ದಾನೆ. ಈ ಶಿಲ್ಪದ ಪಕ್ಕದಲ್ಲಿ ಸೇವಕಿಯರನ್ನು ಹೊಂದಿರುತ್ತದೆ. ಇನ್ನೊಂದು ಶಿಲ್ಪವು ಮಹಾಲಿಂಗ ದೇವಾಲಯದ ಪಶ್ಚಿಮ ಗೋಡೆಯ ಕೋಷ್ಠಕದಲ್ಲಿದೆ. ಕೊಡಲೆ ಇನ್ನೊಂದು ಕೈಯಲ್ಲಿ ಸರ್ಪವನ್ನು ಹಿಡಿದುಕೊಂಡಿದೆ. ಅದೇ ರೀತಿಯ ಎಡಗೈಯಲ್ಲಿ ಶಂಕನ್ನು ಇನ್ನೊಂದು ಕೈಯನ್ನು ತೊಡೆಯ ಮೇಲೆ ಇಟ್ಟಕೊಂಡಿದ್ದಾನೆ. ಇನ್ನೊಂದು ಶಿಲ್ಪವು ಮಹಾಕೂಟೇಶ್ವರ ದೇವಾಲಯದ ದಕ್ಷಿಣಗೋಡೆಯ ಕೋಷ್ಠಕದಲ್ಲಿದೆ. ಇದು

ಎರಡು ಕೈಗಳನ್ನು ಹೊಂದಿದೆ. ಇದರಲ್ಲಿ ಒಂದು ಕೈಯಲ್ಲಿ ಹಾವು ಇನ್ನೊಂದು ಕೈಯಲ್ಲಿ ಕೊಡಲೆಯನ್ನು ಹಿಡಿದುಕೊಂಡಿದೆ.

೧೦. ಊರ್ಧ್ವರೇತೇಶ್ವರ :

ಸ್ಥಳ : ಹೊಸ ಮಹಾಕೂಟದ ಸಂಗಮೇಶ್ವರ ದೇವಾಲಯದ ದಕ್ಷಿಣ ಗೋಡೆಯ ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ಎರಡು

ಆಯುಧಗಳು : ಕೊಡಲೆ

ಆಭರಣ : ನಡುಪಟ್ಟಿ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿದೆ. ಇದು ಎರಡು ಕೈಗಳಿವೆ. ಎಡಗೈಯಲ್ಲಿ ಕೊಡಲೆಯನ್ನು ಹಿಡಿದುಕೊಂಡಿದೆ. ಬಲಗೈಯನ್ನು ಕೆಳಕ್ಕೆ ಮಾಡಿ ಹಸ್ತವನ್ನು ಕೆಳಕ್ಕೆ ಚಾಚಿದೆ. ಈ ಊರ್ಧ್ವರೇತೇಶ್ವರವು ಒಬ್ಬ ಮನುಷ್ಯನ ಮೇಲೆ ನೇರವಾಗಿ ನಿಂತಿದ್ದಾನೆ. ಈ ಶಿಲ್ಪದಲ್ಲಿ ಸರ್ಪಯಿದೆ. ನೀಳವಾದ ತಲೆಗೂದಲು ಬಿಟ್ಟಿರುತ್ತಾನೆ. ಲಿಂಗವು ಊರ್ಧ್ವಮುಖವಾಗಿ ನಿಂತಿದೆ. ಇನ್ನೊಂದು ಶಿಲ್ಪವು ಹೊಂಡದ ಪೂರ್ವಕ್ಕೆ ಇದೆ. ಇದು ನಡುಪಟ್ಟಿಯನ್ನು ಕಟ್ಟಿಕೊಂಡಿದೆ. ಎಡಗೈಯಲ್ಲಿ ಕಿರುಗತ್ತಿಯನ್ನು ಹಿಡಿದುಕೊಂಡಿದೆ. ಬಲಗೈಯನ್ನು ಕೆಳಕ್ಕೆ ಬಿಟ್ಟು ಹಸ್ತವನ್ನು ಕೆಳಕ್ಕೆ ಚಾಚಿಕೊಂಡು ಈ ಶಿಲ್ಪದ ಕೂದಲು ನೀಳವಾಗಿವೆ. ಇನ್ನುಳಿದ ಎಲ್ಲಾ ಲಕ್ಷಣಗಳು ಕೂಡಾ ಇವೆ.

೧೧. ಭಿಕ್ಷಾಟನೆ ಶಿವ :

ಸ್ಥಳ : ಹೊಸ ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ದಕ್ಷಿಣ ಗೋಡೆಯ ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ಎರಡು

ಆಯುಧಗಳು : ಭಿಕ್ಷಾಪಾತ್ರೆ

ಆಭರಣ : ಕಿವಿಓಲೆ, ಹಣೆಪಟ್ಟಿ

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಈ ಶಿಲ್ಪವು ಭಿಕ್ಷಾಟಣೆಗೆ ಸಾಗುವ ಒಂದು ನಡುಗೆಯಲ್ಲಿ ಕಂಡು ಬರುತ್ತದೆ. ಕೈಯಲ್ಲಿ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡಿದೆ. ಇನ್ನೊಂದು ಕೈಯಲ್ಲಿ ಹಾವು

ಹಿಡಿದಿದೆ.ಕಿವಿಯಲ್ಲಿ ಓಲೆಯನ್ನು ಹಾಕಿಕೊಂಡಿದೆ. ಹಣೆಪಟ್ಟಿಯನ್ನು ಕಟ್ಟಿಕೊಂಡಿದೆ. ಇದು ನಗ್ನವಾದ ಶಿಲ್ಪವಾಗಿದೆ.

೧೨. ತ್ರಿಶೂಲಧರಶಿವ :

ಸ್ಥಳ : ಹೊಸ ಮಹಾಕೂಟದ ಮಲ್ಲಿಕಾರ್ಜುನ ದೇವಾಲಯದ ದಕ್ಷಿಣ ಗೋಡೆಯ ಕೋಷ್ಟಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ನಾಲ್ಕು

ಆಯುಧಗಳು : ತ್ರಿಶೂಲ, ಗುರಾಣಿ

ಆಭರಣ : ಕೊರಳಹಾರ, ಕಿವಿಗೆ ರಿಂಗ್, ರುದ್ರಾಕ್ಷಿ ಪಟ್ಟಿ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿದೆ. ಚತುರ್ಭುಜವನ್ನು ಹೊಂದಿದೆ. ಬಲಗೈಯಲ್ಲಿ ತ್ರಿಶೂಲವನ್ನು ಇನ್ನೊಂದು ಕೈಯಲ್ಲಿ ಆಯುಧದ ಜೊತೆಗೂಡಿ ಸ್ಪಷ್ಟವಾಗಿ ಕಾಣುತ್ತಿಲ್ಲ. ಎಡಗೈಯಲ್ಲಿ ಸರ್ಪ ಇನ್ನೊಂದು ಕೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡಿದೆ. ಕಾಲುಗಳು ಸಮಾನಾಂತರವಾಗಿರದೆ. ಬಲಗಾಲನ್ನು ತಿರುಗಿಸಿ ನಿಂತಿದೆ.

೧೩. ಲಕುಲೀಶ :

ಸ್ಥಳ : ಹೊಸ ಮಹಾಕೂಟದ ಲಕುಲೀಶ ದೇವಾಲಯದ ದಕ್ಷಿಣ ಗೋಡೆಯ ಕೋಷ್ಟಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ಎರಡು

ಆಯುಧಗಳು : ಲಗುಡ

ಆಭರಣ : ಕೊರಳಹಾರ, ಗೆಜ್ಜೆ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿದೆ. ಎರಡು ಕೈಗಳನ್ನು ಹೊಂದಿದ್ದು ಬಲಗೈಯಲ್ಲಿ ಲಗುಡವನ್ನು ಹಿಡಿದಿದ್ದಾನೆ. ಇನ್ನೊಂದು ಕೈ ಎಂದರೆ ಎಡಗೈಯನ್ನು ತೊಡೆಯ ಮೇಲೆ ಇಟ್ಟುಕೊಂಡಿದ್ದಾನೆ. ತಲೆಕೂದಲು ನೀಳವಾಗಿ ಬಿಟ್ಟಿದ್ದಾನೆ. ಬಲಗಾಲಲ್ಲಿ ಗೆಜ್ಜೆ ಕಟ್ಟಿಕೊಂಡಿದ್ದಾನೆ.

೧೪. **ನಂದಿರಥ :**

ಸ್ಥಳ : ಹೊಸ ಮಹಾಕೂಟದ ಪಿನಾಕಪಾಣಿ ದೇವಾಲಯದ ಉತ್ತರ ಗೋಡೆಯ ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ನಾಲ್ಕು

ಆಯುಧಗಳು : ಹಾರ, ಸಿರಿಗೆಗಳು

ಆಭರಣ : ನಡುಪಟ್ಟಿ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿದೆ. ಇದು ನಂದಿವಾಹನ ಇದೆ. ಬಲಗಡೆಯ ಕೈಯಲ್ಲಿ ಬಾಣವನ್ನು ಹಿಡಿದಿದೆ. ಇನ್ನೊಂದು ಕೈಯನ್ನು ಆಶೀರ್ವದಿಸುವುದಾಗಿದೆ. ಎಡಗೈಯಲ್ಲಿ ದಂಡವನ್ನು ಇನ್ನೊಂದು ಕೈಯನ್ನು ಸೊಂಟದ ಮೇಲೆ ಇಟ್ಟಿದ್ದಾನೆ. ಇದು ಅಸ್ಪಷ್ಟವಾಗಿದೆ.

೧೫. **ಗಣಪತಿ :**

ಸ್ಥಳ : ಹೊಸ ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಎದುರು ನಂದಿಮಂಟಪದ ಹಿಂಬದಿಯಲ್ಲಿದೆ.

ಭಂಗಿ : ಆಸೀನ

ಕೈಗಳು : ಎರಡು

ಆಯುಧಗಳು : ಅಸ್ಪಷ್ಠ

ಆಭರಣ : ತೋಳಿಗೆ ಪಟ್ಟಿ ಇದೆ.

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಈ ಶಿಲ್ಪವು ಆಸೀನ ಭಂಗಿಯಲ್ಲಿದೆ. ಎರಡು ಕೈಗಳನ್ನು ಹೊಂದಿರುತ್ತದೆ. ಒಂದು ಕೈಯಲ್ಲಿ ಉಂಡಿಯನ್ನು ಹಿಡಿದಿದೆ. ಇನ್ನೊಂದು ಕೈಯಲ್ಲಿ ಹಿಡಿದ ಆಯುಧವು ಅಸ್ಪಷ್ಟವಾಗಿದೆ. ತೋಳಿಗೆ ಪಟ್ಟಿಯನ್ನು ಕಟ್ಟಿಕೊಂಡಿದೆ. ವಾಹನ ಇಲಿಯನ್ನು ಸಹ ನಾವು ಕಾಣಬಹುದು. ಅತಿ ಪ್ರಾಚೀನವಾದ ಶಿಲ್ಪವಾಗಿದೆ.ಇದಕ್ಕೆ ಎಣ್ಣೆಯನ್ನುಸುರಿದಿರುವ ಕಾರಣ ಇದು ಜಿಡ್ಡುಗಟ್ಟಿದೆ. ದ್ವಾರಬಾಗಿಲ ಒಳಬಾಗದಲ್ಲಿ ಬಲಗೋಡೆಗೆ ನಿಂತ ಗಣಪತಿಶಿಲ್ಪವಿದೆ. ಇದಕ್ಕೆ ಸುಣ್ಣ ಹಚ್ಚಿದ್ದರಿಂದ ಇದರ ಆಕಾರವು ಸ್ಪಷ್ಟವಾಗಿ ಕಾಣುತ್ತಿಲ್ಲ. ಇನ್ನೊಂದು ಗಣಪತಿ ಕಾಶಿ ತೀರ್ಥ ಹೊಂಡದಲ್ಲಿಯ ದಂಡೆಗೆ ಗಣಪತಿಮೂರ್ತಿ ಇದೆ. ಇದು ಸ್ಪಷ್ಟವಾಗಿ ಕಾಣುತ್ತಿದೆ.

೧೬. **ವೀರಭದ್ರ :**

ಸ್ಥಳ : ಹೊಸ ಮಹಾಕೂಟದ ವಿಷ್ಣುಪುಷ್ಕರಣಿಯ ಪೂರ್ವ ದಿಕ್ಕನಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ನಾಲ್ಕು

ಆಯುಧಗಳು : ಖಡ್ಗ, ಬಿಲ್ಲು, ಗುರಾಣಿ

ಆಭರಣ : ಕಾಲುಗಡಗ, ಬೆರಳುಂಗುರ, ತೋಳಿನ ಪಟ್ಟಿ, ಕೀರಿಟದಲ್ಲಿ ಶಿವಲಿಂಗ

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿದೆ. ಚತುರ್ಭುಜವನ್ನು ಹೊಂದಿದ್ದಾನೆ. ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಎಡಗೈಯಲ್ಲಿ ಬಿಲ್ಲು ಮತ್ತು ಗುರಾಣಿಯನ್ನು ಹಿಡಿದಿದ್ದಾನೆ. ಕೊರಳಲ್ಲಿ ರುಂಡ ಮಾಲೆಯನ್ನು ಹಾಕಿಕೊಂಡಿದ್ದಾನೆ. ಕಾಲಿಗೆ ಕಡಗವನ್ನು ಹಾಕಿಕೊಂಡಿದ್ದಾನೆ. ಬಲಬದಿಗೆ ದಕ್ಷಬ್ರಹ್ಮ ನಿಂತಿದ್ದಾನೆ. ಇನ್ನೊಂದು ವೀರಭದ್ರಶಿಲ್ಪವಿದೆ. ಅದು ಇತ್ತೀಚಿನದಾಗಿದೆ. ಇದರಲ್ಲಿ ದಕ್ಷಬ್ರಹ್ಮ ಮತ್ತು ಪ್ರಸೂತಿಯನ್ನು ಹೊಂದಿದೆ. ಇದು ಕಾಲಿಗೆ ಸರ್ಪವನ್ನು ಸುತ್ತಿಕೊಂಡಿದೆ. ಇದರ ಆಯುಧಗಳು ಬೇರೆ ರೀತಿಯಲ್ಲಿವೆ.

೧೭. ಲಜ್ಜಾಗೌರಿ :

ಸ್ಥಳ : ಹೊಸ ಮಹಾಕೂಟದ ವಿಷ್ಣುಪುಷ್ಕರಣಿಯ ಪೂರ್ವಕ್ಕಿದೆ.

ಭಂಗಿ : ನಿಂತ ಭಂಗಿ

ಕೈಗಳು : ಎರಡು

ಆಯುಧಗಳು : ಕಮಲದ ಹೂವುಗಳು

ಆಭರಣ : ಬಳೆಗಳು

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಈ ಶಿಲ್ಪವನ್ನು ಕೆಲವು ವಿದ್ವಾಂಸರು ಕುಳಿತ ಭಂಗಿ ಎಂದರೆ ಇನ್ನುಳಿದ ವಿದ್ವಾಂಸರು ಅಂಗಾತವಾಗಿ ಮಲಗಿರುವುದು ಎಂದು ವಾದಗಳು ಕಂಡು ಬರುತ್ತವೆ. ಈ ಶಿಲ್ಪವು ಭಗ್ನಗೊಂಡಿದೆ. ಎರಡು ಕೈಗಳನ್ನು ನೋಡಿದರೆ ಅವುಗಳಲ್ಲಿ ಕಮಲದ ಹೂವನ್ನು ಹಿಡಿದಿರುವುದು ಕಂಡು ಬರುತ್ತದೆ. ಮುಖದ ಜಾಗದಲ್ಲಿ ಕಮಲ ಹೂವನ್ನು ರೂಪಿಸಲಾಗಿದೆ. ಈ ಶಿಲ್ಪವು ಭಗ್ನಗೊಂಡಿರುವುದರಿಂದ ಬಹುಭಾಗ ಭಗ್ನಗೊಂಡಿದೆ. ಇದರ ಸ್ವಲ್ಪ ಆಕಾರದಿಂದ ಇದು ಲಜ್ಜಾಗೌರಿಶಿಲ್ಪ ಎಂದು ತಿಳಿದು ಬರುತ್ತದೆ.

೧೮. ಮಹಿಷಾಸುರ ಮರ್ದಿನಿ :

ಸ್ಥಳ : ಹೊಸ ಮಹಾಕೂಟದ ದ್ವಾರ ಬಾಗಿಲ ಒಳಭಾಗದ ಬಲಬದಿಯ ಗೋಡೆಯಲ್ಲಿದೆ.

ಭಂಗಿ : ಆಸೀನ

ಕೈಗಳು : ನಾಲ್ಕು

ಆಯುಧಗಳು : ತ್ರಿಶೂಲ

ಆಭರಣ : ಕೊರಳಹಾರ

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಈ ಶಿಲ್ಪವು ಚತುರ್ಭುಜ ಶಿಲ್ಪವಾಗಿದೆ. ಇದು ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದಿದೆ. ಅದರಿಂದ ಕೋಣವನ್ನು ಕೊಲ್ಲುವುದಾಗಿದೆ. ಬಲಗಾಲನ್ನು ಅದರ ಮೇಲೆ ಇಟ್ಟಿರುತ್ತಾಳೆ. ತೆರೆದ ಎದೆಯುಳ್ಳ ಶಿಲ್ಪವಾಗಿದೆ. ಎಡಗೈಯನ್ನು ತೊಡೆಯ ಮೇಲೆ ಇಟ್ಟುಕೊಂಡು ಕುಳಿತಿದ್ದಾಳೆ. ಇನ್ನೊಂದು ಶಿಲ್ಪವು ವಿಷ್ಣುಪುಷ್ಕರಣಿಯ ಹೊಂಡದ ಪೂರ್ವ ದಿಕ್ಕಿನಲ್ಲಿದೆ. ಅದು ಅಸ್ಪಷ್ಟವಾಗಿದೆ. ಬಹಳ ಹಳೆಕಾಲದ ಶಿಲ್ಪವಾಗಿದೆ.

೧೯. ದುರ್ಗಿ :

ಸ್ಥಳ : ಹೊಸ ಮಹಾಕೂಟದ ವಿಷ್ಣುಪುಷ್ಕರಣಿಯ ಹೊಂಡದ ಪೂರ್ವಕ್ಕೆ ಇದೆ.

ಭಂಗಿ : ಆಸೀನ

ಕೈಗಳು : ಆರು

ಆಯುಧಗಳು : ಖಡ್ಗ, ಗುರಾಣಿ, ತ್ರಿಶೂಲ, ಷರ್ಪಾಸ್ತ್ರ, ಕಪಾಲೆ,

ಆಭರಣ : ಕೊರಳಹಾರ, ಸೊಂಟದಪಟ್ಟಿ, ಕೀರಿಟದಲ್ಲಿ ಶಿವಲಿಂಗ, ಕಿವಿ ಆಭರಣ

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಈ ಶಿಲ್ಪವು ಆರು ಕೈಗಳನ್ನು ಹೊಂದಿದೆ. ಇದು ಆಸೀನ ಭಂಗಿಯಲ್ಲಿದೆ. ಬಲಗೈಯಲ್ಲಿ ತ್ರಿಶೂಲ, ಖಡ್ಗವನ್ನು ಹಿಡಿದಿದೆ. ಎಡಗೈಯಲ್ಲಿ ಷರ್ಪಾಸ್ತ್ರ, ಕಪಾಲೆಯನ್ನು ಹಿಡಿದಿದೆ. ಇದು ರುಂಡಮಾಲೆಯನ್ನು ಹೊಂದಿದೆ. ಎರಡು ಬದಿಯಲ್ಲಿ ರುಂಡಗಳು ಇವೆ.

೨೦ ಸರಸ್ವತಿ :

ಸ್ಥಳ : ಹೊಸ ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಎದುರಿನ ಸರಸ್ವತಿ ದೇವಾಲಯದ ಗರ್ಭಗೃಹದಲ್ಲಿದೆ.

ಭಂಗಿ : ಪದ್ಮಾಸನ

ಕೈಗಳು : ನಾಲ್ಕು

ಆಯುಧಗಳು : ಶಂಕು, ಪುಸ್ತಕ

ಆಭರಣಗಳು : ಕೊರಳಹಾರ, ಸೊಂಟಪಟ್ಟಿ, ಬಳಿ, ಕಿವಿಓಲೆ, ಕಿರೀಟ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ಪದ್ಮಾಸನದಲ್ಲಿದೆ. ಇದು ಚತುರ್ಭುಜವನ್ನು ಹೊಂದಿದೆ. ಎಡಗೈಯಲ್ಲಿ ಶಂಕು ಮತ್ತು ಪುಸ್ತಕವನ್ನು ಹಿಡಿದಿದ್ದಾಳೆ. ಬಲಗೈಯಲ್ಲಿ ಆಯುಧವು ಸ್ಪಷ್ಟವಾಗಿಲ್ಲ. ಬಲ ಮತ್ತು ಎಡ ಬದಿಯಲ್ಲಿ ಸೇವಕಿಯರು ಇದ್ದಾರೆ. ಸರಸ್ವತಿ ಶಿಲ್ಪಕ್ಕೆ ಮೇಲೆ ಛತ್ರಿ ಇದೆ.

೨೧. ಗೌರಮ್ಮ :

ಸ್ಥಳ : ಹೊಸ ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಎದುರಿನ ಗೌರಮ್ಮ ದೇವಾಲಯದ ಗರ್ಭಗೃಹದಲ್ಲಿದೆ.

ಭಂಗಿ : ಪದ್ಮಾಸನ

ಕೈಗಳು : ನಾಲ್ಕು

ಆಯುಧಗಳು : ತ್ರಿಶೂಲ, ಡಮರುಗ

ಆಭರಣಗಳು : ಕಿರೀಟ, ಕೊರಳಹಾರ, ಕಿವಿಯಲ್ಲಿ ಓಲೆ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ಪದ್ಮಾಸನ ಭಂಗಿಯಲ್ಲಿದೆ. ಇದು ಚತುರ್ಭುಜವುಳ್ಳದ್ದಾಗಿದೆ. ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದಿದೆ. ಇನ್ನೊಂದು ಕೈಯನ್ನು ಆಶೀರ್ವದಿಸುತ್ತಿರುವಳು ಎಡಗೈಯಲ್ಲಿ ಡಮರುಗವನ್ನು ಹಿಡಿದಿದ್ದಾಳೆ. ಇನ್ನೊಂದು ಕೈ ಅಸ್ಪಷ್ಟವಾಗಿದೆ.

೪.೨.೨. ವೈಷ್ಣವ ಶಿಲ್ಪಗಳು :

ವೈಷ್ಣವಧರ್ಮದ ಭಾಗವತ ಪಂಥದ ಅನುಯಾಯಿಗಳು ಕ್ರಿಸ್ತ ಪೂರ್ವ ಯುಗದ ಕೊನೆಯ ಮತ್ತು ಕ್ರಿಸ್ತಾನಂತರದ ಮೊದಲ ಕೆಲವು ಶತಮಾನದಲ್ಲಿ ವೈಷ್ಣವಕುಲದ ಪಂಚವೀರರನ್ನು ಮೂರ್ತಿರೂಪದಿಂದ ಆರಾಧಿಸುತ್ತಿದ್ದರೆಂಬ ವಿಚಾರ ಸಮಕಾಲೀನ ಶಾಸನಾದಿ ಪುರಾತತ್ವ ಕುರುಹುಗಳಿಂದ ಸ್ಪಷ್ಟವಾಗುತ್ತದೆ. ಋಗ್ವೇದದ ವಿಷ್ಣುವೂ ಶತಪಥ ಬ್ರಾಹ್ಮಣದ ನಾರಾಯಣನೂ ಕ್ರಿ.ಪೂ. ಸುಮಾರು ೨ನೆಯ ಶತಮಾನದಲ್ಲಾಗಲೇ ಭಾಗವತ ಪಂಥದ ವಾಸುದೇವನೊಂದಿಗೆ ಸಮೀಕರಿಸಲ್ಪಟ್ಟಿದ್ದರು. ದಕ್ಷಿಣ ಭಾರತದಲ್ಲಿ ಕ್ರಿ.ಪೂ. ಸುಮಾರು ೨ನೇ ಶತಮಾನದಿಂದ ಕ್ರಿ.ಶ. ೫ನೇ ಶತಮಾನದಿವರೆಗೂ ಪಂಚವೀರರ ಆರಾಧನೆ ಪ್ರಚಲಿತದಲ್ಲಿತ್ತು. ಬನವಾಸಿ ಕದಂಬರು, ತಲಕಾಡಿನ ಗಂಗರ ಕಾಲಕ್ಕಾಗಿಲೇ ಕನ್ನಡ ನಾಡಿನಲ್ಲಿ ವೈಷ್ಣವ ಧರ್ಮವು ವ್ಯಾಪಕವಾಗಿ ಪ್ರಚಾರದಲ್ಲಿತ್ತು. ಬಾದಾಮಿ ಚಾಲುಕ್ಯರ ಮನೆತನದ ಪ್ರಾರಂಭದ ಕೆಲವು ಅರಸರು ವೈಷ್ಣವ ಧರ್ಮಾನುಯಾಯಿಗಳಾಗಿದ್ದರಿಂದ ಆ ಕಾಲದ ಗುಹಾ ಹಾಗೂ ರಾಚನಿಕ ದೇವಾಲಯಗಳಲ್ಲಿ ಮಹಾವಿಷ್ಣುವಿನ ವಿವಿಧ ಅವತಾರಗಳಶಿಲ್ಪಗಳು[೧೦] ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತವೆ. ಮಹಾಕೂಟದಲ್ಲಿ ಕಂಡು ಬಂದಿರುವ ವೈಷ್ಣವ

ಶಿಲ್ಪಗಳು ಈ ಮುಂದಿನಂತಿವೆ.

೧. ಗೋಪಾಲಕೃಷ್ಣ :

ಸ್ಥಳ	: ಹೊಸ ಮಹಾಕೂಟದ ವೀರಭದ್ರ ದೇವಾಲಯದ ಮುಂಭಾಗದಲ್ಲಿದೆ.
ಭಂಗಿ	: ನಿಂತ ಭಂಗಿ
ಕೈಗಳು	: ನಾಲ್ಕು
ಆಯುಧಗಳು	: ಶಂಕು ಮತ್ತು ಚಕ್ರ, ಕೊಳಲು
ಆಭರಣಗಳು	: ಕಿರೀಟ, ಜನಿವಾರ, ಕಾಲಗಡಗ, ಕೈಗಡಗ
ಕಾಲಮಾನ	: ಕ್ರಿ.ಶ. ೬ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿದೆ. ಚತುರ್ಭುಜದಲ್ಲಿದೆ. ಬಲಗೈಯಲ್ಲಿ ಚಕ್ರವನ್ನು ಹಿಡಿದಿದೆ. ಇನ್ನೊಂದು ಕೈಯಲ್ಲಿ ಕೋಲನ್ನು ಹಿಡಿದಿದೆ. ಎಡಗೈಯಲ್ಲಿ ಶಂಕನ್ನು ಹಿಡಿದಿರುತ್ತದೆ. ಇನ್ನೊಂದು ಕೈಯಲ್ಲಿ ಕೋಲನ್ನು ಹಿಡಿದಿರುತ್ತದೆ. ಅಂದರೆ ಇದು ಕೊಳಲು ಊದುವ ಭಂಗಿಯಲ್ಲಿದೆ. ಕಾಲುಗಳನ್ನು ವಕ್ರವಾಗಿ ಇಟ್ಟಿರುತ್ತಾನೆ. ದನಗಳನ್ನು ಹೊಂದಿರುತ್ತಾನೆ.

೨. ಭೂವರಾಹ :

ಸ್ಥಳ	: ಹೊಸ ಮಹಾಕೂಟದ ವಿರೂಪಾಕ್ಷೇಶ್ವರ ದೇವಾಲಯದ ದಕ್ಷಿಣ ಗೋಡೆಯ ಕೋಷ್ಟಕದಲ್ಲಿದೆ.
ಭಂಗಿ	: ನಿಂತ ಭಂಗಿ
ಕೈಗಳು	: ನಾಲ್ಕು
ಆಯುಧಗಳು	: ಶಂಕು ಮತ್ತು ಚಕ್ರ
ಆಭರಣಗಳು	: ಗೆಜ್ಜೆಸರ, ಜನಿವಾರ
ಕಾಲಮಾನ	: ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ಚತುರ್ಭುಜವುಳ್ಳದ್ದಾಗಿದೆ. ಇದು ನಿಂತ ಭಂಗಿಯಲ್ಲಿದೆ. ಬಲಗೈಯಲ್ಲಿ ಚಕ್ರವನ್ನು ಹಿಡಿದಿದೆ. ಇನ್ನೊಂದು ಕೈಯನ್ನು ತೊಡೆಯ ಮೇಲೆ ಇಟ್ಟಿರುತ್ತದೆ. ಎಡಗೈಯಲ್ಲಿ ಶಂಕನ್ನು ಹಿಡಿದಿದೆ. ಇನ್ನೊಂದು ಕೈಮೇಲೆ ಲಕ್ಷ್ಮಿ ಕುಳಿತುಕೊಂಡಿದ್ದಾಳೆ. ಈ ಲಕ್ಷ್ಮಿಯು ಮುಖ ಭಗ್ನವಾಗಿದೆ. ಈ ಭೂವರಾಹವು ನಾಗದೇವತೆಗಳ ಮೇಲೆ ಕಾಲಿಟ್ಟು ನಿಂತಿದ್ದಾನೆ.

೩. ವಿಷ್ಣು :

ಸ್ಥಳ	: ಹೊಸ ಮಹಾಕೂಟದ ವಿರೂಪಾಕ್ಷೇಶ್ವರ ದೇವಾಲಯದ ಪಶ್ಚಿಮ ಗೋಡೆಯ ಕೋಷ್ಟಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ನಾಲ್ಕು

ಆಯುಧಗಳು : ಶಂಕು, ಚಕ್ರ

ಆಭರಣ : ಜನಿವಾರ, ತೋಳಪಟ್ಟಿ, ಕಿವಿಓಲೆ, ಸೊಂಟಪಟ್ಟಿ, ಕಿರೀಟ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ಚತುರ್ಭುಜ ಶಿಲ್ಪವಾಗಿದೆ. ಬಲಗೈಯಲ್ಲಿ ಚಕ್ರವನ್ನು ಹಿಡಿದಿದೆ. ಇನ್ನೊಂದು ಕೈಯಲ್ಲಿ ಊಂಡಿಯನ್ನು ಹಿಡಿದಿದೆ. ಎಡಗೈಯಲ್ಲಿ ಶಂಕನ್ನು ಹಿಡಿದುಕೊಂಡಿದೆ. ಇನ್ನೊಂದು ಕೈಯನ್ನು ತೊಡೆಯ ಮೇಲೆ ಇಟ್ಟುಕೊಂಡಿದೆ. ಇದು ನಿಂತ ಭಂಗಿಯಲ್ಲಿದೆ. ಇದು ಹಲವಾರು ಆಭರಣಗಳನ್ನು ಧರಿಸುತ್ತದೆ. ಅಲ್ಲಿಯೇ ವೀರಭದ್ರದೇವಾಲಯದ ಮುಂದೆ ವಿಷ್ಣುವಿದೆ. ಅದು ಕೂಡಾ ಈ ಶಿಲ್ಪದ ಲಕ್ಷಣಗಳನ್ನು ಒಳಗೊಂಡಿದೆ. ಅಲ್ಲಿಯೇ ಇನ್ನೊಂದು ಶಿಲ್ಪವಿದೆ. ಇದು ಲಕುಲೀಶನ ದೇವಾಲಯದ ಹಿಂಬದಿಯಲ್ಲಿದೆ. ಇದು ಎರಡು ಕೈಗಳನ್ನು ಹೊಂದಿದೆ. ಕೈಗಳಲ್ಲಿ ಶಂಕುಗಳನ್ನು ಹಿಡಿದಿದೆ.

೪. ಉಗ್ರನರಸಿಂಹ :

ಸ್ಥಳ : ಹೊಸ ಮಹಾಕೂಟದ ವಿರೂಪಾಕ್ಷೇಶ್ವರ ದೇವಾಲಯದ ಉತ್ತರ ಗೋಡೆಯ ಕೋಷ್ಠಕದಲ್ಲಿದೆ.

ಭಂಗಿ : ನಿಂತ ಭಂಗಿ

ಕೈಗಳು : ನಾಲ್ಕು

ಆಯುಧಗಳು : ಶಂಕು, ಚಕ್ರ

ಆಭರಣಗಳು : ಕೊರಳಹಾರ, ಜನಿವಾರ, ಕೈಗಡಗ, ತೋಳಪಟ್ಟಿ, ಹೊಟ್ಟೆಪಟ್ಟಿ

ಕಾಲಮಾನ : ಕ್ರಿ.ಶ. ೮ನೆಯ ಶತಮಾನ

ವಿವರ : ಈ ಶಿಲ್ಪವು ಚತುರ್ಭುಜವುಳ್ಳದ್ದಾಗಿದೆ. ಇದು ನಿಂತ ಭಂಗಿಯಲ್ಲಿದೆ. ಬಲಗೈಯಲ್ಲಿ ಚಕ್ರವನ್ನು ಹಿಡಿದಿದ್ದಾನೆ. ಇನ್ನೊಂದು ಕೈಯು ಭಗ್ನಗೊಂಡಿದೆ. ಎಡಗೈಯಲ್ಲಿ ಶಂಕನ್ನು ಹಿಡಿದಿದ್ದಾನೆ. ಇನ್ನೊಂದು ಕೈಯು ಭಗ್ನಗೊಂಡಿದೆ. ಶಿಲ್ಪದ ಮುಖವು ಸಹ ಭಗ್ನಗೊಂಡಿದೆ. ಈ ಶಿಲ್ಪವು ತೊಡೆಯ ಮೇಲೆ ಹಿರಣ್ಯರಾಕ್ಷಸವನ್ನು ಹಾಕಿಕೊಂಡಿದೆ. ಈ ಶಿಲ್ಪದ ಹಿಂದೆ ರಾಕ್ಷಸವಿದೆ.

೪.೨.೩. ವಿಶೇಷ ಶಿಲ್ಪಗಳು :

ಬ್ರಹ್ಮ, ವಿಷ್ಣು, ಮಹೇಶ್ವರ

ಸ್ಥಳ : ಹೊಸ ಮಹಾಕೂಟದ ಮಹಾಕೂಟೇಶ್ವರ ದೇವಾಲಯದ

ಹಿಂಬದಿಯ ಗೋಡೆಗೆ ಇದೆ.

ಭಂಗಿ : ನಿಂತ ಭಂಗಿ

ಕೈಗಳು : ನಾಲ್ಕು

ಆಯುಧಗಳು : ಶಂಕು, ತ್ರಿಶೂಲ, ಚಕ್ರಬಾಣ

ಆಭರಣಗಳು : ಹಾರ, ತೋಳಪಟ್ಟಿ, ಜನಿವಾರ, ಸೊಂಟಪಟ್ಟಿ

ಕಾಲಮಾನ : ಕ್ರಿ.ಶ. ೬ನೆಯ ಶತಮಾನ

ವಿವರ : ಈ ಶಿಲ್ಪವು ನಿಂತ ಭಂಗಿಯಲ್ಲಿವೆ. ಚತುರ್ಭುಜವುಳ್ಳದ್ದಾಗಿದೆ. ಇವು ಒಂದೇ ಕಲ್ಲಿನಲ್ಲಿ ಮೂರು ಶಿಲ್ಪಗಳನ್ನು ಕೆತ್ತಲಾಗಿದೆ. ಬಲಗೈಯನ್ನು ಮೂರು ಮೂರ್ತಿಗಳು ಆಶೀರ್ವದಿಸುವುದಾಗಿದೆ. ಇನ್ನೊಂದು ಕೈಯಲ್ಲಿ ಬಾಣವನ್ನು ಹಿಡಿದಿದ್ದಾರೆ. ಎಡಗೈಯನ್ನು ಮೂರು ಮೂರ್ತಿಗಳು ತೊಡೆಯ ಮೇಲೆ ಇಟ್ಟಿರುತ್ತಾರೆ. ಬ್ರಹ್ಮನು ಮೂರು ಮುಖವುಳ್ಳವನಾಗಿದ್ದಾನೆ. ಇವನ ಕೈಗಳು ಎರಡು ಮಾತ್ರ ಮಹೇಶ್ವರ ಮತ್ತು ವಿಷ್ಣುವಿನ ಕೈಗಳು ನಾಲ್ಕು ಇವೆ. ಈ ಮೂರು ಮೂರ್ತಿಗಳು ವಿಶಿಷ್ಟವಾದ ರೀತಿಯಲ್ಲಿವೆ.

ಅಡಿಟಿಪ್ಪಣಿ

೧. ಶೀಲಾಕಾಂತ ಪತ್ತಾರ, ೨೦೦೦, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಕ.ವಿ.ವಿ.ಹಂಪಿ, ಪು-೨೩೩

೨. ಅದೇ, ಪು-೧೫೩

೩. ಸೇಸುನಾಥನ್ ಐ. ೨೦೦೬ ಕರ್ನಾಟಕದ ಪ್ರವಾಸಿ ತಾಣಗಳು-೧. ಸಾದನಾ ಪ್ರಕಾಶನ, ಬೆಂಗಳೂರು ಪು-೧೯೬

೪. ಕರವೀರಪ್ರಭು ಕ್ಯಾಲಕೊಂಡ, ೧೯೯೨, ಚಾಲುಕ್ಯ ವಾಸ್ತುಶಿಲ್ಪ ವೈಭವ, ಪ್ರಸಾರಾಂಗ ಕ.ವಿ.ವಿ.ಹಂಪಿ, ಪು-೨೧

೫. ಮುನಿಸ್ವಾಮಿ ಆರ್, ೧೯೯೯, ಬಿಜಾಪುರ ಜಿಲ್ಲೆ, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಮುದ್ರಕರು ಅಭಿಮಾನ ಪ್ರಕಾಶನ, ಡಾ. ರಾಜಕುಮಾರ ರಸ್ತೆ, ರಾಜಾಜಿನಗರ ಬೆಂಗಳೂರು ಪು-೭೭

೬. ಮೀನಾ ಮೋಹಿತೆ ೨೦೦೯, ಮಹಾಕೂಟ, ಎ.ಮುರಿಗೆಪ್ಪ (ಪ್ರ.ಸಂ)ಬಾದಾಮಿ ಚಾಲುಕ್ಯರು ಪ್ರಸಾರಾಂಗ, ಕವಿ.ವಿ. ಹಂಪಿ, ಪು-೪೨೫

೭. ಕನ್ನಡ ವಿಷಯ ವಿಶ್ವಕೋಶ, ೨, ೨೦೦೭, ಮುದ್ರಕರು, ಮಣಿಪಾಲ್ ಪ್ರೆಸ್ ಕಾರ್ನರ್. ಮಣಿಪಾಲ್. ಪು-೪೨೫

೮. ಅದೇ, ಪು-೬೨೪

೯. ಅದೇ, ಪು-೬೨೪

೧೦. ಮೀನಾ ಮೋಹಿತೆ ಪೂರ್ವೋಕ್ತ ಪು-೪೨೬

೧೧. ಅದೇ, ಪು-೪೨೬

೧೨. ಶೀಲಾಕಾಂತ ಪತ್ತಾರ, ೨೦೦೯, ಬಾದಾಮಿ ನೆಲೆ, ಹಿನ್ನೆಲೆ, ಎ.ಮುರಿಗೆಪ್ಪ (ಪ್ರ.ಸಂ) ಬಾದಾಮಿ ಚಾಲುಕ್ಯರು, ಪ್ರಸಾರಾಂಗ, ಕ.ವಿ.ವಿಹಂಪಿ, ಪು-೧೬

೧೩. ಅದೇ, ಪು-೧೬

೧೪. ಅದೇ, ಪು-೧೬

೧೫. ರಾಜೇಂದ್ರಪ್ಪ ಎಸ್. (ಸಂ), ೧೯೯೯, ಬಿಜಾಪುರ ಜಿಲ್ಲೆ ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ, ಕರ್ನಾಟಕ ಸರಕಾರ ಪು-೭೯

೧೬. ಅದೇ, ಪು-೭೯

೧೭. ಅದೇ, ಪು-೭೯

೧೮. ಅದೇ, ಪು–೭೯

೧೯. ಅದೇ, ಪು–೭೯

೨೦. ಅದೇ, ಪು–೭೯

೨೧. ಅದೇ, ಪು–೭೯

೨೨. ಅದೇ, ಪು–೭೯

೨೩. ಅದೇ, ಪು–೭೯

೨೪. ಅದೇ, ಪು–೭೯

೨೫. ಶೀಲಾಕಾಂತ ಪತ್ತಾರ. ಪೂರ್ವೋಕ್ತ, ಪು–೨೩೧

೨೬. ಮೀನಾ ಮೋಹಿತೆ. ಪೂರ್ವೋಕ್ತ, ಪು–೪೨೭

೨೭. ಸೇಸುನಾಥನ್ ಐ. ಪುರ್ವೋಕ್ತ, ಪು–೧೯೬

೨೮. ಕರವೀರಪ್ರಭು ಕ್ಯಾಲಕೊಂಡ. ಪುರ್ವೋಕ್ತ, ಪು–೨೪

೨೯. ದೇವರಕೊಂಡಾರೆಡ್ಡಿ(ಸಂ),೨೦೦೦,ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ–೯ ಪ್ರಸಾರಾಂಗಕ.ವಿ.ವಿ.ಹಂಪಿ, ಪು– ೩೪೫

೩೦. ಅದೇ, ಪು– ೩೪೫

೩೧. ಅದೇ, ಪು– ೩೪೫

೩೨. ಶೀಲಾಕಾಂತ ಪತ್ತಾರ, ಪೂರ್ವೋಕ್ತ. ಪು–೧೪೯

೩೩. ಅದೇ, ಪು–೧೫೧

೩೪. ಶ್ರೀನಿವಾಸ ಪಾಡಿಗಾರ, ೨೦೦೯, ಬಾದಾಮಿ ಚಾಲುಕ್ಯರು ಧಾರ್ಮಿಕ ವ್ಯವಸ್ಥೆ, ಎ.ಮುರಿಗೆಪ್ಪ (ಪ್ರ.ಸಂ),ಬಾದಾಮಿ ಚಾಲುಕ್ಯರು. ಪ್ರಸಾರಾಂಗ ಕ.ವಿ.ವಿ.ಹಂಪಿ, ಪು–೧೭೮

೩೫. ಅಣ್ಣಿಗೇರಿ ಎ.ಎಂ. ೧೯೯೭, ಬಾದಾಮಿಯ ಶಿಲ್ಪಕಲೆ, ಭವಾನಿ ಪ್ರಕಾಶನ ಧಾರವಾಡ. ಪು–೪

೩೬. ಕರವೀರಪ್ರಭು ಕ್ಯಾಲಕೊಂಡ. ಪೂರ್ವೋಕ್ತ, ಪು–೨೩

೩೭. ಶೀಲಾಕಾಂತ ಪತ್ತಾರ, ೨೦೦೬, ಬಾದಾಮಿ. ಪ್ರಸಾರಾಂಗ, ಕ.ವಿ.ವಿ.ಹಂಪಿ ಪು–೨೨

೩೮. ಗೋಪಾಲರಾವ್‌ಎಚ್.ಎಸ್. (ಪ್ರ.ಸಂ),೨೦೦೮, ಬಾದಾಮಿ ಚಾಲುಕ್ಯರ ಶಿಲ್ಪಕಲೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು ಪು–೨೮

೩೯. ಶೀಲಾಕಾಂತ ಪತ್ತಾರ. ಪುರ್ವೋಕ್ತ, ಪು–೧೫೩

೪೦. ಗೋಪಾಲರಾವ್‌ಎಚ್.ಎಸ್.(ಪ್ರ.ಸಂ), ಪುರ್ವೋಕ್ತ, ಪು–೨೮

ಅಧ್ಯಾಯ : ಐದು

ವಾಸ್ತು ವೈಶಿಷ್ಟ್ಯ

೫.೧ ದ್ರಾವಿಡ ಶೈಲಿ

೫.೨ ರೇಖಾ ನಾಗರಶೈಲಿ

೫.೩ ಕದಂಬ ನಾಗರಶೈಲಿ

ದೇವಾಲಯ ವಾಸ್ತುಕಲೆ ಬೆಳೆಯುತ್ತ ಬಂದಂತೆ ಅವುಗಳ ನಿರ್ಮಾಣ ಕುರಿತಂತೆ ಕೃತಿಗಳು ರಚನೆಯಾದವು. ದೇವಾಲಯಗಳನ್ನು ಎಲ್ಲಿ ಕಟ್ಟಬೇಕು, ಯಾವ ವಿಧಿ-ವಿಧಾನಗಳಿರಬೇಕು ಮೊದಲಾದ ವಿವರಗಳನ್ನು ನಿರ್ದೇಶಿಸುವ ಶಾಸ್ತ್ರವೇ ಸಿದ್ಧವಾಯಿತು. ಗೃಹಸೂತ್ರ, ಬೃಹತ್ಸಂಹಿತೆ, ಸುಪ್ರಬೇದಾಗಮ, ಕಾಮಿಕಾಗಮ, ಕಾರಣಾಗಮ, ಅಜಿತಾಗಮ, ವೈಖಾನಸಾಗಮ, ಕೌಟಿಲ್ಯನ ಅರ್ಥಶಾಸ್ತ್ರ, ಬಾಣನ ಹರ್ಷಚರಿತೆ, ರಾಜತರಂಗಿಣಿ, ವೃಚ್ಛಕಟಿಕ, ಅಮಕೋಶ ಮೊದಲಾದ ಕೃತಿಗಳಲ್ಲಿ ವಾಸ್ತುಕಲೆಯ ವಿವರಣೆಗಳಿವೆ. ಅಪರಾಜಿತಪೃಚ್ಛಾ, ಸಮಾರಾಂಗಣ, ಸೂತ್ರಧಾರ, ವಿಶ್ವಕರ್ಮಪ್ರಕಾಶ, ಮಾನಸೋಲ್ಲಾಸ, ರೂಪಮಂಡನೆ ಮೊದಲಾದ ಕೃತಿಗಳು ಉತ್ತರಭಾರತದ ದೇವಾಲಯಗಳ ರೂಪರೇಷೆಯನ್ನು ಸೂಚಿಸಿದೆ. ಅಂತೆಯೇ ಮಯಮತ, ಮನಸಾರ ತಂತ್ರಸಮುಚ್ಚಯ ಕಾಶ್ಯಪಶಿಲ್ಪ, ಪದ್ಮಸಂಹಿತಾ, ವಾಸ್ತುವಿದ್ಯೆ, ಶಿಲ್ಪರತ್ನ, ಮೊದಲಾದ ಕೃತಿಗಳು ದಕ್ಷಿಣ ಭಾರತದ ದೇವಾಲಯಗಳ ರೂಪರೇಷಗಳನ್ನು ಉಲ್ಲೇಖಿಸಿವೆ. ಈ ಕೃತಿಗಳಲ್ಲಿ ದೇವಾಲಯಗಳನ್ನು ಭೌಗೋಳಿಕ ಪ್ರದೇಶ, ರಚನಾ ವಿನ್ಯಾಸ ಶಿಖರದ ಶೈಲಿಯ ಹಿನ್ನೆಲೆಯಲ್ಲಿಬೇರೆ ಬೇರೆ ರೀತಿಯಲ್ಲಿ ವರ್ಗೀಕರಿಸಲಾಗಿದೆ. ಕಾಮಿಕಾಗಮ, ಕಾಶ್ಯಪಶಿಲ್ಪ, ಶಿಲ್ಪರತ್ನ ಮೊದಲಾದ ಕೃತಿಗಳಲ್ಲಿ ಹಿಮಾಲಯದಿಂದ ವಿಂಧ್ಯ ಪರ್ವತದವರೆಗಿನ ದೇವಾಲಯಗಳು ನಾಗರಶೈಲಿಯವು. ವಿಂಧ್ಯಪರ್ವತದಿಂದ ಕೃಷ್ಣಾನದಿ ತೀರದವರೆಗಿನ ದೇವಾಲಯಗಳು ವೇಸರಶೈಲಿಯವು ಹಾಗೂ ಕೃಷ್ಣಾನದಿಯಿಂದ ಕನ್ಯಾಕುಮಾರಿಯವರೆಗಿನ ದೇವಾಲಯಗಳು ದ್ರಾವಿಡಶೈಲಿಯವು ಎಂದು ಭೌಗೋಳಿಕ ಹಿನ್ನೆಲೆಯಲ್ಲಿ ವರ್ಗೀಕರಿಸಲಾಗಿದೆ. ವಿಮಾನಾರ್ಚನಕಲ್ಪ, ದೀಪ್ತಾಗಮ, ರೌರವಾಗಮ, ಮಯಮತ ಮೊದಲಾದ ಕೆಲವು ಕೃತಿಗಳಲ್ಲಿ ದೇವಾಲಯಗಳನ್ನು ರಚನಾ ವಿನ್ಯಾಸದ ಆಧಾರದ ಹಿನ್ನೆಲೆಯಲ್ಲಿ ವರ್ಗೀಕರಿಸಲಾಗಿದೆ. ಈ ಕೃತಿಗಳಲ್ಲಿ ಬುಡದಿಂದ ತುದಿಯವರೆಗೂ ಚೌಕೋನವಾಗಿರುವುದು ನಾಗರ, ಗ್ರಿವದಿಂದ ಮೇಲಕ್ಕೆ ೬ ಅಥವಾ ೮ ಮುಖಗಳಿರುವುದು ದ್ರಾವಿಡ, ಅದೇ ವೃತ್ತಾಕಾರವಾಗಿರುವುದು ವೇಸರ ಎಂದು ಹೇಳಲಾಗಿದೆ.

ಕನ್ನಡನಾಡಿನಲ್ಲಿ ಪ್ರಾದೇಶಿಕ ಭಿನ್ನತೆ, ಪರಸ್ಪರ ಪ್ರಭಾವ, ಪ್ರಾಕೃತಿಕ ಪರಿಸರ, ಕಟ್ಟಡ, ಸಾಮಗ್ರಿಗಳ ಅನುಕೂಲ ಕಾಲಕಾಲಕ್ಕೆ ಪ್ರಭಲವಾಗುತ್ತಿದ್ದ ಬೇರೆ ಬೇರೆ ಧರ್ಮಗಳ ಜನರ ಅಭಿರುಚಿ, ಅರಸರು, ಮಾಂಡಳಿಕರು ಅಮಾತ್ಯರು, ಸ್ಥಳೀಯ ಮುಖಂಡರೇ ಮೊದಲಾದವರ ಪ್ರೋತ್ಸಾಹ, ಆಶ್ರಯ, ಅನುದಾನ, ನಿರ್ಮಾಣದ ಅವಶ್ಯಕತೆ, ಶಿಲ್ಪಿಗಳ ಮನೋಧರ್ಮ ಮತ್ತು ಕೈಚಳಕ ಮೊದಲಾದ ಸಂಗತಿಗಳ ಹಿನ್ನೆಲೆಯಲ್ಲಿ ದೇವಾಲಯಗಳು ಸ್ಥಳೀಯ ಶೈಲಿ ಮತ್ತು ವಿನ್ಯಾಸವನ್ನು ಬೆಳೆಸಿಕೊಂಡವು. ಶಿಖರದ ತಳಭಾಗವು ಚಚ್ಚೌಕವಾಗಿದ್ದರೂ ಗ್ರೀವ ಮತ್ತು ಅದರ ಮೇಲಿನ ಭಾಗ ಷಟ್ಕೋನ ಅಥವಾ ಅಷ್ಟಕೋನವುಳ್ಳದ್ದಾಗಿದ್ದರೆ ಅದು ದ್ರಾವಿಡ ಶಿಖರವೆನಿಸುತ್ತದೆ. ಇಂತಹ ಶಿಖರಗಳಲ್ಲಿ ಮೆಟ್ಟಿಲುಗಳಂತೆ ಮೇಲಕ್ಕೆ ಹೋದಂತೆ

ಕ್ರಮೇಣ ಚಿಕ್ಕದಾಗುವ ಅಂತಸ್ತುಗಳಿರುತ್ತವೆ. ಈ ಅಂತಸ್ತುಗಳ ಮೇಲೆ ಕೆತ್ತನೆಯಿರುವುದರಿಂದ ಶಿಖರವು ಸುಂದರವಾಗಿ ಕಾಣುತ್ತದೆ.[೧]

ಆಗಮ ಸಂಹಿತೆ ಮತ್ತು ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ "ಭೌಮದಿ ಸ್ತೂಪಿ ಪರ್ಯಂತಮ್ ಯುಗಾಶ್ರವ್ ಭವೇತ್" ಎಂದು ಹೇಳಿರುವುದರಿಂದ ತಳದಿಂದ ಸ್ತೂಪಿಯವರೆಗೆ ಚೌಕಾಕಾರವಿರುವ ದೇವಾಲಯವು ನಾಗರಶೈಲಿಯದು ಎಂಬುದು ಸ್ಪಷ್ಟಪಡಿಸುತ್ತದೆ[೨] ಇದು ಕೆಳಗಿನಿಂದ ಮೇಲಕ್ಕೆ ಬಾಗಿದ ರೇಖೆಯಂತಹ ರಚನೆಯಾಗಿರುವುದರಿಮದ ಇದನ್ನು ರೇಖಾನಾಗರಶೈಲಿ ಎಂತಲೂ ಕರೆಯಲಾಗಿದೆ. ಈ ಶೈಲಿಯ ದೇವಾಲಯಗಳ ಊರ್ಧ್ವಮುಖ ಕ್ರಮದಲ್ಲಿ ಪೀಠ ಜಂಘಾಶಿಖರ, ಆಮಲಸಾರ, ಕಳಶಗಳಿರುತ್ತವೆ. ಶಿಖರದ ಮೂಲೆಗಳಲ್ಲಿ ಹಂತ-ಹಂತವಾಗಿ ಮುಂದುವರೆಯುವ ಕೂಟದಂತಹ ರಚನೆಯಿರುತ್ತದೆ. ವಿಮಾನದ ಮೇಲ್ಭಾಗ ಶಿಖರದ ಕೇಂದ್ರಬಿಂದುವಿನತ್ತ ಬಾಗಿದಂತಿರುವ ಚತುರಸ್ತವಾದ ಲಂಭವಿನ್ಯಾಸಗಳಿರುತ್ತವೆ. ಶಿಖರದ ತುದಿಯಲ್ಲಿ ಚಪ್ಪಟೆ ವೃತ್ತಾಕಾರದ ಮತ್ತು ಅಂಚುಗಳನ್ನು ಅರೆಗೋಳವಿನಾಕಾರದಲ್ಲಿ ಕಂಡರಿಸಿದ. ಆಮಲಕ ಇರುತ್ತದೆ. ಅಜಿತಗಮ ಕೃತಿಯಲ್ಲಿ ಕಂಠದಿಂದ ಮೇಲಕ್ಕೆ ವೃತ್ತಾಕಾರವಾಗಿರುವುದು ವೇಸರಶೈಲಿ ಎಂದು ಹೇಳಲಾಗಿದೆ. ಇದು ನಾಗರ ಮತ್ತು ದ್ರಾವಿಡಶೈಲಿಗಳ ಮಿಶ್ರಣದ ಶೈಲಿಯನ್ನು ಸೂಚಿಸುತ್ತದೆ. ಫಂಸನಾಶೈಲಿಯ ದೇವಾಲಯಗಳು ಕಲ್ಯಾಣಚಾಲುಕ್ಯರ ಮತ್ತು ಹೊಯ್ಸಳ ಮನೆತನದ ಕಾಲಾವಧಿಯಲ್ಲಿ ಕಂಡು ಬರುತ್ತವೆ. ಅವುಗಳ ಊರ್ಧ್ವಮುಖ ರಚನೆಯಲ್ಲಿ ಅಧಿಷ್ಠಾನ, ಬಿತ್ತಿ, ಪ್ರಸ್ತರಗಳಿದ್ದು ಮೇಡಟ್ಟಲ್ಕವು. ಕಂಠ ಮತ್ತು ಕಪೋತಗಳಿಂದ ಕೂಡಿದ್ದು ಹಂತ-ಹಂತವಾಗಿ ಚಿಕ್ಕದಾಗುತ್ತ ಮೇಲೆರುತ್ತದೆ. ಅಂತ್ಯದಲ್ಲಿ ಗ್ರಿವ ಶಿಖರ, ಸ್ತೂಪ, ಇರುತ್ತವೆ. ಪ್ರಾರಂಭದಲ್ಲಿ ಈ ಶೈಲಿಯ ದೇವಾಲಯಗಳನ್ನು ಕದಂಬನಾಗರಶೈಲಿ ಎಂದು ಗುರುತಿಸಲಾಗುತ್ತಿತ್ತು. ಈಗ ಇವುಗಳನ್ನು ಫಂಸನಾಶೈಲಿ ಎಂದು ಗುರುತಿಸಲಾಗುತ್ತಿದೆ. ಮಹಾಕೂಟದಲ್ಲಿ ದ್ರಾವಿಡ, ರೇಖಾನಾಗರ, ಕದಂಬನಾಗರಶೈಲಿಯ ದೇವಾಲಯಗಳು ಕಂಡು ಬರುತ್ತವೆ.

೫.೧. ದ್ರಾವಿಡ ಶೈಲಿ :

ಶಿಖರದ ತಳಭಾಗವು ಚಚ್ಚೌಕವಾಗಿದ್ದರೂ ಗ್ರೀವ ಮತ್ತು ಅದರ ಮೇಲಿನ ಭಾಗ ಷಟ್ಕೋನ ಅಥವಾ ಅಷ್ಟಕೋನವುಳ್ಳದ್ದಾಗಿದ್ದರೆ ಅದು ದ್ರಾವಿಡಶೈಲಿ ಶಿಖರವೇನಿಸುತ್ತದೆ. ಇಂತಹ ಶಿಖರಗಳಲ್ಲಿ ಮೆಟ್ಟಿಲುಗಳಂತೆ ಮೇಲಕ್ಕೆ ಹೋದಂತೆ ಕ್ರಮೇಣ ಚಿಕ್ಕದಾಗುವ ಅಂತಸ್ತುಗಳಿರುತ್ತವೆ. ಈ ಅಂತಸ್ತುಗಳ ಮೇಲೆ ಕೆತ್ತನೆಯಿರುವುದರಿಂದ ಶಿಖರವು ಸುಂದರವಾಗಿ ಕಾಣುತ್ತದೆ.

೧. ಮಹಾಕೂಟೇಶ್ವರ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪೂರ್ವಾಭಿಮುಖವಾಗಿದೆ.

ಇದು ದ್ರಾವಿಡಶೈಲಿಯ[೩] ಶಿಖರವನ್ನು ಹೊಂದಿದೆ. ಇದು ಅಧಿಷ್ಠಾನ, ಬಿತ್ತಿ, ಗೋಡೆ, ಕೋಷ್ಠಕ, ಜಲಂಧರಗಳು, ಶಿಖರವನ್ನು ಹೊಂದಿದೆ.

ಅಧಿಷ್ಠಾನ : ಇದು ಕಟ್ಟಡದ ಭದ್ರ ಬುನದಿಯನ್ನು ಒದಗಿಸುವುದಾಗಿದೆ. ಅದರ ಭಾರವನ್ನು ಎತ್ತಿ ಹಿಡಿಯುವುದು ಅದಿಷ್ಠಾನದ ಕಾರ್ಯವಾಗಿದೆ. ಇದು ಎತ್ತರ ಭಾಗದಲ್ಲಿದೆ. ಇದು ದೇವಾಲಯವನ್ನು ಸೌಂದರ್ಯಕ್ಕಾಗಿ ಇದನ್ನು ಕಟ್ಟುತ್ತಿದ್ದರು. ಅದಿಷ್ಠಾನದ ಮೇಲೆ ಗೋಡೆಯನ್ನು ಕಟ್ಟುತ್ತಿದ್ದರು.

ಬಿತ್ತಿ : ಇದರ ಬಿತ್ತಿಯು ಸಮಪಾತಳಿಯಲ್ಲಿದೆ. ಇದು ಎಲ್ಲಾ ಭಾಗದಲ್ಲಿ ಹೆಚ್ಚಿನ ಭಾರವನ್ನು ಹೊರಲು ಮಧ್ಯದಲ್ಲಿ ಚಿಕ್ಕ ಉಬ್ಬುಶಿಲ್ಪಗಳು ಇವೆ. ಈ ದೇವಾಲಯದಲ್ಲಿ ಕೈಲಾಸ ಪರ್ವತವನ್ನು ಎತ್ತುತ್ತಿರುವ ರಾವಣ ಶಿವಪಾರ್ವತಿಯರು ಮತ್ತು ಲಕುಲೀಶ ಯುದ್ದದ ಸನ್ನಿವೇಶಗಳನ್ನು ಕೆತ್ತಲಾಗಿದೆ. ಕಾಲಕಾಲಕ್ಕೆ ಪುನರ್ ನಿರ್ಮಾಣ ಕಾರ್ಯ ನಡೆದಿದೆ. ಇತರೆ ಶಿಲ್ಪಗಳು ಕಂಡು ಬರುತ್ತವೆ.

ಗೋಡೆ : ಈ ದೇವಾಲಯದ ಗೋಡೆಯಲ್ಲಿ ಜಾಲಂದರಗಳು ಮತ್ತು ಕೋಷ್ಠಕಗಳು ಇವೆ. ಇವು ಬಹು ಮನಮೋಹಕವಾಗಿವೆ.

ಕೋಷ್ಠಕಗಳು : ಈ ದೇವಾಲಯದ ಒಂದು ವಿಶಿಷ್ಟ ಮತ್ತು ವೈಭವಯುತವಾಗಲು ಕೋಷ್ಠಕಗಳು ಎಂದು ತಿಳಿದು ಬರುತ್ತದೆ. ಕೋಷ್ಠಕದಲ್ಲಿ ಭಿಕ್ಷಟನೆ ಶಿವ, ಕರುಂಡಮುಕುಟಶಿವ, ಜಟಾಭಾರಶಿವ, ಶಿವಮೂರ್ತಿ ಶಿಲ್ಪಗಳು ಕಂಡು ಬರುತ್ತವೆ. ಇವು ಶಿವನ ಒಂದು ಸ್ವರೂಪವನ್ನು ಹೇಳುತ್ತವೆ.

ಜಾಲಂಧರಗಳು : ಗೋಡೆಗೆ ಒಟ್ಟು ಎಂಟು ಜಾಲಂದರಗಳು ಇವೆ. ಇವು ಪ್ರದಕ್ಷಿಣಾಪಥಕ್ಕೆ ಬೆಳಕಿಗಾಗಿ ಇವುಗಳನ್ನು ನಿರ್ಮಿಸಲಾಗಿದೆ. ಎಂದು ತಿಳಿದು ಬರುತ್ತದೆ. ಇವು ಈ ದೇವಾಲಯದ ಒಂದು ಬೆಳಕಿನ ಸ್ವರೂಪವಾಗಿವೆ.

ಶಿಖರ : ಶಿಖರವು ಬಾದಾಮಿ ಚಾಲುಕ್ಯರ ಶಿಖರಗಳು ಅತಿ ಸುಂದರವಾಗಿವೆ. ಇದು ದ್ರಾವಿಡ ಶೈಲಿಯ ಶಿಖರವಾಗಿದೆ. ಈ ಶಿಖರವು ಮೆಟ್ಟಿಲು ಮಟ್ಟದ್ದಾಗಿದೆ. ಇದು ಮೇಲಕ್ಕೆ ಹೋದಂತೆ ಸಣ್ಣದಾಗುತ್ತದೆ. ಇದು ಸುಂದರಮಯವಾಗಿದೆ. ಇಲ್ಲಿಯ ಕೆತ್ತನೆಯು ಅಚ್ಚುಕಟ್ಟಾಗಿದೆ. ಇದು ನೋಡಲಿಕ್ಕೆ ಸುಂದರಮಯವಾಗಿ ಕಾಣುತ್ತದೆ.

೨. ಮಲ್ಲಿಕಾರ್ಜುನ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪೂರ್ವಾಭಿಮುಖವಾಗಿದೆ. ಇದು ದ್ರಾವಿಡಶೈಲಿಯ[೪] ದೇವಾಲಯವಾಗಿದೆ. ಇದು ಅಧಿಷ್ಠಾನ, ಭಿತ್ತ, ಗೋಡೆ, ಕೋಷ್ಠಕಗಳು, ಜಾಲಂದರಗಳು, ಶಿಖರವನ್ನು ಹೊಂದಿದೆ.

ಅಧಿಷ್ಠಾನ : ಅದಿಷ್ಠಾನವು ದೇವಾಲಯದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಇದು ಮನಮೋಹಕವಾಗಿರುತ್ತದೆ. ದೇವಾಲಯದ ಆಕರ್ಷಣೆಯನ್ನು ಹೆಚ್ಚಿಸುತ್ತದೆ. ಇದು ದೇವಾಲಯದ ಬಾರವನ್ನು ಹೋರುತ್ತದೆ. ಇದರ ಮೇಲೆ ಗೋಡೆಯನ್ನು ಕಟ್ಟಿರುತ್ತಾರೆ.

ಬಿತ್ತಿ : ಇದು ಸಮಪಾತಾಳದಲ್ಲಿರುತ್ತದೆ. ಎಲ್ಲಾ ಭಾಗದಲ್ಲಿ ಹೆಚ್ಚಿನ ಭಾರವನ್ನು ಹೊರುವ ಮದ್ಯದಲ್ಲಿ ಚಿಕ್ಕ ಉಬ್ಬುಶಿಲ್ಪಗಳು ಇವೆ. ಅನೇಕ ಸನ್ನಿವೇಶದ ಉಬ್ಬುಶಿಲ್ಪಗಳು ಬಿತ್ತಿಯ ಪಟ್ಟಿಕೆಯಲ್ಲಿ ಕಂಡು ಬರುತ್ತವೆ.

ಗೋಡೆ : ಈ ದೇವಾಲಯದ ಗೋಡೆಯ ಸುತ್ತಲೂ ಜಾಲಂದರಗಳು ಹಾಗೂ ಕೋಷ್ಠಕಗಳು ಇವೆ. ಇವು ಗೋಡೆಗೆ ಒಂದು ರೀತಿಯಲ್ಲಿ ಸುಂದರವಾಗಿಸಿವೆ. ಎಂದು ನಮಗೆ ತಿಳಿದು ಬರುತ್ತದೆ. ನೋಡಲಿಕ್ಕೆ ಗಮನಾರ್ಹವಾಗಿರುತ್ತದೆ.

ಕೋಷ್ಠಕಗಳು : ಇವು ದೇವಾಲಯಕ್ಕೆ ಒಂದು ವಿಶೇಷ ಹಾಗೂ ವೈಭವಯುತ್ತವಾಗಿ ಕಾಣಲು ಈ ಕೋಷ್ಠಕಗಳ ಶಿಲ್ಪಗಳು ಕಾರಣವಾಗುತ್ತದೆ. ಈ ಕೋಷ್ಠಕದಲ್ಲಿ ಅರ್ಧನಾರೀಶ್ವರ, ಶಿವಪರಿವಾರ, ಶಿಲ್ಪ , ಪರಶುಧರ ಶಿವಶಿಲ್ಪ, ಸ್ಥಾನಕ ಬ್ರಹ್ಮಶಿಲ್ಪ, ತ್ರಿಶೂಲಧರಶಿವ ಶಿಲ್ಪಗಳನ್ನು ಹೊಂದಿರುತ್ತದೆ.

ಜಾಲಂಧರಗಳು : ಈ ದೇವಾಲಯಕ್ಕೆ ಆರು ಜಾಲಂಧರಗಳಿವೆ. ಇವು ಪ್ರದಕ್ಷಿಣಾಪಥವನ್ನು ಹಾಕುವುದಕ್ಕೆ ಹಾಗೂ ದೇವಾಲಯದ ಒಳಭಾಗಕ್ಕೆ ಬೆಳಕು ಬರುವುದಕೋಸ್ಕರ ಇವುಗಳನ್ನು ನಿರ್ಮಿಸಿದ್ದಾರೆ ಎಂದು ನಮಗೆ ತಿಳಿದು ಬರುತ್ತದೆ.

ಶಿಖರ : ಶಿಖರವು ಬಹು ಸುಂದರವಾಗಿದ್ದು ಇದು ದ್ರಾವಿಡಶೈಲಿ ಶಿಖರವನ್ನು ಹೊಮದಿದೆ. ಇದು ಮೆಟ್ಟಿಲುಗಳಂತೆ ಕಾಣುತ್ತದೆ. ಇದು ಕೆಳಗಿನಿಂದ ಮೇಲಕ್ಕೆ ಹೋದಂತೆ ಸಣ್ಣದಾಗುತ್ತದೆ. ಇದು ಚಚ್ಚೌಕಾಗಿರುತ್ತದೆ. ಇದು ಸುಂದರವಾದ ಕೆತ್ತನೆಯಿಂದ ಕೂಡಿರುತ್ತದೆ. ಇದು ಮನಮೋಹಕವಾಗಿ ಕಾಣುತ್ತದೆ. ಶಿಖರದ ಸುತ್ತಲೂ ಕೋಷ್ಠಕಗಳು ಇದ್ದು ಅದರಲ್ಲಿ ಉಬ್ಬುಶಿಲ್ಪಗಳಿವೆ. ಇದು ಬಹು ಚೆನ್ನಾಗಿ ಕಾಣಿಸುತ್ತದೆ.

೩. ಬಾಣಂತಿ ದೇವಾಲಯ : ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪಶ್ಚಿಮಾಭಿಮುಖವಾಗಿದೆ. ಇದು ದ್ರಾವಿಡಶೈಲಿಯ[೫] ಶಿಖರವನ್ನು ಹೊಂದಿರುತ್ತದೆ. ಇದು ಅಧಿಷ್ಠಾನ ಗೋಡೆ ಶಿಖರವನ್ನು ಹೊಂದಿದೆ.

ಅಧಿಷ್ಠಾನ : ಅಧಿಷ್ಠಾನವು ಸುಂದರವಾಗಿದ್ದು ಇದು ಪಶ್ಚಿಮಾಭಿಮುಖವಾಗಿದೆ. ಇದು ಎತ್ತರವಾದ ಅದಿಷ್ಠಾನದಿಂದ ದೇವಾಲಯವು ನಿರ್ಮಾಣವಾಗಿದೆ. ಇದು ಯಾವುದೇ ರೀತಿಯ ಅಲಂಕೃತಗೊಂಡಿಲ್ಲ. ಇದು ದೇವಾಲಯದ ಆಕರ್ಷಣೆಯನ್ನು ಮಾಡುತ್ತದೆ.

ಗೋಡೆ : ಗೋಡೆಯು ಸಾದಾ ರೀತಿಯಲ್ಲಿ ನಿರ್ಮಿಸಿದ್ದಾರೆ. ಇದು ಮಹಾಕೂಟದಲ್ಲಿ ಒಂದು ವಿಶಿಷ್ಠವಾದ ದೇವಾಲಯವಾಗಿದೆ. ಇದು ಅಧಿಷ್ಠಾನದ ಮೇಲೆ ಕಟ್ಟಲ್ಪಟ್ಟಿದೆ. ಯಾವುದೇ ರೀತಿಯ ಶಿಲ್ಪಗಳು ಕಂಡು ಬರುವುದಿಲ್ಲ.

ಶಿಖರ : ಇದು ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದ್ದು ಬಹಳ ಮನೋಹರವಾಗಿ ಕಾಣುತ್ತದೆ. ಇದು ಮೆಟ್ಟಿಲುಗಳಂತೆ ಕಾಣುತ್ತದೆ. ಇದು ಕೆಳಗಿನಿಂದ ಮೇಲಕ್ಕೆ ಹೋದಂತೆ ಚಿಕ್ಕದಾಗುತ್ತ ಹೋಗುತ್ತದೆ. ಶಿಖರದ ಪಟ್ಟಿಕೆಗಳು ಕೆಳಗಿನಿಂದ ಮೇಲಕ್ಕೆ ಹೋದಂತೆ ಚಿಕ್ಕದಾಗುತ್ತದೆ.

೫.೨ ರೇಖಾನಾಗರ ಶೈಲಿ :

ಇದು ಔತ್ತರೇಯ ಮಾದರಿಯ ಶಿಖರ ವಿನ್ಯಾಸ ಇದರಲ್ಲಿ ಎದ್ದು ಕಾಣುವ ಮುಖ್ಯ ಅಂಶವೆಂದರೆ ಬಾಗಿದ ರೇಖೆಯ ಆಕಾರದ ಶಿಖರ ಮತ್ತು ಅದರ ಮೇಲೆ ಇರುವ ಕಳಶ ಈ ಶಿಖರ ವಿನ್ಯಾಸವು ಉತ್ತರ ಭಾರತದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಇಂತಹ ದೇವಾಲಯಗಳು ಮಹಾಕೂಟದಲ್ಲಿ ಕಾಣಿಸಿಕೊಳ್ಳುತ್ತವೆ.

೧. ಸಂಗಮೇಶ್ವರ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪೂರ್ವಾಭಿಮುಖವಾಗಿದೆ.ಇದು ರೇಖಾನಾಗರ ಶೈಲಿಯ ಶಿಖರವನ್ನು ಹೊಂದಿರುತ್ತದೆ. ಇದು ಅಧಿಷ್ಠಾನ ಬಿತ್ತಿ, ಕೋಷ್ಠಕಗಳು, ಗೋಡೆ, ಶಿಖರವನ್ನು ಹೊಂದಿರುತ್ತದೆ.

ಅಧಿಷ್ಠಾನ : ಇದು ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ. ಇದು ಪೂರ್ವಾಭಿಮುಖವಾಗಿದೆ. ಈ ದೇವಾಲಯದ ಕಟ್ಟಡ ಭಾರವನ್ನು ಹೋರುವ ನಿಟ್ಟಿನಲ್ಲಿ ನಿರ್ಮಾಣವಾಗಿದೆ. ಇದು ದೇವಾಲಯವನ್ನು ಆಕರ್ಷಕವಾಗಿ ಕಾಣುವಂತೆ ಅಧಿಷ್ಠಾನವು ಮಾಡುತ್ತದೆ.

ಬಿತ್ತಿ : ಈ ದೇವಾಲಯವು ಬಿತ್ತಿಚಿತ್ರವನ್ನು ಹೊಂದಿದ್ದು ಉಬ್ಬುಶಿಲ್ಪಗಳು ಅಂದರೆ ಯುದ್ಧ ಸನ್ನಿವೇಶವುಳ್ಳ ಶಿಲ್ಪಗಳನ್ನು ಹೊಂದಿದೆ. ಇದು ಇನ್ನಿತರ ಶಿಲ್ಪಗಳನ್ನು ಹೊಂದಿದೆ. ಬಿತ್ತಿ ಉಬ್ಬುಶಿಲ್ಪಗಳು ದೇವಾಲಯವನ್ನು ಹೊತ್ತುನಿಂತಂತೆ ಕಾಣುತ್ತದೆ.

ಗೋಡೆ : ಈ ದೇವಾಲಯದ ಗೋಡೆಯು ಬಹು ಸುಂದರವಾಗಲು ಕೋಷ್ಠಕಗಳು ಕಾರಣ ಎಂದು ಹೇಳಬಹುದು. ಈ ದೇವಾಲಯದಲ್ಲಿ ಕೋಷ್ಠಕಗಳನ್ನು ಮಾಡಲಾಗಿದೆ. ಅದರಲ್ಲಿ ಶಿಲ್ಪಗಳನ್ನು ಇಡಲಾಗಿದೆ. ಶಿಲ್ಪಗಳು ಮದ್ಯಮ ಗಾತ್ರದ್ದಾಗಿವೆ.

ಕೋಷ್ಠಕಗಳು : ಈ ದೇವಾಲಯ ಸುಂದರಮಯವಾಗಿ ಕಾಣಿಸಲಿಕ್ಕೆ ಕೋಷ್ಠಕಗಳ ಪ್ರಭಾವವು ಬಹಳ ಮುಖ್ಯವಾಗಿದೆ. ಕೋಷ್ಠಕಗಳಲ್ಲಿ ಮೂರ್ತಿಶಿಲ್ಪಗಳು ಇವೆ. ಅವು ಊರ್ದ್ವರೇತೇಶ್ವರ ಶಿಲ್ಪ, ಅರ್ಧನಾರೀಶ್ವರ ಶಿಲ್ಪ, ಹರಿಹರ ಶಿಲ್ಪಗಳು ಇವೆ.

ಶಿಖರ : ಶಿಖರವು ಬಹಳ ಸೊಗಸಾಗಿ ಕಾಣುತ್ತದೆ. ಇದು ರೇಖಾನಾಗರ ಶೈಲಿಯ ಶಿಖರವನ್ನು ಹೊಂದಿದೆ. ಇದನ್ನು ಸುತ್ತಲೂ ನೋಡಿದರೆ ಬಾಗಿದ ರೇಖೆಯಂತೆ ಕಾಣುತ್ತದೆ. ಕೆಳಗಿನಿಂದ ತುದಿಯವರೆಗೆ ನೋಡಿದರೆ ವಕ್ರ ರೇಖೆಯಂತೆ ಕಾಣುತ್ತದೆ. ಮೇಲೆ ಕಳಶವಿದೆ.

ಇದು ದುಂಡಾಗಿದೆ. ಈ ಶಿಖರಗಳಲ್ಲಿ ಕೆತ್ತನೆಯ ಕೆಲಸ ಸುಂದರವಾಗಿದೆ.

೨. ವಿರೂಪಾಕ್ಷೇಶ್ವರ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪೂರ್ವಾಭಿಮುಖವಾಗಿದೆ. ಇದು ರೇಖಾನಾಗರ ಶೈಲಿಯ[೭] ಶಿಖರವನ್ನು ಹೊಂದಿರುತ್ತದೆ. ಇದು ಅಧಿಷ್ಠಾನ ಬಿತ್ತಿ, ಗೋಡೆ, ಕೋಷ್ಠಕಗಳು ಶಿಖರವನ್ನು ಹೊಂದಿರುತ್ತದೆ.

ಅಧಿಷ್ಠಾನ : ಈ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ. ಇದು ಪೂರ್ವಾಭಿಮುಖವಾಗಿದೆ. ಇದು ದೇವಾಲಯದ ಭಾರವನ್ನು ಹೊರುವ ಭಾಗ ಅಧಿಷ್ಠಾನ ಎಂದು ತಿಳಿದು ಬರುತ್ತದೆ. ಇದು ದೇವಾಲಯವನ್ನು ಸುಂದರವಾಗಿ ಕಾಣುವಂತೆ ಮಾಡುತ್ತದೆ.

ಬಿತ್ತಿ : ಇದು ಸಮಪಾತದಲ್ಲಿದೆ. ಎಲ್ಲಾ ಭಾಗದಲ್ಲಿ ಹೆಚ್ಚಿನ ಶಿಲ್ಪ ಭಾರವನ್ನು ಹೊರಲು ಮದ್ಯದಲ್ಲಿ ಚಿಕ್ಕ ಉಬ್ಬುಶಿಲ್ಪಗಳು ಕಂಡು ಬರುತ್ತವೆ. ಇಲ್ಲಿ ಉಬ್ಬುಶಿಲ್ಪಗಳು ಕಾಮದಲ್ಲಿ ನಿರತರಾದ ಮಿತುನ ಶಿಲ್ಪಗಳು ಹೆಚ್ಚಿಗೆ ಕಂಡು ಬರುತ್ತದೆ.

ಗೋಡೆ : ಈ ದೇವಾಲಯವು ಸುಂದರವಾಗಿ ಕಾಣಲು ಅಲ್ಲಿ ಕೋಷ್ಠಕಗಳು ಕಾರಣ ಕೋಷ್ಠಕಗಳು ಕೆಲವು ಕಾಲಿ ಇದ್ದಂತೆ ಕೆತ್ತಿದ್ದಾರೆ. ಇನ್ನು ಕೆಲವು ಕೋಷ್ಠಕಗಳಲ್ಲಿ ಶಿಲ್ಪಗಳು ಇವೆ. ಅವು ಮದ್ಯಮ ಗಾತ್ರದ ಶಿಲ್ಪಗಳನ್ನು ಕೆತ್ತಿದ್ದಾರೆ.

ಕೋಷ್ಠಕಗಳು : ಈ ದೇವಾಲಯವು ಅಚ್ಚುಕಟ್ಟಾಗಿ ಕಾಣಲು ಕೋಷ್ಠಕಗಳ ಪ್ರಭಾವವು ಹೆಚ್ಚು ಎಂದು ನಮಗೆ ಕಂಡು ಬರುತ್ತದೆ. ಕೆಲವು ಕಾಲಿ ಕೋಷ್ಠಕಗಳು ಇವೆ. ಇನ್ನು ಕೆಲವು ಕೋಷ್ಠಕಗಳಲ್ಲಿ ಶಿಲ್ಪಗಳು ಇವೆ. ಅವು ಭೂವರಾಹಶಿಲ್ಪ, ವಿಷ್ಣುಶಿಲ್ಪ ಮತ್ತು ಉಗ್ರನರಸಿಂಹ ಶಿಲ್ಪಗಳು ಇವೆ.

ಶಿಖರ : ಈ ದೇವಾಲಯದ ಶಿಖರವು ರೇಖಾನಾಗರ ಶೈಲಿಯ ಶಿಖರವಾಗಿದೆ. ಇದನ್ನು ಸುತ್ತಲು ನೋಡಿದರೆ ಬಾಗಿದಂತೆ ಕಾಣುತ್ತದೆ. ಅಂದರೆ ಕೆಳಗಿನಿಂದ ನೋಡಿದರೆ ತುದಿಯವರೆಗೆ ವಕ್ರರೇಖೆಯಂತೆ ಕಾಣುತ್ತದೆ. ಈ ದೇವಾಲಯದ ಮೇಲೆ ಕಳಶವಿದೆ. ಇದು ದುಂಡಾಗಿದೆ. ಈ ಶಿಖರಗಳಲ್ಲಿ ಕೆತ್ತನೆಯ ಕೆಲಸ ಮನಮೋಹಕವಾಗಿದೆ.

೩. ಮಹಾಲಿಂಗ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪೂರ್ವಾಭಿಮುಖವಾಗಿದೆ. ಇದು ರೇಖಾನಾಗರ ಶೈಲಿಯ[೮] ಶಿಖರವನ್ನು ಹೊಂದಿದೆ. ಇದು ಅಧಿಷ್ಠಾನ, ಗೋಡೆ, ಕೋಷ್ಠಕಗಳು ಶಿಖರವನ್ನು ಹೊಂದಿರುತ್ತದೆ.

ಅಧಿಷ್ಠಾನ : ಈ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ. ಇದು ಪೂರ್ವಾಭಿಮುಖವಾಗಿದೆ. ಇದು ದೇವಾಲಯದ ಭಾರವನ್ನು ಹೋರುವ ಭಾಗ ಅಧಿಷ್ಠಾನ ಎಂದು ತಿಳಿದು ಬರುತ್ತದೆ. ಇದು ಸ್ವಲ್ಪ ಪ್ರಮಾಣದ ಅಧಿಷ್ಠಾನವನ್ನು ಹೊಂದಿದ ದೇವಾಲಯವಾಗಿದೆ.

ಗೋಡೆ : ಈ ಗೋಡೆಯು ಕೋಷ್ಠಕದ ಶಿಲ್ಪದಿಂದ ಸುಂದರವಾಗಿ ಕಾಣುತ್ತದೆ. ಈ ಗೋಡೆಗೆ ಕಲಾತ್ಮಕ ರಮ್ಯತೆ ಬಂದಿರುವುದು ಕೋಷ್ಠಕದಿಂದ ಎಂದು ನಮಗೆ ತಿಳಿದು ಬರುತ್ತದೆ. ಕೋಷ್ಠಕದ ಶಿಲ್ಪವನ್ನು ಬಿಟ್ಟರೆ ಇನ್ನಾವುದೆ ಶಿಲ್ಪಗಳು ಕಂಡು ಬರುವುದಿಲ್ಲ.

ಕೋಷ್ಠಕಗಳು : ಈ ದೇವಾಲಯವು ಅಚ್ಚುಕಟ್ಟಾಗಿ ಕಾಣಲು ಕೋಷ್ಠಕಗಳ ಶಿಲ್ಪಗಳು ಕಾರಣ ಎಂದು ತಿಳಿದುಬರುತ್ತದೆ. ಕೋಷ್ಠಕದ ಶಿಲ್ಪಗಳು ಪರಶುಧರಶಿವ, ವಿಷ್ಣುಶಿಲ್ಪ ಮತ್ತು ಊರ್ಧ್ವರೇತೇಶ್ವರ ಶಿಲ್ಪಗಳು ಕಂಡು ಬರುತ್ತವೆ.

ಶಿಖರ : ಈ ದೇವಾಲಯದ ಶಿಖರವು ರೇಖಾನಾಗರ ಶೈಲಿಯ ಶಿಖರವಾಗಿದೆ. ಈ ದೇವಾಲಯದ ಶಿಖರವು ಒಂದು ರೀತಿಯಲ್ಲಿ ಕಲೆಯ ಕೆತ್ತನೆಯು ಭಿನ್ನವಾಗಿದ್ದರೂ ಸಹಿತ ಅದು ರೇಖಾನಾಗರ ಶೈಲಿಯ ಶಿಖರ ಎಂದು ತಿಳಿದುಬರುತ್ತದೆ. ಅಂದರೆ ಇದು ಸುತ್ತಲು ನೋಡಿದರೆ ವಕ್ರರೇಖೆಯಂತೆ ಕಾಣುತ್ತದೆ.

೫.೩. ಕದಂಬನಾಗರ ಶೈಲಿ :

ಇದನ್ನು ಆಧುನಿಕರು ಕದಂಬ ನಾಗರಶಿಖರವೆಂದು ಗುರುತಿಸಿದ್ದಾರೆ. ಪ್ರಾಚೀನ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ಇದರ ಹೆಸರು ಫಂಸನಾ ಎಂದೇ ಇದೆ. ಫಂಸನಾಶಿಖರಶೈಲಿಯು ರೇಖಾನಾಗರ ಶಿಖರಶೈಲಿಯಿಂದ ಒಡಮೂಡಿದ ಇನ್ನೊಂದು ಪ್ರಬೇದವೆನ್ನಬಹುದು.[೯] ಮಹಾಕೂಟದ ವಿಷ್ಣು ಪುಷ್ಕರಣಿಯ ಪೂರ್ವದಂಡೆಯ ಮೇಲೆ ಪಶ್ಚಿಮಾಭಿಮುಖವಾಗಿರುವ ಪುಟ್ಟ ದೇವಾಲಯಗಳು ಫಂಸನಾಶಿಖರಗಳಿಂದ ಶೋಭಿತವಾಗಿದೆ.

೧. ಪಿನಾಕಪಾಣಿ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪಶ್ಚಿಮಾಭಿಮುಖವಾಗಿದೆ. ಇದು ಕದಂಬನಾಗರ ಶೈಲಿಯ[೧೦] ಶಿಖರವನ್ನು ಹೊಂದಿದೆ. ಇದು ಅಧಿಷ್ಠಾನ, ಗೋಡೆ, ಕೋಷ್ಠಕಗಳು ಶಿಖರವನ್ನು ಹೊಂದಿರುತ್ತದೆ.

ಅಧಿಷ್ಠಾನ : ಈ ದೇವಾಲಯವು ಅಧಿಷ್ಠಾನವನ್ನು ಹೊಂದಿದ್ದು ಅದರ ಮೇಲೆ ಕಟ್ಟಡವನ್ನು ಕಟ್ಟಲಾಗಿದೆ. ಇದು ಪಶ್ಚಿಮಾಭಿಮುಖವಾಗಿದೆ. ಇದು ದೇವಾಲಯದ ಭಾರವನ್ನು ಹೋರುವ ಭಾಗ ಅಧಿಷ್ಠಾನವಾಗಿದೆ.

ಗೋಡೆ : ಗೋಡೆಯು ಕೋಷ್ಠಕದ ಶಿಲ್ಪದಿಂದ ಸುಂದರವಾಗಿ ಕಾಣುತ್ತದೆ. ಈ ಗೋಡೆಯು ಸಾದಾ ರೀತಿಯಲ್ಲಿ ನಿರ್ಮಾಣವಾಗಿದೆ. ಇಲ್ಲಿ ಎರಡು ಕಡೆಗೆ ಇತ್ತೀಚಿನ ಗೋಡೆಗಳ ನಿರ್ಮಾಣದಲ್ಲಿ ಈ ದೇವಾಲಯದ ಗೋಡೆಯು ಮುಚ್ಚಿ ಹೋಗಿದೆ.

ಕೋಷ್ಠಕಗಳು : ಈ ದೇವಾಲಯವು ಒಂದು ರೀತಿಯಲ್ಲಿ ಅಚ್ಚುಕಟ್ಟಾಗಿ ಕಾಣಲು ಕೋಷ್ಠಕಗಳ ಶಿಲ್ಪಗಳ ಪ್ರಭಾವವು ಹೆಚ್ಚಾಗಿದೆ. ಈ ಕೋಷ್ಠಕದಲ್ಲಿ ಒಂದು ಗೋಡೆಗೆ ಮಾತ್ರ ಕಾಣಿಸುತ್ತದೆ. ಅದು ನಂದಿ ರಥಶಿಲ್ಪ ಮಾತ್ರ ಕಂಡು ಬರುತ್ತದೆ.

ಶಿಖರ : ಈ ದೇವಾಲಯದ ಶಿಖರವು ಕದಂಬನಾಗರ ಶೈಲಿಯ ಶಿಖರವಾಗಿದೆ. ಈ ದೇವಾಲಯದ ಶಿಖರವು ಒಂದು ರೀತಿಯಲ್ಲಿ ಭಿನ್ನವಾಗಿದೆ.ಈ ಶೈಲಿಯನ್ನು ಕದಂಬನಾಗರ ಶೈಲಿಯೆಂದು ತಿಳಿದು ಬರುತ್ತದೆ. ನಾಲ್ಕು ಮೂಲೆಗಳನ್ನು ಒಳಗೊಂಡು ಶಿಖರ ತುದಿಗೆ ಹೋದಂತೆ ಸಣ್ಣದಾಗುತ್ತದೆ.

೨. ಕಾಲಕಾಲೇಶ್ವರ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪೂರ್ವಾಭಿಮುಖವಾಗಿದೆ. ಇದು ಕದಂಬನಾಗರ ಶೈಲಿಯ[೧೧] ಶಿಖರವನ್ನು ಹೊಂದಿದೆ. ಇದು ಅಧಿಷ್ಠಾನ, ಗೋಡೆ, ಕೋಷ್ಟಕಗಳು, ಶಿಖರವನ್ನು ಹೊಂದಿದೆ.

ಅಧಿಷ್ಠಾನ : ಈ ದೇವಾಲಯವು ಅಧಿಷ್ಠಾನವನ್ನು ಹೊಂದಿದ್ದು ಇದು ಸುಂದರಮಯವಾಗಿ ಕಾಣಲು ಅಧಿಷ್ಠಾನವೇ ಇದಕ್ಕೆ ಕಾರಣವಾಗಿದೆ. ಇದು ಪೂರ್ವಾಭಿಮುಖವಾಗಿದೆ. ಇದರ ಮೇಲೆ ಈ ದೇವಾಲಯದ ಕಟ್ಟಡವನ್ನು ಕಟ್ಟಲಾಗಿದೆ. ಇದು ಭಾರವನ್ನು ಹೋರುವ ಭಾಗವಾಗಿರುತ್ತದೆ.

ಗೋಡೆ : ಗೋಡೆಯು ಕೋಷ್ಟಕಗಳಿಂದ ಕೂಡಿದೆ. ಇದು ಕೋಷ್ಠಕದಿಂದ ತುಂಬಾ ಸುಂದರವಾಗಿ ಕಾಣಿಸುತ್ತದೆ. ಈ ಕೋಷ್ಠಕದ ಶಿಲ್ಪದಿಂದ ಈ ದೇವಾಲಯದ ಗೋಡೆಗೆ ಒಂದು ರಮ್ಯತೆ ಬರುತ್ತದೆ. ಗೋಡೆಯ ಕೋಷ್ಠಕದ ಶಿಲ್ಪವನ್ನು ಬಿಟ್ಟರೆ ಇನ್ನಾವುದೆ ಗೋಡೆಯ ಕೋಷ್ಠಕದ ಶಿಲ್ಪವನ್ನು ಬಿಟ್ಟರೆ ಇನ್ನಾವುದೇ ಶಿಲ್ಪಗಳು ಕಂಡು ಬರುವುದಿಲ್ಲ.

ಕೋಷ್ಠಕಗಳು : ಈ ದೇವಾಲಯದ ಗೋಡೆಗೆ ತುಂಬಾ ಲಕ್ಷಣವಾಗಿ ಕಾಣಲು ಪ್ರೇರಣೆ ನೀಡಿವೆ. ಎಂದು ತಿಳಿದುಬರುತ್ತದೆ. ಕೋಷ್ಠಕಗಳ ಶಿಲ್ಪಗಳು ಗೋಡೆಗೆ ಶೋಭೆಯನ್ನು ತಂದಿವೆ. ಕೋಷ್ಠಕದ ಶಿಲ್ಪಗಳು ಹರಿಹರಶಿಲ್ಪ, ಅರ್ಧನಾರೀಶ್ವರ ಶಿಲ್ಪವನ್ನು ಹೊಂದಿದೆ.

ಶಿಖರ : ಈ ದೇವಾಲಯದ ಶಿಖರವು ಕದಂಬನಾಗರ ಶೈಲಿಯ ಶಿಖರವನ್ನು ಹೊಂದಿದೆ. ಈ ದೇವಾಲಯದ ಶಿಖರದ ಕೆತ್ತನೆಯು ಬಹಳ ಭಿನ್ನವಾಗಿದೆ. ಅಂದರೆ ಈ ದೇವಾಲಯವು ವಿಶೇಷ ರೀತಿಯಲ್ಲಿ ಶಿಖರವು ನಿರ್ಮಾಣವಾದರೂ ಕದಂಬನಾಗರ ಶೈಲಿಯ ಶಿಖರವನ್ನು ಹೊಂದಿದೆ. ನಾಲ್ಕು ಮೂರ್ತಿಗಳನ್ನು ಹೊಂದಿದ್ದು ಮೇಲಕ್ಕೆ ಹೋದಂತೆ ಸಣ್ಣದಾಗುತ್ತದೆ.ಮೇಲೆ ಕಳಶವು ಇರುವುದು ಕಂಡು ಬರುತ್ತದೆ.

೩. ವೀರಭದ್ರ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪೂರ್ವಾಭಿಮುಖವಾಗಿದೆ. ಇದು ಕದಂಬನಾಗರ ಶೈಲಿಯ[೧೨] ಶಿಖರವನ್ನು ಹೊಂದಿದೆ. ಇದು ಅಧಿಷ್ಠಾನ, ಗೋಡೆ, ಕೋಷ್ಠಕಗಳು ಶಿಖರವನ್ನು ಹೊಂದಿದೆ.

ಅಧಿಷ್ಠಾನ : ಈ ದೇವಾಲಯವು ಅದಿಷ್ಠಾನವನ್ನು ಸ್ವಲ್ಪಮಟ್ಟಿಗೆ ಹೊಂದಿದೆ. ಇದು ಪೂರ್ವಾಭಿಮುಖವಾಗಿದೆ. ಇದರ ಮೇಲೆ ಈ ದೇವಾಲಯದ ಕಟ್ಟಡವನ್ನು ಕಟ್ಟಲಾಗಿದೆ. ಇದು ಒಂದು ರೀತಿಯಲ್ಲಿ ವಿಶಿಷ್ಠವಾಗಿದೆ. ಎಂದು ತಿಳಿದು ಬರುತ್ತದೆ.

ಗೋಡೆ : ಈ ದೇವಾಲಯದ ಗೋಡೆಯು ಸಾದಾ ರೀತಿಯಿಂದ ನಿರ್ಮಾಣವಾಗಿದ್ದು ಇದಕ್ಕೆ ಈಗ ಸುಣ್ಣವನ್ನು ಹಚ್ಚಿದ್ದಾರೆ. ಈ ಗೋಡೆಯು ಯಾವ ಶಿಲ್ಪವನ್ನು, ಕೋಷ್ಠಕವನ್ನು ಹೊಂದಿರುವುದಿಲ್ಲ.

ಶಿಖರ : ಈ ದೇವಾಲಯದ ಒಂದು ವಿಶಿಷ್ಟ ರೀತಿಯಲ್ಲಿದೆ. ಆದರೂ ಇದು ಕದಂಬನಾಗರ ಶೈಲಿಯ ಶಿಖರವನ್ನು ಹೊಂದಿದೆ. ಇದರಲ್ಲಿ ನಾಲ್ಕು ಮೂಲೆಗಳಿವೆ. ಒಂದೇ ಸಮಾನಾಂತರ ಹೊಂದಿ ಮೇಲಕ್ಕೆ ಹೋದಂತೆ ಚಿಕ್ಕದಾಗುತ್ತದೆ. ಇಳಿಜಾರಿನ ಮುಖಾಂತರ ಕಟ್ಟಲಾಗಿದೆ. ಇದಕ್ಕೆ ಈಗ ಸುಣ್ಣವನ್ನು ಹಚ್ಚಿದ್ದಾರೆ.

೪. ಸೋಮೇಶ್ವರ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪೂರ್ವಾಭಿಮುಖವಾಗಿದೆ. ಇದು ಕದಂಬನಾಗರ ಶೈಲಿಯ[೧೩] ಶಿಖರವನ್ನು ಹೊಂದಿದೆ. ಇದು ಅಧಿಷ್ಠಾನ, ಗೋಡೆ, ಕೋಷ್ಟಕಗಳು, ಶಿಖರವನ್ನು ಹೊಂದಿದೆ.

ಅಧಿಷ್ಠಾನ : ಈ ದೇವಾಲಯುವು ಅದಿಷ್ಠಾನವನ್ನು ಹೊಂದಿದೆ. ಇದು ಪೂರ್ವಾಭಿಮುಖವಾಗಿದೆ. ಇದು ದೇವಾಲಯದ ಸೌಂದರ್ಯವನ್ನು ಹೆಚ್ಚಿಸಲು ನಿರ್ಮಿಸಿದ್ದಾರೆ. ಎಂದು ತಿಳಿದು ಬರುತ್ತದೆ. ಅಧಿಷ್ಠಾನದ ಮೇಲೆ ದೇವಾಲಯದ ಗೋಡೆಯನ್ನು ಕಟ್ಟಲಾಗಿದ್ದು ಅದು ಎಲ್ಲಾ ಭಾರವನ್ನು ಹೊರುವ ಭಾಗವಾಗಿದೆ.

ಗೋಡೆ : ಈ ದೇವಾಲಯದ ಗೋಡೆಯು ಸುಂದರಮಯವಾಗಿದೆ ಅಂದರೆ ದೇವಾಲಯದ ಸುತ್ತಲು ಗೋಡೆಯ ಮೇಲ್ಬಾಗದಲ್ಲಿ ಅಲಂಕೃತಗೊಂಡಿದೆ. ಆದ್ದರಿಂದ ಈ ದೇವಾಲಯವು ಒಂದು ವಿಶಿಷ್ಠತೆಯನ್ನು ಒಳಗೊಂಡಿದ್ದು ಕಂಡು ಬರರುತ್ತದೆ. ಈ ಗೋಡೆಗೆ ಯಾವುದೇ ಕೋಷ್ಠಕ ಮತ್ತು ಶಿಲ್ಪವನ್ನು ಹೊಂದಿರುವುದಿಲ್ಲ ಎಂದು ಕಂಡುಬರುತ್ತದೆ.

ಶಿಖರ : ಈ ಶಿಖರವು ಕದಂಬನಾಗರ ಶೈಲಿಯ ಶಿಖರವನ್ನು ಹೊಂದಿದೆ. ಶಿಖರದ ನಾಲ್ಕು ಬದಿಯಲ್ಲಿ ಅಲಂಕೃತ ಗೋಡೆ ಇದೆ. ಅಂದರೆ ಅದರಲ್ಲಿ ಗುಡಿಯ ಪ್ರತಿಯನ್ನು ಕೆತ್ತಲಾಗಿದೆ ಇದಕ್ಕೆ ಕಳಶವು ಕಂಡು ಬರುವುದಿಲ್ಲ. ಅಂದರೆ ಇದಕ್ಕೆ ಈಗ ಇಲ್ಲ ಎಂದು ಕಂಡು ಬರುತ್ತದೆ. ಕೆಳಗಿನಿಂದ ತುದಿಯವರೆಗೆ ಚಿಕ್ಕದಾಗುತ್ತಾ ಹೋಗುತ್ತದೆ. ಇದೆ ಈ ಶಿಖರದ ವೈಶಿಷ್ಟ್ಯ ಎನ್ನಬಹುದು.

೫. ಅಡಿಕೇಶ್ವರ ದೇವಾಲಯ :

ಈ ದೇವಾಲಯವು ಹಳೆ ಮಹಾಕೂಟದಲ್ಲಿದೆ. ಪೂರ್ವಾಭಿಮುಖವಾಗಿದೆ. ಇದು

ಕದಂಬನಾಗರ ಶೈಲಿಯ[೧೪] ಶಿಖರವನ್ನು ಹೊಂದಿದೆ. ಇದು ಅಧಿಷ್ಠಾನ, ಗೋಡೆ, ಕೋಷ್ಠಕಗಳು ಶಿಖರವನ್ನು ಹೊಂದಿದೆ.

ಅಧಿಷ್ಠಾನ : ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಅಧಿಷ್ಟಾನವನ್ನು ಹೊಂದಿದೆ. ಆದರೆ ಇದು ಸ್ವಲ್ಪ ಎತ್ತರವಾಗಿದೆ. ಇದು ಅಷ್ಟು ಸೌಂದರ್ಯಯುತ್ತವಾಗಿ ಕಾಣುತ್ತಿಲ್ಲ. ಇದರ ಮೇಲೆ ದೇವಾಲಯದ ಗೋಡೆಯನ್ನು ಕಟ್ಟಲಾಗಿದೆ.

ಗೋಡೆ : ಈ ದೇವಾಲಯದ ಗೋಡೆಯು ಸುಂದರಮಯವಾಗಿ ಇರುವುದಿಲ್ಲ. ಇದು ಸಾದಾ ರೀತಿಯಲ್ಲಿ ನಿರ್ಮಾಣವಾಗಿರುವ ದೇವಾಲಯವಾಗಿದೆ. ಗೋಡೆಗೆ ಕೋಷ್ಠಕಗಳು ಇಲ್ಲ ಮತ್ತು ಯಾವುದೇ ರೀತಿಯ ಶಿಲ್ಪಗಳು ಕಂಡು ಬರುವುದಿಲ್ಲ.

ಶಿಖರ : ಈ ದೇವಾಲಯದ ಶಿಖರವು ಕದಂಬನಾಗರ ಶೈಲಿಯ ಶಿಖರವಾಗಿದ್ದು, ಈ ದೇವಾಲಯದ ಶಿಖರವು ಒಂದೊಂದು ಪಟ್ಟಿಯು ಕೆಳಗಿನಿಂದ ಮೇಲಕ್ಕೆ ಹೋದಂತೆ ಸಣ್ಣದಾಗುತ್ತಾ ಹೋಗುತ್ತದೆ. ಈ ಶಿಖರದ ಮೇಲೆ ಕಳಶವು ಕಂಡು ಬರುವುದಿಲ್ಲ. ಇಲ್ಲಿ ಪಟ್ಟಿಕೆಗಳ ಮೇಲೆ ಯಾವುದೇ ಅಲಂಕಾರವು ಕಂಡು ಬರುವುದಿಲ್ಲ.

೬. ಅಗಸ್ತೇಶ್ವರ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಪಶ್ಚಿಮಾಭಿಮುಖವಾಗಿದೆ. ಇದು ಕದಂಬನಾಗರ ಶೈಲಿಯ[೧೫] ಶಿಖರವನ್ನು ಹೊಂದಿದೆ. ಇದು ಅಧಿಷ್ಠಾನ, ಗೋಡೆ, ಕೋಷ್ಠಕಗಳು ಶಿಖರವನ್ನು ಹೊಂದಿದೆ.

ಅದಿಷ್ಠಾನ : ಈ ದೇವಾಲಯವು ಅಧಿಷ್ಠಾನವನ್ನು ಹೊಂದಿದೆ. ಇದು ಪಶ್ಚಿಮಾಭಿಮುಖವಾಗಿದೆ. ಇದರ ಮೇಲೆ ಕಟ್ಟಡವನ್ನು ನಿರ್ಮಿಸಿದ್ದಾರೆ. ಇದು ಸಾಧಾರಣ ರೀತಿಯಲ್ಲಿ ಅಧಿಷ್ಠಾನವನ್ನು ಹೊಂದಿರುತ್ತದೆ. ಇದು ಒಂದು ರೀತಿಯಲ್ಲಿ ಭಿನ್ನವಾಗಿದೆ. ಇದರ ಮೇಲೆ ಗೋಡೆಯನ್ನು ನಿರ್ಮಿಸಿದ್ದಾರೆ.

ಗೋಡೆ : ಈ ದೇವಾಲಯದ ಗೋಡೆಯು ಸುಂದರಮಯವಾಗಿ ಇರುವುದಿಲ್ಲ. ಇದು ಸಾದಾ ರೀತಿಯಲ್ಲಿ ನಿರ್ಮಾಣವಾಗಿರುವ ದೇವಾಲಯವಾಗಿದೆ. ಗೋಡೆಗೆ ಕೋಷ್ಠಕಗಳು ಇಲ್ಲ ಮತ್ತು ಯಾವುದೇ ರೀತಿಯ ಶಿಲ್ಪಗಳು ಕಂಡು ಬರುವುದಿಲ್ಲ.

ಶಿಖರ : ಈ ದೇವಾಲಯದ ಶಿಖರವು ಕದಂಬನಾಗರ ಶೈಲಿಯ ಶಿಖರವನ್ನು ಹೊಂದಿರುತ್ತದೆ. ಈ ಶಿಖರವು ಪಟ್ಟಿಕೆಗಳು ಕೆಳಗಿನಿಂದ ಮೇಲಕ್ಕೆ ಹೋದಂತೆ ಚಿಕ್ಕದಾಗಿ ಕಾಣುತ್ತದೆ. ಇವುಗಳ ಮೇಲೆ ಗೋಪುರದ ಆಕಾರದ ಅಲಂಕಾರವನ್ನು ಕಾಣುತ್ತೇವೆ. ನಾಲ್ಕು ಮೂಲೆಗಳಲ್ಲಿ ಸಮತಟ್ಟಾದ ರೀತಿಯಲ್ಲಿ ಸರಳ ರೇಖೆಯಂತೆ ಕಾಣುತ್ತದೆ.

೭. ಕೋಟಿಲಿಂಗ ದೇವಾಲಯ :

ಈ ದೇವಾಲಯವು ಹೊಸ ಮಹಾಕೂಟದಲ್ಲಿದೆ. ಇದು ಪಶ್ಚಿಮಾಭಿಮುಖವಾಗಿದೆ.

ಇದು ಕದಂಬನಾಗರ ಶೈಲಿಯ[೧೬] ಶಿಖರವನ್ನು ಹೊಂದಿದೆ. ಇದು ಅಧಿಷ್ಠಾನ, ಗೋಡೆ, ಕೋಷ್ಠಕಗಳು, ಶಿಖರವನ್ನು ಹೊಂದಿದೆ.

ಅಧಿಷ್ಠಾನ : ಈ ದೇವಾಲಯವು ಸ್ವಲ್ಪಮಟ್ಟಿಗೆ ಅಧಿಷ್ಠಾನವನ್ನು ಹೊಂದಿದೆ. ಇದರ ಮೇಲೆ ದೇವಾಲಯದ ಗೋಡೆಯನ್ನು ನಿರ್ಮಿಸಿದ್ದಾರೆ. ಅದರ ಎಲ್ಲಾ ಭಾರವನ್ನು ಅಧಿಷ್ಠಾನವು ಹೋರುತ್ತದೆ. ಇದು ದೇವಾಲಯಕ್ಕೆ ಭದ್ರ ಬುನಾದಿಯಾಗಿರುತ್ತದೆ. ಇದು ಪಶ್ಚಿಮಾಭಿಮುಖವಾಗಿರುತ್ತದೆ.

ಗೋಡೆ : ಈ ದೇವಾಲಯದ ಗೋಡೆಯು ವಿಶಿಷ್ಟ ರೀತಿಯಲ್ಲಿ ನಿರ್ಮಾಣವಾಗಿದೆ.ಆದರೆ ಇದಕ್ಕೆ ಕಲ್ಲನ್ನು ನೇರವಾಗಿ ನಿಲ್ಲಿಸಿ ದೇವಾಲಯವನ್ನುಕಟ್ಟಿದಂತೆ ಕಾಣುತ್ತದೆ. ಇದರಲ್ಲಿ ಕೋಷ್ಠಕಗಳು ಇರುತ್ತವೆ. ಅದರಲ್ಲಿ ಶಿಲ್ಪಗಳನ್ನು ಹೊಂದಿವೆ.

ಶಿಖರ : ಈ ದೇವಾಲಯದ ಶಿಖರವು ಕದಂಬನಾಗರ ಶೈಲಿಯ ಶಿಖರವನ್ನು ಹೊಂದಿರುವುದು ಕಂಡುಬರುತ್ತದೆ. ಈ ಶಿಖರವು ವೈಶಿಷ್ಟ್ಯವು ಬೇರೆ ರೀತಿಯಲ್ಲಿ ಇದ್ದರೂ ಸಹಿತ ಇದು ಕದಂಬನಾಗರ ಶೈಲಿಯ ಶಿಖರವನ್ನು ಹೊಂದಿದೆ. ಇದು ಕೆಳಗಿನಿಂದ ಮೇಲಕ್ಕೆ ಹೋದಂತೆ ಸಣ್ಣದಾಗುತ್ತಾ ಹೋಗುತ್ತದೆ.

ಅಡಿಟಿಪ್ಪಣಿ

೧. ಶೀಲಾಕಾಂತ ಪತ್ತಾರ, ೨೦೦೦, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ ಕ.ವಿ.ವಿ.ಹಂಪಿ,ಪು–೨೫೮

೨. ಅದೇ, ಪು–೨೫೮

೩. ರಾಜಶೇಖರ ಎಸ್. ೧೯೯೬, ದಕ್ಷಿಣ ಭಾರತದ ವಾಸ್ತುಶಿಲ್ಪಕ್ಕೆ ಬಾದಾಮಿ ಚಾಲುಕ್ಯರ ಕೊಡುಗೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು–೫

೪. ಅದೇ, ಪು – ೫

೫. ಅದೇ, ಪು – ೫

೬. ಶೀಲಾಕಾಂತ ಪತ್ತಾರ, ಪೂರ್ವೋಕ್ತ, ಪು–೨೫೮

೭. ರಾಜಶೇಖರ ಎಸ್. ಪುರ್ವೋಕ್ತ, ಪು–೫

೮. ಅದೇ, ಪು – ೫

೯. ಶೀಲಾಕಾಂತ ಪತ್ತಾರ, ಪೂರ್ವೋಕ್ತ, ಪು–೨೫೯

೧೦. ರಾಜೇಂದ್ರಪ್ಪ ಎಸ್. ೧೯೯೯, ಬಿಜಾಪುರ ಜಿಲ್ಲೆ, ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ ಕರ್ನಾಟಕ ಸರ್ಕಾರ ಪು–೭೯

೧೧. ಅದೇ, ಪು–೭೯

೧೨. ಅದೇ, ಪು–೭೯

೧೩. ಅದೇ, ಪು–೭೯

೧೪. ಕನ್ನಡ ವಿಷಯ ವಿಶ್ವಕೋಶ –೨, ೨೦೦೭ ಮುದ್ರಕರು ಮಣಿಪಾಲ್ ಪ್ರೆಸ್, ಮಣಿಪಾಲ. ಪು–೬೨೩

೧೫. ರಾಜೇಂದ್ರಪ್ಪ ಎಸ್. (ಸಂ). ಪುರ್ವೋಕ್ತ, ಪು–೭೯

೧೬. ಅದೇ, ಪು – ೭೯

ಅಧ್ಯಾಯ : ಆರು
ಸಮಾರೋಪ

ಪುರಾತತ್ವ ಆಕರಗಳಾದ ಶಾಸನ ಮತ್ತು ದೇವಾಲಯಗಳು ಒಂದು ಪ್ರದೇಶವನ್ನು ಸಮಗ್ರವಾಗಿ ಅಧ್ಯಯನ ಮಾಡಲು ತುಂಬಾ ಸಹಾಯಕವಾಗುತ್ತವೆ. ಈ ಹಿನ್ನೆಲೆಯಲ್ಲಿ ನಾನು ಬಾದಾಮಿ ತಾಲೂಕಿನ ಶ್ರೀಕ್ಷೇತ್ರ ಮಹಾಕೂಟವನ್ನು ಕುರಿತು ಕ್ಷೇತ್ರಕಾರ್ಯದ ಸಹಾಯದಿಂದ ಶಾಸನಗಳು, ದೇವಾಲಯಗಳು ಮತ್ತು ಶಿಲ್ಪಗಳನ್ನು ಒಂದೆಡೆಗೆ ಸಂಗ್ರಹಿಸಿ ಅಲ್ಲಿನ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಿದ್ದು, ಇದಕ್ಕೆ ಸಂಬಂಧಿಸಿದಂತೆ ಅನೇಕ ಮಹತ್ವದ ಹೊಸ ಹೊಸ ವಿಚಾರಗಳು ನನಗೆ ಸ್ಪಷ್ಟವಾಗಿವೆ.

ಮಹಾಕೂಟದ ಪರಿಸರವನ್ನು ನಾವು ವೀಕ್ಷಣೆ ಮಾಡಿದರೆ ಇದು ಲಜ್ಜಾಗೌರಿಯ ಒಂದು ಸ್ವರೂಪವಾಗಿದೆ. ಇದರಂತೆ ಸಿದ್ದನಕೊಳ್ಳ ಮತ್ತು ನಾಗವಾಥನಕೊಳ್ಳಗಳು ಸಹ ಈ ಸ್ವರೂಪವನ್ನು ಹೊಂದಿದ ಪರಿಸರವಾಗಿದೆ. ಅಂದರೆ ನಾವು ಮಹಾಕೂಟಕ್ಕೆ ಹೋಗುವ ಪೂರ್ವದಲ್ಲಿ ಅದನ್ನು ದೂರದಿಂದ ವೀಕ್ಷಣೆ ಮಾಡಿದರೆ ಆ ಗುಡ್ಡಗಳು ಲಜ್ಜಾಗೌರಿಯ ಸ್ವರೂಪದ್ದಾಗಿವೆ. ಮಹಾಕೂಟವನ್ನು ಶಾಸನಗಳಲ್ಲಿ ಮಾಗುಡ, ಮಾಗುಂಡ, ಮಕುಟ, ಮಹಾಕೂಟವೆಂತಲೂ ಉಲ್ಲೇಖಗಳು ಕಂಡು ಬರುತ್ತವೆ. ಈ ಮಹಾಕೂಟವು ದಟ್ಟವಾದ ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ ಇದು ಶಿವ ಪಾರ್ವತಿಯರ ಸಂಗಮದಿಂದ ಇದಕ್ಕೆ ಮಹಾಕೂಟವೆಂತಲೂ ಕರೆಯುವರು. ಎಂದು ಪುರಾಣಗಳಲ್ಲಿ ಕಂಡು ಬರುತ್ತದೆ. ಈ ದಟ್ಟವಾದ ಪೌರಾಣಿಕ ಹಿನ್ನೆಲೆಯಿಂದಲೇ ಶ್ರೀಕ್ಷೇತ್ರ ಮಹಾಕೂಟದ ಹೆಸರು ಅಜರಾಮರವಾಗಿದೆ. ಅದೇ ರೀತಿ ಐತಿಹಾಸಿಕ ಹಿನ್ನೆಲೆಯಲ್ಲಿ ನೋಡಿದರೆ ಇಲ್ಲಿ ಪೂರ್ವ ಇತಿಹಾಸದ ನೆಲೆಗಳು ಸಹ ಕಂಡು ಬರುತ್ತವೆ. ಇದರಿಂದ ಇದು ಬಹಳ ಪ್ರಸಿದ್ದಿಯನ್ನು ಪಡೆದಿದೆ. ನಂತರದ ಇತಿಹಾಸವನ್ನು ನೋಡಿದರೆ ಇದು ಬಾದಾಮಿ ಚಾಲುಕ್ಯರ ರಾಜಧಾನಿ ಆಗಿತ್ತು, ಎಂಬುದಕ್ಕೆ ಕುರುಹುಗಳು ನಮಗೆ ದೊರೆತಿವೆ. ಮಹಾಕೂಟವನ್ನು ಕದಂಬರ ಕಾಲದಲ್ಲಿ ಪ್ರಚಲಿತಗೊಂಡು ಮುಂದೆ ಬಾದಾಮಿ ಚಾಲುಕ್ಯರ ಕಾಲದಲ್ಲಿ ಇದರ ಒಂದು ಬೆಳವಣಿಗೆ ಉತ್ತುಂಗ ಶಿಖರಕ್ಕೆ ಹೋಗಿರುವುದು ಕಂಡು ಬರುತ್ತದೆ. ನಂತರದ ಕಾಲದಲ್ಲಿ ಅಂದರೆ ಕಲ್ಯಾಣಿ ಚಾಲುಕ್ಯರು ಮತ್ತು ರಾಷ್ಟ್ರಕೂಟರು ಸ್ವಲ್ಪ ಮಟ್ಟಿಗೆ ಈ ಕ್ಷೇತ್ರಕ್ಕೆ ದಾನ ದತ್ತಿಗಳನ್ನು ನೀಡಿರುವುದು ಅಲ್ಲಿನ ಶಾಸನಗಳಿಂದ ತಿಳಿದು ಬರುತ್ತದೆ.

ಮಹಾಕೂಟ ಶಾಸನಗಳನ್ನು ನಾವು ನೋಡಿದಾಗ ಅಲ್ಲಿ ದೊರೆತಶಾಸನಗಳು ದಾನ ಶಾಸನಗಳೇ ಹೆಚ್ಚಿನ ಪ್ರಮಾಣದ್ದಾಗಿವೆ. ಅಂದರೆ ದೇವಾಲಯಕ್ಕೆ ಮಹಾಕೂಟೇಶ್ವರನಾಥನಿಗೆ ದಾನದತ್ತಿಗಳನ್ನು ಕೊಟ್ಟಿರುವುದನ್ನು ಉಲ್ಲೇಖವಾಗಿ ಶಾಸನವನ್ನು ಹಾಕಿರುವುದು ನಮಗೆ ತಿಳಿದು ಬರುತ್ತದೆ. ಮಹಾಕೂಟ ಸ್ತಂಭಶಾಸನವು ಇದು ದಾನಶಾಸನವು ಹೌದು ವೀರಶಾಸನವು ಹೌದು ಅಂದರೆ ಅದರಲ್ಲಿ ಎರಡು ಅಂಶಗಳು ಕೇಂದ್ರಿಕೃತವಾಗಿವೆ. ಎಂದು ನನ್ನ ಗಮನಕ್ಕೆ ಬರುತ್ತದೆ. ವೀರಶಾಸನಗಳು ಕೂಡಾ ಕಂಡು ಬರುತ್ತವೆ. ಅದೇ ರೀತಿ ಅಲ್ಲಿನ ಕಂಬದ

ಶಾಸನಗಳಲ್ಲಿ ವ್ಯಕ್ತಿಗಳ ಹೆಸರುಗಳು ಕಂಡು ಬರುತ್ತವೆ. ಅವು ಶಿಲ್ಪಿಗಾರರ ಹೆಸರು ಇರಬಹುದು ಎಂದು ಹೇಳಬಹುದು.

ಮಹಾಕೂಟದಲ್ಲಿ ಶೈವ ಮತ್ತು ವೈಷ್ಣವ ಧರ್ಮದ ದೇವಾಲಯಗಳಿವೆ. ಅವುಗಳನ್ನು ಗಮನಿಸಿದರೆ ಕದಂಬರ, ಬಾದಾಮಿ ಚಾಲುಕ್ಯರ, ಕಲ್ಯಾಣಿ ಚಾಲುಕ್ಯರ, ರಾಷ್ಟ್ರಕೂಟರ ಕಾಲದ ದೇವಾಲಯಗಳು ಇರಬಹುದೆಂದು ಅವುಗಳ ಲಕ್ಷಣಗಳಿಂದ ತಿಳಿಯುತ್ತದೆ. ಮಹಾಕೂಟದಲ್ಲಿ ಹೆಚ್ಚಿನ ಮಟ್ಟಿಗೆ ಬಾದಾಮಿ ಚಾಲುಕ್ಯರ ದೇವಾಲಯಗಳು ಕಂಡು ಬರುತ್ತವೆ. ಇದರಲ್ಲಿ ಹೆಚ್ಚಿನ ದೇವಾಲಯಗಳು· ಶಿವಲಿಂಗ ಇರುವುದರಿಂದ ಶೈವಧರ್ಮದ ದೇವಾಲಯಗಳೆಂದು ಗುರುತಿಸಬಹುದಾಗಿದೆ. ವೈಷ್ಣವ ಧರ್ಮದ ದೇವಾಲಯಗಳು ನಮಗೆ ಕಂಡು ಬರುವುದಿಲ್ಲ. ಆದರೆ ಅದರ ಕುರುಹುಗಳು ಕಂಡು ಬರುತ್ತವೆ. ಅಲ್ಲಿರುವ ವಿಷ್ಣು ಪುಷ್ಕರಣಿಯು ವೈಷ್ಣವ ಧರ್ಮದಾಗಿದೆ. ಮತ್ತು ಬಾನಂತಿ ದೇವಾಲಯದಿಂದ ಕೆಳಕ್ಕೆ ಬಂದರೆ ಅಲ್ಲಿ ಇಟ್ಟಿಗೆಗಳ ಕುರುಹುಗಳಿಂದಾಗಿ ಅಲ್ಲಿ ನರಸಿಂಹನಮಂದಿರ ಇದ್ದಿರಬಹುದು ಎಂದು ವಿದ್ವಾಂಸರು ತರ್ಕಿಸಿದ್ದಾರೆ. ಅದೇ ರೀತಿ ಅನೇಕ ದೇವಾಲಯಗಳಲ್ಲಿ ಉಗ್ರನರಸಿಂಹನ ಮೂರ್ತಿಗಳು, ವಿಷ್ಣು ಶಿಲ್ಪ ಮತ್ತು ವರಾಹ ಶಿಲ್ಪಗಳು ಕಂಡು ಬರುವುದರಿಂದ ಇದು ಶೈವ ಧರ್ಮಕ್ಕಿಂತ ಪೂರ್ವದಲ್ಲಿ ವೈಷ್ಣವ ಕ್ಷೇತ್ರವಾಗಿತ್ತು. ಎಂದು ಅರ್ಥೈಸಬಹುದು. ಅದೇ ರೀತಿ ಅಲ್ಲಿನ ಶಿಲ್ಪಗಳನ್ನು ನಾವು ಗಮನಿಸಿದಾಗ ಶೈವಶಿಲ್ಪಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆತಿರುವುದು ಕಂಡು ಬರುತ್ತದೆ. ಶಿವನು ಹಲವಾರು ರೂಪಗಳಲ್ಲಿ ಕಂಡು ಬರುತ್ತಾನೆ. ಇವುಗಳ ಜೊತೆಗೆ ಅಲ್ಲಿ ವೈಷ್ಣವ ಶಿಲ್ಪಗಳು ಕಂಡು ಬರುತ್ತವೆ. ಅವುಗಳೆಂದರೆ ವಿಷ್ಣು, ವರಾಹ, ಉಗ್ರನರಸಿಂಹ ಮತ್ತು ಗೋಪಾಲಕೃಷ್ಣನ ಶಿಲ್ಪಗಳು. ಅಲ್ಲಿ ತ್ರಿಮೂರ್ತಿಗಳ ವಿಶೇಷ ಶಿಲ್ಪ ಕಂಡು ಬರುತ್ತದೆ. ಅದು ಬ್ರಹ್ಮ, ವಿಷ್ಣು, ಮಹೇಶ್ವರನ ಮುಖವುಳ್ಳದ್ದಾಗಿದೆ.

ಮಹಾಕೂಟದಲ್ಲಿ ದ್ರಾವಿಡ ಶೈಲಿ, ರೇಖಾನಾಗರ ಶೈಲಿ ಮತ್ತು ಕದಂಬನಾಗರ ಶೈಲಿಯ ದೇವಾಲಯಗಳು ಕಂಡು ಬರುತ್ತವೆ. ಇವುಗಳಲ್ಲಿ ದೊಡ್ಡ ದೇವಾಲಯಗಳೆಂದರೆ ಮಲ್ಲಿಕಾರ್ಜುನ ಮತ್ತು ಮಹಾಕೂಟೇಶ್ವರ ದೇವಾಲಯಗಳು. ಇವು ದ್ರಾವಿಡ ಶೈಲಿಯ ಶಿಖರವನ್ನು ಹೊಂದಿವೆ. ಅದೇ ರೀತಿ ಇನ್ನುಳಿದ ದೇವಾಲಯಗಳು ಚಿಕ್ಕ ದೇವಾಲಯಗಳಾಗಿವೆ. ಅವುಗಳಲ್ಲಿ ಸಂಗಮೇಶ್ವರ, ಕಾಲಕಾಲೇಶ್ವರ, ಮಹಾಲಿಂಗ ದೇವಾಲಯ ಮುಂತಾದವುಗಳು. ಇವು ರೇಖಾನಾಗರ ಶೈಲಿಯ ಶಿಖರವನ್ನು ಹೊಂದಿವೆ. ವ್ಯಾಘ್ರಪಾದೇಶ ದೇವಾಲಯ, ಪಿನಾಕಾಪಾಣಿ ದೇವಾಲಯ ಮುಂತಾದವು. ಕದಂಬನಾಗರ ಶೈಲಿಯ ಶಿಖರವನ್ನು ಹೊಂದಿವೆ. ಕೆಲವು ದೇವಾಲಯಗಳಲ್ಲಿ ಶಿಖರಗಳು ಬಿದ್ದು ಹೋಗಿವೆ. ಅವು ಯಾವ ಶೈಲಿಯ ದೇವಾಲಯ ಎಂಬುದು ಸ್ಪಷ್ಟವಾಗಿ ನಮಗೆ ತಿಳಿದು ಬಂದಿಲ್ಲ.

ಒಟ್ಟಾರೆ ಇಲ್ಲಿನ ಶಾಸನಗಳು ಮತ್ತು ದೇವಾಲಯಗಳು ಪ್ರಾದೇಶಿಕವಾಗಿ ನಮ್ಮ

ಕನ್ನಡ ನಾಡಿನ ಇತಿಹಾಸದಲ್ಲಿ ಮಹಾಕೂಟದ ವಿವಿಧ ಮುಖಗಳ ಅಧ್ಯಯನಕ್ಕೆ ತನ್ನದೇ ಆದ ಕೊಡುಗೆಗಳನ್ನು ಸಲ್ಲಿಸುತ್ತಿರುವುದು ಈ ಅಧ್ಯಯನದಿಂದ ದೃಢಪಡುತ್ತದೆ. ಅಷ್ಟೇ ಅಲ್ಲದೇ ಮಹತ್ವದ ವಿಷಯಗಳನ್ನು ಹೊರಗೆಡುವ ಈ ಅವಶೇಷಗಳು ಇಂದು ವಿನಾಶದ ಅಂಚಿನಲ್ಲಿವೆ. ಕೆಲವು ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿ ಕಾಲಗರ್ಭದಲ್ಲಿ ಲೀನವಾಗುವುದು ಕಂಡು ಬರುತ್ತವೆ. ಈ ನಿಟ್ಟಿನಲ್ಲಿ ಇದಕ್ಕೆ ಸಂಬಂಧಿಸಿದ ಇಲಾಖೆಗಳು ಇವುಗಳ ಸಂರಕ್ಷಣೆಯಡೆಗೆ ಗಮನ ಹರಿಸುವುದು ತುಂಬಾ ಅವಶ್ಯವೆನಿಸುತ್ತದೆ. ಮಹಾಕೂಟವು ಶ್ರೀಕ್ಷೇತ್ರ ದಕ್ಷಿಣಕಾಶಿ ಮಹಾಕೂಟವೆಂದೂ ಹೆಸರು ಪಡೆದಿದ್ದರೂ ಸಹಿತ ಇಲ್ಲಿ ಹಲವಾರು ದೇವಾಲಯಗಳು ನಶಿಸಿ ಹೋಗುವ ಅಂಚಿನಲ್ಲಿವೆ. ಅವುಗಳ ಪುನರ್ ನಿರ್ಮಾಣವಾಗಬೇಕಾಗಿದೆ.

ಅನುಬಂಧ

* ಶಾಸನ ಪಾಠ
* ದೇವಾಲಯಗಳ ತಳ ವಿನ್ಯಾಸ ನಕ್ಷೆ
* ಗ್ರಂಥಋಣ
* ಛಾಯಾ ಚಿತ್ರಗಳು

ಶಾಸನ ಪಾಠ

೧. ಅಪ್ರಕಟಿತ ಶಾಸನಗಳು :

ಶಾಸನ ಸಂಖ್ಯೆ : ೧

ದೊರೆತ ಸ್ಥಳ : ಹೊಸ ಮಹಾಕೂಟದ ಪಶ್ಚಿಮ ಕೊಳ್ಳದಲ್ಲಿದೆ.

೧. ಬೋಗ್ಯ ಮಾನ್ಯ

ಶಾಸನ ಸಂಖ್ಯೆ : ೨

ದೊರೆತ ಸ್ಥಳ : ಮಹಾಕೂಟದಿಂದ ಬಾದಾಮಿಗೆ ಹೋಗುವ ಕಾಲುದಾರಿಯಲ್ಲಿದೆ.

೧. ಆನಂದ ಜೆಂಗನಾ

೨. ಬೊಪಾಲ್ಯೆ – – – ಅಡಿಜಗತಣ್ಣ

೩. ನಾದಂ ಸಿ – – – ಬೋಗರ

೪. ಪಾನ – – – ಮದನ

೫. ನು ಸಂದ – – – ವಪ

೬. ಸಿದ್ದರಸ – – – ನ

೭. ನೂರ ಶು – – – ಸ್ವರಂ

ಶಾಸನ ಸಂಖ್ಯೆ : ೩

ದೊರೆತ ಸ್ಥಳ : ಮಲ್ಲಿಕಾರ್ಜುನ ದೇವಾಲಯದ ಮುಖಮಂಟಪದ ಬಲಕಂಬದಲ್ಲಿದೆ.

೧. ಶ್ರೀ ನಾ (ತಾ) – – – ಮನ್

೨. ಪ್ರಕಟಿತ ಶಾಸನಗಳು :

ಶಾಸನ ಸಂಖ್ಯೆ : ೧

ದೊರೆತ ಸ್ಥಳ : ಮಹಾಕೂಟೇಶ್ವರ ದೇವಾಲಯದ ಮುಖಮಂಟಪದ ಬಲಭಾಗದ ಕಂಬದ ಮೇಲೆ

ಕಾಲ : ೮ನೇ ಶತಮಾನ

ಉಲ್ಲೇಖ : I. A. X. ೧೦೩

೧. ಸ್ವಸ್ತಿ ವಿಜಯಾದಿತ್ಯ ಸತ್ಯಾಶ್ರಯ ಶ್ರೀ ಪೃಥಿ ವೀ

೨. ವಲ್ಲವ ಮಹಾರಾಜಾಧಿರಾಜ ಪರಮೇಶ್ವರ ಭಟಾ

೩. ರರಾ ಪ್ರಾಣವಲ್ಲಭೆ ವಿನಾಪೊಡಿಗಳೆನ್ವೋರ್ರೂಳೆ

೪. ಯರ್ ಇವರಾ ಮುದು ತಾಯ್ವಿರ್ರೇವಮಞ್ಜಳ್ಗಳವರಾ

೫. ಮಗಳ್ದಿರ್ಕುಚಿಪೊಡಿಗಳವರಾ ವಗಳು ವಿನಾಪೊ

೬. ಡಿಗಳ ಇಲ್ಲಯೇ ಹಿರಣ್ಯಗರ್ಭಮಿಳ್ದು ಎಲ್ಲಾ ದಾನ

೭. ಮುಂ ಗೊಟ್ಟು ದೇವನಾ ಪೀಠಮಾನ್ನಿಕಿಸುವಿನೆ ಕಟ್ಟೆ ಬೆಳ್ಳಿಯಾ

೮. ಕೊಡೆಯಾನೇರಿಸಿಎ ಮಳ್ಗಲುಳ್ಳೆ ಅಷ್ಟಶತಂ ಕ್ಷೇ

೯. ತ್ರ(೦) ಗೊಟ್ಟೋರ್ ಇದಾನಳಿದೊನ್ವಱ್ಱ ಮಹಾಪಾತಕನಕ್ಕುಮ್

ಶಾಸನ ಸಂಖ್ಯೆ : ೨

ದೊರೆತ ಸ್ಥಳ : ಮಹಾಕೂಟೇಶ್ವರ ದೇವಾಲಯದ ಪ್ರವೇಶದಲ್ಲಿರುವ ಕಂಬದ ಮೇಲೆ

ಇಲ್ಲೇಖ : S. I. I X V. 276

೧. ಪುಟ್ಟಿ ಮಣಿನಾಗ ಕಂಭಂಗೆ ಜ

೨. ಗತುಂಗ ನೆಲದನ್ತಿ ದನ್ತೆಯ್ದೆ

೩. ಆಳ್ದೋ(ನಾ) ತಂಗಿಷ್ಟನಾ ಸಾಹ

೪. ಯನೆಳೆಚೆ ಮಹಾಸಾಮನ್ತ

೫. ನುತ್ತಮಗಳ್ಳಗೋಳ್ಪ ಪುಟ್ಟಿದೋಂ ಬೀರ

೬. ಗ್ರಹಾ ಕಡಿತಲೆ ವಿಡಿದು ಕಾಳೆಗದೊ

೭. (ಕಿಟ್ಟಿ) ಸಾಸಿರದೊ(೦) ಬಯಿಸುವೆ ಆವತ

೮. ಆಳುವರ ಇರಿದೊಳ್ಪ ಪ್ರಕಟಿಸಿ

೯. ದಾನ್

ಶಾಸನ ಸಂಖ್ಯೆ : ೩

ದೊರೆತ ಸ್ಥಳ : ಮಹಾಕೂಟೇಶ್ವರ ದೇವಾಲಯದ ಮಂಟಪದ ಬಲಭಾಗ ಕಂಬದ ಮೇಲೆ

ಉಲ್ಲೇಖ : S. I. I . X V. 460

೧. ಬೀರವುರ್ರೈಳ್ ಬ್ಬಯಿಗೊಟ್ಟಿಗರ

ಶಾಸನ ಸಂಖ್ಯೆ : ೪

ದೊರೆತ ಸ್ಥಳ : ಮಹಾಕೂಟೇಶ್ವರ ದೇವಾಲಯದ ಸಭಾಮಂಟಪ ಕಂಬ

ಕಾಲ : ಸುಮಾರು ಕ್ರಿ.ಶ ೮ನೇ ಶತಮಾನ

ಉಲ್ಲೇಖ : S. I I X V. 461

೧. ಅನ್ಯಸ್ತಾನೇ ಕೃಥಂ ಪಾಪಂ ಪುಣ್ಯ

೨. ಸ್ತಾನೇ ವಿಪಶ್ಯತಿ ಪುಣ್ಯಾಸ್ತಾನೇ ಕ್ರಿ

೩. ತಂ ಪಾಪಂ ವರ್ಜಲೇಪೇನ

೪. ತ್ರಿಷ್ಟತಿ

ಶಾಸನ ಸಂಖ್ಯೆ : ೫.

ದೊರೆತ ಸ್ಥಳ : ಮಹಾಕೂಟೇಶ್ವರ ದೇವಾಲಯದ ಸಭಾಮಂಟಪದ ಕಂಬ

ಕಾಲ : ಸುಮಾರು ಕ್ರಿ.ಶ ೧೦ನೇ ಶತಮಾನ

ಉಲ್ಲೇಖ : S. I. I XX 280

೧. ಸ್ವಸ್ತಿ ಸಮಧಿತಗ ಪಞ್ಚಮಹಾಶಬ್ದ ಮ

೨. ಹಾಸಾಮನ್ತ ರತ್ನಾವಳೋಕಂ ರಣಧುರ

೩. ಧವಳ ಕಟಕ ದಿವಾಕರನುಜ್ಜಳೆ ಚನ್ದ್ರಮ

೪. ಯಗಳಮಲ್ಲಂ ವೀರಗೋಪಾಳ ದ್ರೋಹರ ಸನ್ನಿ

೫. ಪಾತ ಕಿರಿಯ ಭೈರವ ಪ್ರತ್ಯನ್ತ ಮಾರ್ತ್ತ

೬. ಣ್ಡ ಸ್ರೀಮತ್ ಬಪ್ಪುವರಸರ್ಸಕನೃಪ ಕಾಳಾತೀತ

೭. ಸಂವತ್ಸರ ಶತಂಗಳೆಣ್ಬುನೂರ ಅಯಿವತ್ತ

೮. ಆರನೆಯ ಜಯ ಸಂವತ್ಸರದ ಕಾರ್ತ್ತಿ

೯. ಕ ಸುದ್ಧಪಞ್ಚಮಿಯುಂ ಬುಧವಾರದನ್ದು ಮ

೧೦. ಗುಂಡಿಕೆ ವನ್ದು ನನ್ದಿಕೇಸರಮುನೆಲ್ಲುಗೆ

೧೧. ಯುವಂ ಕೊಟ್ಟ ಸಿನ್ದರ ಮಗಳ್ನಿ

೧೨. ಜಾಬ್ಬೆಯ ಮಗ

ಶಾಸನ ಸಂಖ್ಯೆ : ೬.

ದೊರೆತ ಸ್ಥಳ : ಮಹಾಕೂಟೇಶ್ವರ ದೇವಾಲಯದ ಮತ್ತೊಂದು ಕಂಬದ ಮೇಲೆ

ಕಾಲ : ಸುಮಾರು ಕ್ರಿ.ಶ ೭ನೇ ಶತಮಾನ

ಉಲ್ಲೇಖ : S. I. I X X 276

೧. ಶ್ರೀ ನಾಳ್ಚಯನ್

ಶಾಸನ ಸಂಖ್ಯೆ : ೭.

ದೊರೆತ ಸ್ಥಳ : ವಿರೂಪಾಕ್ಷೇಶ್ವರ ದೇವಾಲಯದ ಕಂಬದ ಮೇಲೆ

ಕಾಲ : ಸುಮಾರು ಕ್ರಿ.ಶ ೮ನೇ ಶತಮಾನ

ಉಲ್ಲೇಖ : S. I. I XV. 478

೧. ಶ್ರೀ ಸಂಕ್ಕಡಿ ಪ್ರಗಿತ ಮಳಾಲ್ಪನ್

ಶಾಸನ ಸಂಖ್ಯೆ : ೮.

ದೊರೆತ ಸ್ಥಳ : ಚತುರ್ಮುಖ ಲಿಂಗ ಮಂಟಪದ ಕಂಬದ ಪೂರ್ವ ಮುಖದಲ್ಲಿ

ಕಾಲ : ಸುಮಾರು ಕ್ರಿ.ಶ ೭ನೇ ಶತಮಾನ

ಉಲ್ಲೇಖ : ಕ.ವಿ.ವಿ.ಹಂಪಿ ಶಾ ಸಂ-೯, ೪೦೬

೧. ಶ್ರೀ ವ್ಯಾಳಸಿಂಹ ಗುರುವ

ಶಾಸನ ಸಂಖ್ಯೆ : ೯

ದೊರೆತ ಸ್ಥಳ : ಚತುರ್ಮುಖ ಲಿಂಗ ಮಂಟಪದ ಕಂಬದ ಉತ್ತರ ಮುಖದಲ್ಲಿ

ಉಲ್ಲೇಖ : ಕ.ವಿ.ವಿ.ಹಂಪಿ. ಶಾ ಸಂ-೯, ೪೦೬

೧. ಪಪ್ಪಬ್ಬೆಲಭೆ ಮಾಡಿಸಿದ

ಶಾಸನ ಸಂಖ್ಯೆ : ೧೦

ದೊರೆತ ಸ್ಥಳ : ಚತುರ್ಮುಖ ಲಿಂಗ ಮಂಟಪದ ಕಂಬದ ಪಶ್ಚಿಮ ಮುಖದಲ್ಲಿ

ಉಲ್ಲೇಖ : ಕ.ವಿ.ವಿ.ಹಂಪಿ. ಶಾ. ಸಂ-೯, ೪೦೬

೧. ಶ್ರೀಕ ಇಸಾನಸಿವ

ಶಾಸನ ಸಂಖ್ಯೆ : ೧೧.

ದೊರೆತ ಸ್ಥಳ : ಹೊಡದ ಉತ್ತರ ದಂಡೆಯಲ್ಲಿ ಬಿದ್ದಿರುವ ಕಂಬದ ಮೇಲೆ

(ಈಗ ಇದು

ಕಾಲ : ಸುಮಾರು ಕ್ರಿ.ಶ ೮ನೇ ಶತಮಾನ

ಉಲ್ಲೇಖ : S. I. I XV. 479

೧. ಶ್ರೀ ಬಹುಗುಣ

ಶಾಸನ ಸಂಖ್ಯೆ : ೧೨.

ದೊರೆತ ಸ್ಥಳ : ಮಹಾಕೂಟ ಸ್ತಂಭಶಾಸನ

(ಈಗ ಇದು ಬಿಜಾಪುರ ವಸ್ತುಸಂಗ್ರಹಾಲಯದಲ್ಲಿದೆ)

ಕಾಲ : ಸುಮಾರು ಕ್ರಿ.ಶ ೬ನೇ ಶತಮಾನ

ಉಲ್ಲೇಖ : I. A . X1X PP 16-18

೧. ಓಮ್ ಸ್ವಸ್ತಿ !! ಮಾನವ್ಯಸ ಗೋತ್ರಾಣಾಂ ಅಪ್ರತಿಹತೋತ್ಸಾಹ ಬಲಮತಿ ಪ್ರತಾಪ ಶೌರ್ಯ್ಯ ಧೆರ್ಯ್ಯ ವೀರ್ಯ್ಯಾಣಾಂ ಮಾತಾ ಪತೃ ಪಾದಾನುದ್ಧ್ಯಾನಾಂ ಯಥಾವಿಧಿ ಹುತಾಗ್ನಿ

೨. ನಾಂ ಯಥಾ ಕಾಮಾರ್ಚ್ಚಿತಾರ್ಥಿನಾಂ ಅನೇಕ ಧರ್ಮ ಕರ್ಮಪುಣ್ಯ ಪ್ರಸವಾನಾಂ ಚಳಿಕ್ಯಾ ನಾಮನ್ವಯೇ ಸಮ್ಭೂತ ಶ್ರೀ ಜಯಸಿಂಘ ವಲ್ಲಭೇನ್ದ್ರೋ ನೃಪಃ ಮಘವಾನಿವ ಗುಣ ಸಮ್ಪನ್ನಃ! ರಿಧ್ಯಾ ವೈ

೩. ಶ್ರವಣೋಪಮಾನ: ತಸ್ಯಾನು ರೂಪಗುಣ ಶೌರ್ಯ್ಯ ರಿದ್ಧಿಸ್ತೇಜೋತ್ಸಾಹ ವಿಕ್ರಮ ಸ್ಮೃತಿಮತಿ ಪ್ರತಾಪ ನಯ ವಿನಯಾಧಾನ ಭೂತಾತ್ಸಮುತ್ಪನ್ನ! ಸುಗ್ರಿಹೀತ ನಾಮಧೇಯೋ

ರಣರಾಗಾಖ್ಯ ನೃಪಃಯೇನ ರ

೪. ಣಸ್ಯ ರಾಗೇನ ಜನಿತ: ಸ್ವಜನಾನುರಾಗೋ ದುರ್ಹೃದ(ನ್) ಮನಃ ಸನ್ತಾಪಶ್ಚತಸ್ಯ ಸದೃಶ ಗುಣಸ್ಯ ನೃಪತೇಃ ಪ್ರಿಯತನೂಜ ಸ್ಸತ್ಯಾಶ್ರಯ ಶ್ರೀ ಪೃಥಿವೀ ವಲ್ಲಭ ರಣವಿಕ್ರಮಾಙ್ಕ ನೃಪ : ಅಗ್ನಿಷ್ಠೋಮಾಗ್ನಿಚಯನ ವಾಜಪೇಯ ಬಹುಸುವರ್ಣ ಪೌ

೫. ಣ್ಡರೀಕಾಶ್ವಮೇಧಾವಭೃತ (ಥ) ಸ್ನಾನ ಪುಣ್ಯ ಪವಿತ್ರೀಕ್ರಿತ ಶರೀರ: ಹಿರಣ್ಯಗರ್ಭ ಸಂಭೂತ: ವೃದ್ಧೋಪದೇಶಗ್ರಾಹೀ ಬ್ರಹ್ಮಣ್ಯಸ್ಸತ್ಯ ವಾಗವಿಸಂವಾದಕ : ತಸ್ಯ ಧ(ರ್ಮ್ಮ) ರತ ಬುದ್ದೇರ್ವ್ವಾಸುದೇವ ಪ್ರತಿಮ ಪ್ರಭಾವಸ್ಯ ಬಲವಾಸುಭ್ರದ್ರೋಪಮು ಗುಣೌ ಸುತೌ ಸಮು

೬. ತ್ಪನ್ನೌ ಜೇಷ್ಠ ಶ್ರೇಷ್ಠ ಗುಣ ಸಮುದಯೋದಿತ ಪುರು ರಣಪರಾಕ್ರಮಾಙ್ಕ ಪ್ರಿಯ: ಸ್ವಬಾಹುಬಲ ಪರಾಕ್ರಮೋ ಪಾರ್ಜ್ಜಿತರಾಜ್ಯ ಸಂಪನ್ನ: ಪರರಾಜ ಮಣಿಮಕುಟ ಪರಿಘೃಷ್ಟಾಮೃಷ್ಟ ವಿಶಿಷ್ಟ ಚರಣ: ಬಹುಸುವರ್ಣ್ಣಾಗ್ನಿಷ್ಟೋ

೭. ಮಾವಭೃತ (ಥ) ಸ್ನಾನ ಪುಣ್ಯ ಪವಿತ್ರೀಕ್ರಿತ ಶರೀರ: ವಂಗಙ್ಗ ಕಳಿಙ್ಗ ವಟ್ಟೂರ ಮಗಧ ಮದ್ರಕ ಕೇರಳ ಗಙ್ಗ ಮೂಷಕ ಪಾಣ್ಡ್ಯ ದ್ರಮಿಳ ಚೋಳಿ ಯಾಳುಕ ವೈಜಯನ್ತ್ಯ ಪ್ರಭೃತಿಕನೇಕ ಪರನೃಪತಿ ಸಮೂಹಾವಮರ್ದ್ದಲಬ್ದಿ ವಿಜಯೇದಿ

೮. ವಮಧಿರೊಡೇ(ಢೇ) ಕನೀಯಾನು ರಣವಿಕ್ರಾನ್ತ ಮಂಗಲೇಶ ಶ್ರೀ ಪೃಥಿವೀ ವಲ್ಲಭೇನ್ದಾಖ್ಯ ನೃಪೋ ಬಭೂವ ದೇವದ್ವಜ ಗುರು ಚರಣಾಮಧ್ಯಾತ: ಚಳಿಕ್ಯ ವಜ್ರೌಮ್ಬರ ಪೂರ್ಣ್ಣಚನ್ದ್ರ: ನಯ ವಿನಯ ವಿಜ್ಞಾನ ದಾನ ದಯಾ ದಾಕ್ಷಿಣ್ಯ ಸಂಪನ್ನ: ಭಟ ಶಕುನ ಗ

೯. ಣಾಭಿಲಾಷಿತ ಯುವತಿ ಮಧುಕರಿ ಕುಲ ಕಲಿತ ಲಲಿತ ಗುಣ ಕುಸುಮಾಕುಲ ಪುಣ್ಯವರ ಸೂರ್ಯ್ಯಕಿರಣ ವಿಭೋಧಿತ ವಿಭ(ವ) ಶ್ರೀ ನಿಷ್ಠ ನೃ ಪತಿ ಕಮಲವನ: ಕಮಲವನ ಸೌಮ್ಯ(:) ರಿಪುಜನ ಮುಖ ಕುಲಭಯ ಜಾತ ಸಂಧಾಹ ತತ್ಪರಚರ ಸೇವರ್ಕಾಮಲ ನಯನ ಶೌರ್ಯ್ಯೋ

೧೦. ಗ್ರಹಸ್ತ ಪ್ರತಾಪ ವೀರ್ಯ್ಯ ವೇಗೋದ್ಧೃತ ನೃಪತಿಸಿಂಘಃ ಮನ್ತ್ರಚಾರ ದೂತ ಸನ್ಧಿಪಿಗ್ರಹ ಸ್ಥಾನ ಪ್ರಯಾಣ ಪಾರ್ಷ್ಣಿಗ್ರಹಣಮಣ್ಡಲಯಾತ್ರಾ ದುರ್ಗ್ಗಾವಿಧಾನ ಜಾನಪದ ಪೌರ ಮಾನ್ಯವಿಭಾಗ ಕುಶಲಃ ಕಿಮ್ಬಹೂನಾ ಮಹೇನ್ದ್ರ ಇವ ದುರ್ಧರ್ಷಃ ರಾಮ ಇವಾಪರಾಜಿತಃ ಶಿಬಿರೌಶೀನರ ಇವ ಪ್ರ.

೧೧. ದಾತಾರಃ ಯುಧಿಷ್ಠಿರ ಇವ ಸತ್ಯಸನ್ಧಃ ವಾಸುದೇವ ಶ್ರೀಮನ್ತಃ ಮಾನ್ಧಾತಾರ ಇವ ಕೀರ್ತ್ತಿ ಸಂಪನ್ನಃ ಧಿಯಾ ಬೃಹಸ್ಪತ್ಯುಶನ(ಃ) ಸಮ: ಮುದ್ರ ಇವ ಗಂಭೀರ: ಕ್ಷಮಯಾ ಪೃಥೀವೀಸಮ: ಕು ತಿಲಕ ದೂ(ಭೂ)ತಃ ಸಗುತ್ತರಾದಿಗ್ವಿಜಯಕ್ರಿತ ಬುದ್ಧಿರ್ಬುದ್ಧ ನೃಪಮವಜಿತ್ಯ ತ

೧೨ ಸ್ಯ ವಸುಮಶೇಷಮುಪಗೃಹ್ಯ ಭಾಗೀರಥೀ ಕೂಲೇ ಶಕ್ತಿ ಜಯಸ್ತಮ್ಬ ಬ

ನಿರೋಪಣೋತ್ಸುಕ್ಯೇನ ಮನಸಾ ಧರ್ಮ ಜಯಸ್ತಮ್ಬ ಶಕ್ತಿ: ಪ್ರಥಮತರಮೇವ ನಿರೋಪಯಿತ ವ್ಯೇತ್ಯವಥೃತ್ಯ ತದನುಕರಣ ಯೋಗ್ಯಭೂತಾಂ ಮದಯನ್ತೀಮಿವ ಮಹಾ ಪತಿವ್ರತಾಂ ಬತ್ತೂರ ಕುಲ ಲ


೧೩. ಲಾಮಭೂತಾಂ ನೈಕವಿದ ಧರ್ಮ್ಮಫಲ ಭಾಗ್ಯ ಪವಿತ್ರೀ ಕ್ರಿತ ಶರೀರಾಂ ಸ್ವಗುರು ಪತ್ನೀಂ ದುರ್ಲ್ಲಭನಾಮದೇಯಿನ್ದೇವೀ ಮಹೂಯ ಇದ(ಮ) ಮಧಿ (ಕಾ) ರಂ ಸಂಬೋಧಯತಿ ಕಲತ್ಸುರಿ ಗಣಸಂ ದೇವಗೃಹ ದೇವದ್ರೋಣ್ಯಾಂ (ಣ್ಯಾ) ಗತಮಿಮ(ದ) ಇಜ್ಞ ದ್ರವ್ಯಂ ಸ್ವದೇವದ್ರೋಣ್ಯಾಂ ಮಕುಟೇಶ

೧೪. ರನಾಥಸ್ಯಾಸ್ಮಾಕಂ ಪಿತ್ರಾ ಜೇಷ್ಠೇನ ಚೋಪದತ್ತಂ ಶ್ರೀಯಂಬಾಟಕ ತಿರ್ಮ್ಮರಿದ್ವೇನಸವೇದ್ವೇ ವೃಹಿಮುಖಗ್ರಾಮ ಕೆಸುವೊಳಲ ಕೆನ್ದೋರಮಾನ್ಯ ನನ್ದಿಗ್ರಾಮ ಪ್ರಭೃತಿ ದಶಗ್ರಾಮ ಪರಿಭೋಗೇನ(ಣ) ಸಮರ್ಪ್ಪಯದ್ವಮಿತಿ ತದುತ್ತರೋತ್ತರ ಪ್ರವರ್ದ್ಧಮಾನ ರಾಜ್ಯ ಪಞ್ಚ


೧೫. ವು ಶ್ರೀ ವರ್ಷೇ ಪ್ರವರ್ತ್ತಮಾನೇ ಸಿದ್ಧಾರ್ಥೇ ವೈಶಾಖ ಪೂರ್ಣ್ಣಮಾಸ್ಯಾಮಿಮಂ ಪ್ರತಿಷ್ಠಾಪಿತವಾನ್ ಉಕ್ತಞ್ಚ ಧರ್ಮಶಾಸ್ತ್ರೇಷು ಬಹುಭಿರ್ವ್ವಸುಧಾ ಭುಕ್ತಾರಾಜ್ಯಭಿಸ್ಸಗರಾದಿಭಿಃ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾಫಲಂ ಷಷ್ಟಿ ವರ್ಷ ಸಹಸ್ರಾಣಿ ಸ್ವರ್ಗ್ಗೇ ಮೋದತಿ ಭೂಮಿದ: ಆಚ್ಛೇ

೧೬. ತ್ತಾ ಚಾನುಮನ್ತಾ ಚ ತಾನ್ಯೇವ ನರಕೇ ವಸೇತ್


ದೇವಾಲಯಗಳ ತಳವಿನ್ಯಾಸ ನಕ್ಷೆ




ಮಹಾಕೂಟೇಶ್ವರ ದೇವಾಲಯದ ತಳವಿನ್ಯಾಸ




ಮಲ್ಲಿಕಾರ್ಜುನ ದೇವಾಲಯದ ತಳ ವಿನ್ಯಾಸ




ಭೈರವೇಶ್ವರ ದೇವಾಲಯದ ತಳವಿನ್ಯಾಸ




ಅಡಿಕೇಶ್ವರ ದೇವಾಲಯದ ತಳವಿನ್ಯಾಸ



ಸಂಗಮೇಶ್ವರ ದೇವಾಲಯದ ತಳವಿನ್ಯಾಸ



ವೀರಭದ್ರ ದೇವಾಲಯದ ತಳವಿನ್ಯಾಸ



ಹಳೆ ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ತಳವಿನ್ಯಾಸ

ಗ್ರಂಥಋಣ

ಲೇಖಕರು	ಪ್ರಕಟಣೆ	ಕೃತಿ/ಲೇಖನ ಮತ್ತು ಪ್ರಕಾಶಕರು
ಅಣ್ಣಿಗೇರಿ ಎ.ಎಂ.	೧೯೭೭	ಬಾದಾಮಿಯ ಶಿಲ್ಪಕಲೆ, ಭವಾನಿ ಪ್ರಕಾಶನ, ಧಾರವಾಡ - ೭
ಅಣ್ಣಿಗೇರಿ ಎ.ಎಂ	೧೯೬೦	ಪಟ್ಟದಕಲ್ಲು ಗುಡಿಗಳು, ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ
ಅಣ್ಣಿಗೇರಿ ಎ.ಎಂ ಮತ್ತು ಶೇಷಶಾಸ್ತ್ರಿ ಆರ್.	೨೦೦೭	ಶಾಸನಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು
ಅಪರ್ಣ ಕೂ.ಸ	೧೯೯೯	ದೇವಾಲಯ ವಾಸ್ತುಶಿಲ್ಪ. ಪರಿಚಯ, ಪ್ರಸಾರಾಂಗ, ಕ.ವಿ.ವಿ.ಹಂಪಿ
ಕರ್ನಾಟಕ ಸರ್ಕಾರ	೧೯೯೨	ಕರ್ನಾಟಕದ ಪರಂಪರೆ ಭಾಗ-೧. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು
ಕರವೀರಪ್ರಭು ಕ್ಯಾಲಕೊಂಡ	೧೯೯೭	ಚಾಲುಕ್ಯ ವಾಸ್ತುಶಿಲ್ಪ ವೈಭವ. ಪ್ರಸಾರಾಂಗ, ಕ.ವಿ.ವಿ.ಹಂಪಿ
ಕಲಬುರ್ಗಿ ಎಂ.ಎಂ	೧೯೯೫	ಮಾರ್ಗ-೨, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು

ಗೋಪಾಲರಾವ್ ಎಚ್.ಎಸ್. (ಸಂ)	೨೦೦೮	ಬಾದಾಮಿ ಚಾಲುಕ್ಯ ಶಿಲ್ಪಕಲೆ-೨ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
ಚಿದಾನಂದಮೂರ್ತಿ ಎಂ.	೨೦೦೨	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್‌ಹೌಸ್, ಬೆಂಗಳೂರು
ಚಿದಾನಂದಮೂರ್ತಿ ಎಂ.	೨೦೦೨	ಭಾಷಾ ವಿಜ್ಞಾನ ಮತ್ತು ಛಂದಸ್ಸು. ಸ್ವಪ್ನ ಬುಕ್ ಹೌಸ್, ಬೆಂಗಳೂರು
ಜಯದೇವಪ್ಪ ಜೈನಕೇರಿ	೨೦೦೬	ಪ್ರವಾಸ ಸಂಪದ, ಶಾಂತಲಾ ಪ್ರಕಾಶನ, ೮೭, ಶಾಂತಲಾ ಕುವೆಂಪು ರಸ್ತೆ, ಶಿವಮೊಗ್ಗ
ತಿಪ್ಪೇಸ್ವಾಮಿ ವಿ.ಆರ್.	೧೯೯೪	ಶಿಲ್ಪಕಲಾ ಪ್ರಪಂಚ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
ನಂಜುಂಡಸ್ವಾಮಿ ಎ.ಎಸ್.	೧೯೯೫	ಚಾಲುಕ್ಯರ ಇತಿಹಾಸ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ ಧಾರವಾಡ
ಪಂಚಮುಖಿ ಆರ್. ಎಸ್.	೧೯೬೭	ಕರ್ನಾಟಕದ ಇತಿಹಾಸ. ಪ್ರಸಾರಾಂಗ, ಕ.ವಿ.ವಿ.ಧಾರವಾಡ
ಪ್ರಭಾಕರ್ ಎಂ.ಎನ್	೨೦೦೦	ದೇವಾಲಯ ವಾಸ್ತು ಚಂದ್ರಿಕೆ ಕ.ವಿ.ವಿ.ಹಂಪಿ

ಪರಮಶಿವಮೂರ್ತಿ ಡಿ.ವಿ.	೧೯೯೯	ಕನ್ನಡ ಶಾಸನಶಿಲ್ಪ, ಪ್ರಸಾರಾಂಗ ಕ.ವಿ.ವಿ.ಹಂಪಿ
ಪರಶುರಾಮ ಎಸ್. ಗೋಡಿ	೨೦೦೬	ಚಲುಕ್ಯ ಮಾರ್ಗದರ್ಶಿ ಸಾಗರ ಪ್ರಕಾಶನ, ಐಹೊಳೆ
ಮುನಿಸ್ವಾಮಿ ಆರ್. (ಸಂ)	೧೯೯೯	ಬಿಜಾಪುರ ಜಿಲ್ಲೆ ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಮೆ!! ಅಭಿಯಾನ ಪ್ರಕಾಶನ, ಡಾ. ರಾಜಕುಮಾರ್ ರಸ್ತೆ ರಾಜಾಜಿನಗರ, ಬೆಂಗಳೂರು
ಮುರಿಗೆಪ್ಪ ಎ. (ಪ್ರ.ಸಂ)	೨೦೦೯	ಬಾದಾಮಿ ಚಾಲುಕ್ಯರು, ಪ್ರಸಾರಾಂಗ, ಕ.ವಿ.ವಿ.ಹಂಪಿ
ರಾಜಶೇಖರ ಎಸ್	೧೯೯೮	ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಶನ್ಸ್ ಧಾರವಾಡ
ರಾಜೇಂದ್ರಪ್ಪ ಎಸ್.	೧೯೯೮	ಬಿಜಾಪುರ ಜಿಲ್ಲೆ ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ, ಕರ್ನಾಟಕ ಸರ್ಕಾರ
ಶಂಕರಯ್ಯಶಾಸ್ತ್ರಿ ಹೊಸಗೌಡರ	೧೯೯೮	ಶ್ರೀ ಕ್ಷೇತ್ರ ಮಹಾಕೂಟ, ಶ್ರೀ ಸಂಗಮೇಶ ಆಫ್‌ಸೆಟ್ ಪ್ರಿಂಟರ್ಸ್, ಗುಳೇದಗುಡ್ಡ
ಶಿವತಾರಕ್ ಕೆ.ಬಿ.	೨೦೦೧	ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕ.ವಿ.ವಿ. ಹಂಪಿ

ಶಿವರಾಂ ಕಾರಂತ	೧೯೭೫	ಭಾರತೀಯ ಶಿಲ್ಪ, ಬೆಂಗಳೂರು ವಿ.ವಿ. ಬೆಂಗಳೂರು
ಶ್ರೀನಿವಾಸ ಪಾಡಿಗಾರ	೨೦೦೪	ಭಾರತೀಯ ಇತಿಹಾಸದ ಶಾಸನ ಆಕರಗಳು, ರಾಮಾಶ್ರಯ, ಪಬ್ಲಿಕೇಶನ್ಸ್, ಧಾರವಾಡ
ಶೀಲಾಕಾಂತ ಪತ್ತಾರ	೨೦೦೬	ಬಾದಾಮಿ ಸಾಂಸ್ಕೃತಿಕ ಅಧ್ಯಯನ ಪ್ರಸಾರಾಂಗ, ಕ.ವಿ.ವಿ. ಹಂಪಿ
ಶೀಲಾಕಾಂತ ಪತ್ತಾರ	೨೦೦೬	ಬಾದಾಮಿ, ಪ್ರಸಾರಾಂಗ, ಕ.ವಿ.ವಿ.ಹಂಪಿ
ಶೇಷಶಾಸ್ತ್ರಿ ಆರ್.	೨೦೦೫	ಶಾಸನ ಪರಿಚಯ, ಪ್ರಸಾರಾಂಗ ಬೆಂಗಳೂರು ವಿ.ವಿ. ಬೆಂಗಳೂರು
ಸೇಸುನಾಥನ್ ಐ.	೨೦೦೬	ಕರ್ನಾಟಕದ ಪ್ರವಾಸಿ ತಾಣಗಳು–೧. ಸಾದನಾ ಪ್ರಕಾಶನ, ಬೆಂಗಳೂರು
ಸೂರ್ಯನಾಥ ಯು. ಕಾಮಥ್	೧೯೮೬	ಕರ್ನಾಟಕರಾಜ್ಯ ಗ್ಯಾಸೇಟಿಯರ್–೩. ಮುದ್ರಕರು, ವೆ.ಬಿ. ಸುಬ್ಬಯ್ಯ ಆಂಡ್ ಸನ್ಸ್ ಎಂ.ಬಿ.ಡಿ.ಮುದ್ರಾಕ್ಷಕರ ಶಾಲೆ ೧೧೦೧ ಓ.ಟಿ.ಸಿ.ರಸ್ತೆ, ಬೆಂಗಳೂರು
ಜ್ಞಾನಾನಂದ ಜಿ.	೨೦೦೨	ಶಿಲ್ಪದರ್ಶಿ–೨, ಪ್ರಸಾರಾಂಗ, ಕ.ವಿ.ವಿ ಹಂಪಿ
	೧೯೮೨	ಚಾಲುಕ್ಯ ಶ್ರೀ, ಶ್ರೀ ಸಂಗಮೇಶ ಪ್ರಿಂಟಿಂಗ್ ಪ್ರೆಸ್, ಗುಳೇದಗುಡ್ಡ

ನಿಘಂಟುಗಳು

ಕನ್ನಡ ವಿಷಯ ವಿಶ್ವಕೋಶ–೨	೨೦೦೭	ಮುದ್ರಕರು, ಮಣಿಪಾಲ್ ಪ್ರೆಸ್ ಕಾರ್ನರ್,ಮಣಿಪಾಲ್
ಬಸವರಾದ್ಯಾ. ಎನ್ (ಪ್ರ.ಸಂ)	೨೦೦೧	ಸಂಕ್ಷಿಪ್ತ ಕನ್ನಡ ನಿಘಂಟು. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಶಾಸನ ಸಂಪುಟಗಳು

ಕಲಬುರ್ಗಿ ಎಂ.ಎಂ	೧೯೭೬	ಬಿಜಾಪುರ ಜಿಲ್ಲೆಯ ಶಾಸನಸೂಚಿ. ಪಠ್ಯಪುಸ್ತಕ ನಿರ್ದೇಶನಾಲಯ, ಕ.ವಿ.ವಿ.ಧಾರವಾಡ
ದೇವರಕೊಂಡಾರೆಡ್ಡಿ ಮತ್ತು ಇತರರು	೨೦೦೦	ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ –೯, ಪ್ರಸಾರಾಂಗ, ಕ.ವಿ.ವಿ. ಹಂಪಿ

Indian Antiguary, Vol-X

South Indian Inscription, Vol- XV

Epigraphia Indica, Vol-VIII

ಛಾಯಾ ಚಿತ್ರಗಳು



ಮಹಾಕೂಟೇಶ್ವರ ಲಿಂಗ



ಮಹಾಕೂಟೇಶ್ವರ ದೇವಾಲಯ







ಬಾನಂತಿ ದೇವಾಲಯ



ಸಂಗಮೇಶ್ವರ ದೇವಾಲಯ



ಹಳೆ ಮಹಾಕೂಟದ ಮಹಾಕೂಟೇಶ್ವರ ದೇವಾಲಯ



ಬೈರವೇಶ್ವರ ದೇವಾಲಯ







ಕಾಲಕಾಲೇಶ್ವರ ದೇವಾಲಯ



ವಿರೂಪಾಕ್ಷೇಶ್ವರ ದೇವಾಲಯ








ಚತುರ್ಮುಖ ಲಿಂಗ ಮಂಟಪ



ಮಹಾಕೂಟೇಶ್ವರ ದೇವಾಲಯದ ಮುಖಮಂಟಪದ ಬಲಕಂಬದ ಶಾಸನ







ಮಹಾಕೂಟೇಶ್ವರ ದೇವಾಲಯದ ಸಭಾಮಂಟಪದ ಎಡಕಂಬದ ಶಾಸನ



ಬ್ರಹ್ಮ ಮಹೇಶ್ವರ ವಿಷ್ಣು ಶಿಲ್ಪ







ಭೂವರಾಹ ಶಿಲ್ಪ



ವಿಷ್ಣು ಶಿಲ್ಪ







ಸ್ಥಾನಕಬ್ರಹ್ಮ ಶಿಲ್ಪ



ಅರ್ಧನಾರೀಶ್ವರ ಶಿಲ್ಪ







ಜಟಾಭಾರಶಿವ ಶಿಲ್ಪ



ಗಣಪತಿ ಶಿಲ್ಪ







ಉಗ್ರನರಸಿಂಹ ಶಿಲ್ಪ



ಲಕುಲೀಶ ಶಿಲ್ಪ







ಸರಸ್ವತಿದೇವಿ ಶಿಲ್ಪ




ವೀರಭದ್ರ ಶಿಲ್ಪ







ಗೋಪಾಲಕೃಷ್ಣ ಶಿಲ್ಪ



ಊರ್ಧ್ವರೇತೇಶ್ವರ ಶಿಲ್ಪ



